ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 39

ಸೆಪ್ಟೆಂಬರ್ 28, 2014

ಪುಟ 16 ರೂ. 10/-






ಖಾಯಮಾತಿ ಕೇಳಿ ರಾಜಧಾನಿಗೆ ದಾಂಗುಡಿ ಇಟ್ಟ ಪೌರ ಕಾರ್ಮಿಕರು



'ಸಮಾನ ಕೆಲಸಕ್ಕೆ ಸಮಾನ ವೇತನ ಬೇಕು' ಮಾರ್ದನಿಸಿದ ಗುತ್ತಿಗೆ ಕಾರ್ಮಿಕರ ಘೋಷಣೆ




ಉಪ ಚುನಾವಣೆ ಫಲಿತಾಂಶಗಳು: 'ಟುಸ್' ಎಂದ 'ಲವ್ ಜಿಹಾದ್' ಮಂತ್ರ-ತಂತ್ರ



ಡಿಸೆಂಬರ್ 5, ಕಾರ್ಮಿಕರ 'ರಾಷ್ಟ್ರೀಯ ಪ್ರತಿಭಟನಾ ದಿನ'- ಐಕ್ಯ ಚಳುವಳಿಗೆ ಕರೆ

ವೈದಿಕ ಧರ್ಮಕ್ಕೆ ವೇದಗಳಲ್ಲ, ಉಪನಿಷತ್ತುಗಳೇ ಅಸ್ತಿವಾರ

ನಮ್ಮ ದೇಶದಲ್ಲಿ ಹಿಂದೂಗಳೆಂದು ಗುರುತಿಸಿಕೊಳ್ಳುವವರೆಲ್ಲರೂ ವೈದಿಕ ಧರ್ಮವನ್ನು ಒಪ್ಪಿಕೊಂಡವರೆಂಬ ಭಾವನೆಯನ್ನು ಬಿತ್ತಲಾಗಿದೆ. ಹಿಂದೂ ಧರ್ಮ ಎಂಬುದು ಹಲವು ಪಂಥಗಳ ಸಮುಚ್ಚಯ. ಸ್ವತಂತ್ರ ಧರ್ಮಗಳಾಗಿ ಬೆಳೆಯಬಹುದಾಗಿದ್ದ ಪಂಥಗಳವು. ವೇದಗಳನ್ನು ಸ್ಪಷ್ಟವಾಗಿ ವಿರೋಧಿಸಿದ ಧಾರ್ಮಿಕ ಪಂಥಗಳು, ವೇದಗಳ ಬಗ್ಗೆ ಪ್ರಸ್ತಾಪವನ್ನೇ ಮಾಡದ ಪಂಥಗಳು, ವೇದಗಳಿಗೆ ಕೇವಲ ತುಟಿಯ ಹೊರಗಿನ ಗೌರವವನ್ನಷ್ಟೇ ಸಲ್ಲಿಸಿ ಮತ್ತೆ ತಮ್ಮಷ್ಟಕ್ಕೆ ತಾವೇ ಬೇರೆಯದೇ ಸಿದ್ಧಾಂತಗಳನ್ನು ರೂಪಿಸಿಕೊಂಡ ಪಂಥಗಳು ಈ ಎಲ್ಲವನ್ನೂ ಹಿಂದೂ ಎಂಬ ತೆಕ್ಕೆಯೊಳಗೆ ಎಳೆದು ನುಗ್ಗಾಗಿಸಿರುವುದನ್ನು ಕಾಣುತ್ತೇವೆ. ಈ ಎಲ್ಲ ಪಂಥಗಳಲ್ಲಿ ಗುರುತಿಸಿಕೊಳ್ಳುವ ಇಂದಿನ ಜನ ಸಮುದಾಯಗಳಿಗೆ ವೇದಗಳೇ ಹಿಂದೂ ಧರ್ಮದ ಪರಮ ಪವಿತ್ರ ಗ್ರಂಥಗಳು ಎಂದು ನಂಬಿಸಲಾಗುತ್ತಿದೆ. ಆ ಮೂಲಕ ವೇದಗಳ ಹೆಸರಿನಲ್ಲಿ ಬರೆದ ವೈದಿಕರೆಂದು ಕರೆದುಕೊಳ್ಳುವವರೆಲ್ಲರೂ ಬರೆದ ಗ್ರಂಥಗಳು, ಪುರಾಣಗಳು, ಮಾಡುವ ಅಸಂಖ್ಯ ಉಪನ್ಯಾಸಗಳು ಅವುಗಳಲ್ಲಿ ಬಿತ್ತುವ ವಿಚಾರ–ಅವಿಚಾರಗಳಿಗೆಲ್ಲಾ ವಿಧೇಯತೆಯನ್ನುದೊರಕಿಸಿಕೊಳ್ಳುವ ಜಾಣ ತಂತ್ರವಾಗಿದೆ. ಹಿಂದೂ ದರ್ಮದವರೆಂದು ಗುರುತಿಸಿಕೊಳ್ಳದ ಜೈನ, ಬೌದ್ಧ, ಸಿಖ್ ಧರ್ಮಗಳನ್ನೂ ಹಿಂದೂ ಎಂದು ಕರೆಯುವ, ಅವರನ್ನು ನಂಬಿಸುವ ಪ್ರಯತ್ನ ಪಡಲಾಗುತ್ತಿದೆ.




ಆದರೆ ವೈದಿಕ ಧರ್ಮವೆಂಬುದೇ ವೇದಗಳನ್ನು ನಿಜವಾಗಿ ಆಧಾರವಾಗಿಟ್ಟುಕೊಂಡಿದೆಯೆ? ಈ ಪ್ರಶ್ನೆ ಕಾಡುತ್ತದೆ. ವೈದಿಕ ಧರ್ಮದವರು ಅನುಸರಿಸುವ ತತ್ವ, ಗ್ರಂಥಗಳನ್ನು ಹಾಗೂ ವೇದಗಳಲ್ಲೇನಿದೆ ಎಂಬುದನ್ನು ತುಲನೆ ಮಾಡಿದರೆ ವಸ್ತುನಿಷ್ಠ ದೃಷ್ಟಿಯಿಂದ ಅಧ್ಯಯನ ಮಾಡುವವರೆಲ್ಲರಿಗೂ ಈ ಸಂದೇಹ ಬರುತ್ತದೆ. ವೇದಗಳಲ್ಲಿ ಪ್ರಧಾನವಾದ ಯಜ್ಞಗಳು ಇಂದು ಎಲ್ಲಿ ಹೋಗಿದ್ದಾವೆ? ಅಲ್ಲಿ ಒಂದೇ ಒಂದು ಉದಾಹರಣೆ ಇಲ್ಲದ ದೇವಾಲಯ ಪೂಜಾ ಪದ್ಧತಿ ಇಂದು ಎಲ್ಲ ಕಡೆಯೂ ಆವರಿಸಿದೆ. ವೇದಗಳಲ್ಲಿಯ ದೇವ ದೇವತೆಗಳಲ್ಲಿಯೂ ಬಹಳಷ್ಟು ಇಂದು ಕೇವಲ ಕಥೆಯಾಗಿ ನೆನಪಿಸಿಕೊಳ್ಳುವುದಕ್ಕೆ ಸೀಮಿತವಾಗಿವೆ. ಅಗ್ನಿ, ಸೂರ್ಯ, ನೀರು ಇಂತಹ ಜೀವಜಗತ್ತು ಇರುವವರೆಗೂ ಅವಶ್ಯವಾದ ಮತ್ತು ಜಗತ್ತಿನೆಲ್ಲ ಧರ್ಮಗಳೂ ವಿವಿಧ ರೂಪದಲ್ಲಿ ಗೌರವ ಸಲ್ಲಿಸಿರುವ ಭೌತಿಕ ವಸ್ತುಗಳು ಮಾತ್ರವೇ ವೇದಗಳಲ್ಲಿ ಉಲ್ಲೇಖವಾದ ದೇವತೆಗಳಾಗಿ ಪೂಜೆಗಳ ಗೌರವ ಪಡೆಯುತ್ತಿವೆ. ಹೀಗೆ ಹಿಂದೂ ಧರ್ಮಕ್ಕೆ ವೇದಗಳೇ ಆಧಾರ ಎಂಬುದು ಸಂಪೂರ್ಣವಾಗಿ ಸುಳ್ಳು ಪ್ರತಿಪಾದನೆ. ವೈದಿಕ ಎಂದು ಹೇಳಿಕೊಳ್ಳುವ ಧರ್ಮಕ್ಕೂ ಕೂಡ ವೇದಗಳು ಆಧಾರ ಎಂಬುದು ಸಂದೇಹಾಸ್ಪದವೇ.

ವೈದಿಕ ಧರ್ಮದ ಕಟ್ಟಾ ಅನುಯಾಯಿಯಾಗಿದ್ದ ಪ್ರೊ. ಹಿರಿಯಣ್ಣನವರ ವಿವರಣೆಯನ್ನೇ ನೋಡೋಣ. ಉಪನಿಷತ್ತುಗಳು

"ಸಂಪ್ರದಾಯದ ಪ್ರಕಾರ ಅವು ಬ್ರಾಹ್ಮಣಗಳ ಭಾಗವೇ ಆಗಿದ್ದರೂ ಮೂಲತಃ ಕರ್ಮಾಚರಣೆಯ (ಯಜ್ಞಯಾಗಾದಿಗಳನ್ನು ಕರ್ಮಾಚರಣೆಯೆಂದು ಕರೆಯುತ್ತಾರೆ.) ದೃಷ್ಟಿಗಿಂತ ಬೇರೆಯೇ ಆದ ಮನೋಭಾವವು ಅಲ್ಲಿದೆ. ಆ ದೃಷ್ಟಿಯು ಕರ್ಮಾಚರಣೆಗೆ ಹಗೆಯಾಗಿಯೇ ಇದೆ. ಎಲ್ಲ ಪ್ರಾಚೀನ ಉಪನಿಷತ್ತುಗಳೂ ಈ ವಿರೋಧವನ್ನು ಒಂದಲ್ಲ ಒಂದು ರೂಪದಲ್ಲಿ ಸೂಚಿಸಿದರೆ ಕೆಲವು ಉಪನಿಷತ್ತುಗಳಲ್ಲಿ ಅದು ವಾಚ್ಯವಾಗಿಯೆ ಇದೆ.– 'ಈ ಕರ್ಮಾಚರಣೆಗಳಿಂದ ನಿಜವಾದ ಶ್ರೇಯಸ್ಸನ್ನು ಸಾಧಿಸುತ್ತೇನೆ ಎಂದು ಭಾವಿಸುವವನು ಮೂರ್ಖ ಮೃತ್ಯು ಮತ್ತು ಮುಪ್ಪುಗಳು ಅವನನ್ನು ಬೆನ್ನು ಹತ್ತುವುದು ಖಚಿತ' ಎಂದು ಮುಂಡಕೋಪನಿಷತ್ತು ಹೇಳುತ್ತದೆ.


ಈ ವಿಭಜನೆಯನ್ನು ಹಲವು ರೀತಿಗಳಲ್ಲಿ ವೈದಿಕ ಧರ್ಮವೆಂದು ಕರೆದುಕೊಳ್ಳುವರ ಚರ್ಚೆಗಳಲ್ಲಿ ಕಾಣಬಹುದು. ವೈದಿಕ ಗ್ರಂಥಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸುತ್ತಾರೆ. ಯಜ್ಞ ಯಾಗಾದಿಗಳೇ ಪ್ರಧಾನವಾಗಿರುವುದು ಕರ್ಮಕಾಂಡವೆಂತಲೂ ಉಪನಿಷತ್ತುಗಳನ್ನು ಜ್ಞಾನಕಾಂಡವೆಂತಲೂ ಕರೆಯಲಾಗುತ್ತದೆ. ಇವುಗಳ ನಡುವೆ ಒಂದಕ್ಕೊಂದು ಸಂಬಂಧವೇ ಇಲ್ಲದಿದ್ದರೂ ಇದು ಒಂದೇ ಧರ್ಮದ ಎರಡು ಭಾಗವೆಂದು ಬಿಂಬಿಸಲಾಗಿದೆ. ಇದಕ್ಕೆ ಉಪನಿಷತ್ತುಗಳಲ್ಲಿರುವ ಅದರಲ್ಲಿಯೂ ಕೊನೆಗಾಲದ ಉಪನಿಷತ್ತುಗಳಲ್ಲಿ ಯಜ್ಞದ ಬಗೆಗಿನ ಕೆಲವು ಪ್ರಸ್ತಾಪಗಳನ್ನು ಮುಂದಿಟ್ಟು ಈ ಸಮರ್ಥನೆಯನ್ನು ಮಾಡಲಾಗುತ್ತದೆ. ಮತ್ತೂ ಇನ್ನೂ ಒಂದು ತಂತ್ರವೆಂದರೆ ಈ ಯಾಗಗಳಿಗೆ ವೇದ ಮತ್ತು ಬ್ರಾಹ್ಮಣಗಳಲ್ಲಿ ಪ್ರಸ್ತಾಪವೇ ಇಲ್ಲದ ಅರ್ಥಗಳನ್ನು ನೀಡಲಾಗಿದೆ. ಉದಾಹರಣೆಗೆ ಅಶ್ವಮೇಧ ಯಾಗದಲ್ಲಿ ಬಲಿ ಕೊಡಲಾಗುವ ಅಶ್ವವು ಇಡೀ ವಿಶ್ವವನ್ನೇ ಅರ್ಪಿಸುವುದಕ್ಕೆ ಸಂಕೇತ ಎಂಬುದು. ಆದರೆ ನಂತರ ಉಪನಿಷತ್ತುಗಳ ವಿಚಾರಗಳೆಂದು ಅನೇಕ ಧರ್ಮಾಚರ್ಯರುಗಳು ಯಾವ ವಿವರಣೆಗಳನ್ನು ಕೊಟ್ಟಿದ್ದಾರೆ, ಇದೇ ಉಪನಿಷತ್ತುಗಳ ಸಾರ ಎಂದು ಯಾವ ಗ್ರಂಥಗಳನ್ನು ರಚಿಸಲಾಗಿದೆ ಅವುಗಳಲ್ಲಿ ಯಜ್ಞ, ಯಾಗಾದಿಗಳನ್ನು ಬದಿಗೆ ಸರಿಸಲಾಗಿದೆ ಅಥವಾ ಪ್ರಸ್ತಾಪವೇ ಇಲ್ಲ. ಇದನ್ನು ಯಾವ ರೀತಿ ಸಮರ್ಥಿಸಿಕೊಳ್ಳುತ್ತಾರೆ?



ವೇದಾಂತದ ಪ್ರಸಿದ್ಧಿಯ ರಾಜಕೀಯ

ಉಪನಿಷತ್ತುಗಳನ್ನು ವೇದಗಳ ಅಂತ್ಯ ಭಾಗ ಆದ್ದರಿಂದಲೇ ಅವು ವೇದಾಂತ ಎಂದು ಕರೆಯಲಾಗಿದೆ. ಉಪನಿಷತ್ತುಗಳಿಂದ ಹುಟ್ಟಿದ ತತ್ವಜ್ಞಾನ ಎಂದು ಇದರ ಅರ್ಥ. ವೇದಾಂತವೆಂದು ನಮ್ಮ ದೇಶದಲ್ಲಿಯೂ ಪ್ರಸಿದ್ಧವಾಗಿರುವ ತತ್ವಶಾಸ್ತ್ರ ಬಹಳ ಪ್ರತಿಷ್ಠೆ ಗಳಿಸಿಕೊಂಡಿದೆ. ವಿದೇಶಗಳಲ್ಲಂತೂ ವೇದಾಂತವೊಂದೇ ಭಾರತದ ತತ್ವಜ್ಞಾನ ಎಂದೇ ಬಿಂಬಿತವಾಗಿದೆ. ಭಾರತದ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಾದ ಬೇರೇ ಯಾವುದೇ ತತ್ವಜ್ಞಾನವನ್ನು ಪರಿಗಣಿಸದಿರುವ ಅಥವಾ ಅದನ್ನೂ ವೇದಾಂತದ ಭಾಗವೆಂದು ಪರಿಗಣಿಸುವ ಪರಿಸ್ಥಿತಿ ಉಂಟಾಗಿದೆ.

ಭಾರತದಲ್ಲಿ ಇಷ್ಟೊಂದು ವೈವಿಧ್ಯಮಯ ತತ್ವಶಾಸ್ತ್ರ, ಷಡ್ದರ್ಶನಗಳು ಎಂದು ಪ್ರಚಲಿತವಾಗಿದ್ದರೂ ಇಂತಹ ಪರಿಸ್ಥಿತಿ ಬಂದದ್ದು ಹೇಗೆ? ಭಾರತಕ್ಕೆ ಬಂದ ವಸಾಹತುಶಾಹಿ ಆಡಳಿತಗಾರರ ಬಳಿ ಮೊದಲು ಯಾರು ಸೇವೆ ಸಲ್ಲಿಸಲು ಆರಂಭಿಸಿದರೋ ಅವರ ಧರ್ಮ, ಪದ್ಧತಿಗಳು ಅವರನ್ನು ಸೆಳೆದವು ಮತ್ತು ಅವರಿಗೆ ಪರಿಚಯವಾದವು. ಇಂತಹ ಕಾರಕೂನಿಕೆ ಮೊದಲಾದ ನೌಕರಿಗಳಿಂದ ದೂರ ಇದ್ದ ಜನರ ಧಾರ್ಮಿಕ ಆಚರಣೆಗಳು ಮತ್ತು ಚಿಂತನೆಗಳು, ಅವರ ಗ್ರಂಥಗಳು ಅವರಿಗೆ ಪರಿಚಯವಾಗಲಿಲ್ಲ. ಜೊತೆಗೆ ಈ ಇಂಗ್ಲಂಡಿನ ಮನಸ್ಸಿಗೆ ಯಾವುದು ಪ್ರಿಯವಾಯಿತು, ಏಕೆ ಎಂಬುದು ಮುಖ್ಯ ವಿಷಯವೇ. ಇವುಗಳ ಬಗ್ಗೆ ಆಸಕ್ತಿ ವಹಿಸಿ ಪ್ರಚಾರ ಮಾಡಿದರು. ಈ ಹಿಂದೆ–ಯೇ ಈ ಕಾಲಂನಲ್ಲಿ ವಿವರಿಸಿದಂತೆ ಯೂರೋಪಿನ ಅಂದಿನ ಇಂಗ್ಲೆಂಡು ಜರ್ಮನಿಗಳ ನಡುವಿನ ಮೇಲಾಟವೂ ಕೂಡ ಇದರಲ್ಲಿ ಪಾತ್ರ ವಹಿಸಿತು. ಅಂದು ಜರ್ಮನಿಯಲ್ಲಿ ಮ್ಯಾಕ್ಸ್ ಮುಲ್ಲರ್‌ರವರಿಂದ ಪ್ರಕಟಿಸಲ್ಪಟ್ಟ ವೇದಗಳು ಉಪನಿಷತ್‌ಗಳು ಮತ್ತು ಬೇರೇ ಗ್ರಂಥಗಳು ಅವು ಯೂರೋಪಿನಲ್ಲಿ ಹುಟ್ಟಿಸಿದ ಆಸಕ್ತಿ ಮತ್ತು ಚರ್ಚೆಗಳು ವೇದಗಳು, ವೇದಾಂತ ಮಾತ್ರವೇ ಭಾರತದ ಏಕೈಕ ತತ್ವಶಾಸ್ತ್ರ ಮತ್ತು ಧರ್ಮ ಎಂಬ ಹಿಂದು ಎಂದರೆ ವೇದಾಂತ ಎಂಬ ತಪ್ಪು ಕಲ್ಪನೆ ಮೂಡಲು ಕಾರಣವಾಯಿತು. ಕಾರಣ. ಅಂದು ಯೂರೋಪಿನಲ್ಲಿ ಬಂಡವಾಳಶಾಹಿ ಹಿಡಿತದಲ್ಲಿ ಮಾಡಿದ ಕೈಗಾರೀಕರಣ ಮತ್ತು ನಗರೀಕರಣದ ಧಾವಂತದಲ್ಲಿ, ಕಾರ್ಮಿಕರ ಶೋಷಣೆಯ ಜಾಲದಲ್ಲಿ ಬೇಸತ್ತ ಜನತೆಗೆ ಇಹದ ತಮ್ಮ ಸಂಕಟಗಳ ಬಗ್ಗೆ, ಅದ–ಕ್ಕೆ ಕಾರಣಗಳ ಬಗ್ಗೆ ಚಿಂತಿಸಲು ಬಿಡದೆ ಪರದ ಕಡೆಗೆಳೆಯಲು ಅಲ್ಲಿದ್ದ ಕ್ರಿಶ್ಚಿಯನ್ ಧರ್ಮದ ಎಲ್ಲಾ ಕವಲುಗಳೂ, ಪಂಥಗಳೂ ಸಾಕಾಗಲಿಲ್ಲ.



ಆಗ ಜಗತ್ತಿನ ಅತಿ ಪುರಾತನ ಗ್ರಂಥಗಳು ಮತ್ತು ಪೌರ್ವಾತ್ಯ ಎಂಬ ಹೆಗ್ಗಳಿಕೆಯೊಡನೆ ಸಿಕ್ಕಿದ ವೇದಗಳು ಅವುಗಳ ಜೊತೆಗಿನ ಎಲ್ಲವನ್ನೂ ಜಾಗ–ಟೆ ಹೊಡೆದು, ಶಂಖ ಬಾರಿಸಿ ಯೂರೋಪಿಗೆ ಸಾರಿದರು. ಅದೆಷ್ಟೋ ಜನ ಪ್ರಸಿದ್ಧ ಕವಿಗಳು, ಇತರ ಬರಹಗಾರರು, ತತ್ವಶಾಸ್ತ್ರಜ್ಞರು ಭಾರತದ ಈ ಅತಿ ಹಳೆಯ ಆದರೆ ಹೊಚ್ಚ ಹೊಸ ಗ್ರಂಥಗಳಿಂದ ಪ್ರಭಾವಿತರಾದರು. ಅದು ನಂತರ ಅಮೇರಿಕಕ್ಕೂ ಹಬ್ಬಿತು. ಇಂತಹದ್ದೊಂದು ಸಾಂಸ್ಕೃತಿಕ ರಾಜ–ಕಾರಣದ ಭಾಗವಾಗಿಯೇ ರವೀಂದ್ರನಾಥ ಠಾಕೂರರ ಕಾವ್ಯ ಯೂರೋಪಿನ ಸಾಹಿತಿಗಳ ನಡುವೆ ಜನಪ್ರಿಯವಾದದ್ದು ಮತ್ತು ನೊಬೆಲ್ ಬಹುಮಾನ ದೊರೆತದ್ದು ಎಂಬುದೊಂದು ಉಪಕಥೆ. ಯೂರೋಪಿನಲ್ಲಿ ಪ್ರಸಿದ್ಧಿ ಪಡೆದ ಮೇಲೇ ಕೇಳಬೇಕೆ!! ಅಂದಿನ ಭಾರತದ ಬುದ್ಧಿಜೀವಿಗಳೂ ಅದೇ ರಾಗ ಹಾಡು ಆರಂಭಿಸಿದರು. ಮೊದಲಿಗೆ ಆಧುನಿಕ ಶಿಕ್ಷಣ ಪಡೆದವರಲ್ಲಿ ಕೂಡ ಬಹುಭಾಗ ವೇದಾಂತ ಪ್ರಿಯರೇ ಆಗಿದ್ದರಲ್ಲವೇ? ಆದ್ದರಿಂದ ಇತರ ದರ್ಶನಗಳನ್ನು ಬದಿಗೆ ಸರಿಸಿ ವೇದಾಂತವೇ ವಿಜೃಂಭಿಸಿತು. ಇದಕ್ಕೆ ಅಸ್ತಿವಾರವನ್ನು ಶಂಕರರು ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿಯೇ ಹಾಕಿದ್ದರು ಎಂಬುದು ಮತ್ತೊಂದು ಮುಂದೆ ವಿವರಿಸಲಾಗುವ ವಿಷಯ.

ಈ ಎಲ್ಲಾ ಹಿನ್ನೆಲೆಯಲ್ಲಿ ರಾಮಕೃಷ್ಣರು ಮತ್ತು ವಿವೇಕಾನಂದರು ಎಲ್ಲಾ ಧರ್ಮಗಳು ಮತ್ತು ಸಿದ್ಧಾಂತಗಳ ಬಗ್ಗೆ ಅಧ್ಯಯನ ಮಾಡಿದರೂ ಮತ್ತು ವೇದಾಂತವನ್ನೇ ಹಿಂದಿನ ಕಂದಾಚಾರಿಗಳಿಗಿಂತ ಭಿನ್ನವಾಗಿ ಅರ್ಥೈಸಿದರೂ ಶಂಕರರ ಅದ್ವೈತವನ್ನೇ ತಿರುವು ಮುರುವು ಮಾಡಿದರೂ ಕೂಡ ವೇದಾಂತದ ಹೆಸರೇ ಅದನ್ನು ವಿಜೃಂಭಿಸಿತು.

ಹಲವು ಸಿದ್ಧಾಂತಗಳ ಆಗರ ಉಪನಿಷತ್ತುಗಳು

ವೇದಗಳ ತಿರುಳನ್ನೇ ಮರೆಸಿ ವೇದದ ಹೆಸರನ್ನು ಮಾತ್ರ ಬಳಸುತ್ತಿರುವಂತೆ ಉಪನಿಷತ್ತುಗಳ ವಿಷಯದಲ್ಲಿಯೂ ಆಗಿದೆ. ಉಪನಿಷತ್ತು ಹಲವು ವೈವಿಧ್ಯಮಯ ಚಿಂತನೆಗಳ ಆಗರ. ಇದನ್ನು ಅನೇಕರು ಒಪ್ಪುತ್ತಾರೆ.

ರಾಮಕೃಷ್ಣ ಆಶ್ರಮ ಪ್ರಕಟಿಸಿದ 'ಉಪನಿಷತ್ ಭಾವಧಾರೆ'ಯಲ್ಲಿ ಸೋಮನಾಥಾನಂದರು ಹೇಳುತ್ತಾರೆ : ಉಪನಿಷತ್ತಿನಲ್ಲಿ ಯವುದೋ ಒಂದು ಸಿದ್ಧಾಂತವಲ್ಲ ಇರುವುದು. ಹಲವು ಸಿದ್ಧಾಂತಗಳಿಗೆ ತೌರು ಮನೆ ಇದು. ಇಲ್ಲಿ ಯಾವುದೋ ಒಂದು ವ್ಯಕ್ತಿಯಲ್ಲ ಇರುವುದು. ಹಲವು ಮಹಿಮೋನ್ನತರ ಶ್ರೇಷ್ಠತಮ ಭಾವನೆಯ ಗೊಂಚಲುಗಳಿವೆ.

ಪ್ರೊ. ಹಿರಿಯಣ್ಣನವರು ಈ ಬಗ್ಗೆ ಹೀಗೆ ಹೇಳುತ್ತಾರೆ :

"ವಿವೇಚಿಸಬೇಕಾದ ಮೊದಲನೆಯ ವಿಚಾರವೆಂದರೆ ಎಲ್ಲ ಉಪನಿಷತ್ತುಗಳೂ ಕೂಡ ಒಂದೇ ಸಿದ್ಧಾಂತವನ್ನು ಬೋಧಿಸುತ್ತವೆಯೆ ಇಲ್ಲವೇ ಎಂಬುದು. ಭಾರತೀಯ ವ್ಯಾಖ್ಯಾನಕಾರರು ಅವು ಹಾಗೆ ಒಂದೇ ಸಿದ್ಧಾಂತವನ್ನು ಬೋಧಿಸುತ್ತವೆ ಎಂಬ ಅಭಿಪ್ರಾಯವನ್ನೇ ಉದ್ದಕ್ಕೂ ತಳೆಯುತ್ತಾ ಬಂದಿದ್ದಾರೆ."

"ವೇದಾಂತದ ಯಾವುದೇ ಶಾಖೆಗೂ ಅಂಟಿಕೊಳ್ಳದ ಆಧುನಿಕ ವಿದ್ಯಾರ್ಥಿಯು ಉಪನಿಷತ್ತುಗಳಲ್ಲಿರುವುದು ಎರಡೋ ಮೂರೋ ವಿರುದ್ಧ ದೃಷ್ಟಿಗಳಲ್ಲ, ಆದರೆ ಹಲವು ಎಂದು ಭಾವಿಸದೆ ಗತ್ಯಂತರವಿಲ್ಲ."

ಭಾರತದ ಧಾರ್ಮಿಕ ಪಂಥಗಳ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಭಂಡಾರ್ಕರ್ ಹೀಗೆ ಹೇಳುತ್ತಾರೆ : ಋಗ್ವೇದ ಸಂಹಿತೆಯ ಹಾಗೆಯೇ ಉಪನಿಷತ್ತುಗಳು ಸಹ ಸಂಕಲನಗಳಾಗಿರುವುದರಿಂದ ಅವುಗಳ ಒಂದಲ್ಲ ಹಲವಾರು ಪದ್ಧತಿಗಳನ್ನು ಬೋಧಿಸುತ್ತವೆ.

ಮತ್ತೊಬ್ಬ ವಿದ್ವಾಂಸ ಬರುವಾರವರು ಉಪನಿಷತ್ತುಗಳಲ್ಲಿ ಯಾವುದೇ ಒಂದು ಏಕರೂಪದ ತತ್ವಜ್ಞಾನವನ್ನು ಹುಡುಕುವುದರ ಬದಲು ಅರಣ್ಯಕಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ ನಿಜವಾಗಿ ಕಂಡುಬರುವಂತಹ ವಿಭಿನ್ನ ದಾರ್ಶನಿಕ ದೃಷ್ಟಿಕೋನಗಳನ್ನು ಆಯ್ದು ಪುನರ್ರಚಿಸಿಕೊಳ್ಳುತ್ತಾರೆ. ಅವರ ಪ್ರಕಾರ ಏಳು ಮುಖ್ಯ ತತ್ವಜ್ಞಾನದ ಧಾರೆಗಳು ಅಲ್ಲಿ ಕಾಣುತ್ತವೆ. ಈ ಉಪನಿಷತ್ತುಗಳಲ್ಲಿ ಯಾರು ಅವುಗಳನ್ನು ಮಂಡಿಸಿದ್ದಾರೋ ಅವರ ಹೆಸರಿನಲ್ಲಿ ಹೇಳುವುದಾದರೆ ಮಹಿದಾಸ ಐತ–ರೇಯ, ಗಾರ್ಗ್ಯಾಯಣ, ಪ್ರತರ್ದನ, ಉದ್ದಾಲಕ, ಬಾಲಾಕಿ, ಅಜತ ಶತ್ರು ಮತ್ತು ಯಾಜ್ಞವಲ್ಕ್ಯರ ತತ್ವಶಾಸ್ತ್ರಗಳು ಎಂದು ಹೆಸರಿಸಬಹುದು. ಅಷ್ಟು ಮುಖ್ಯವಲ್ಲದ ಆದರೆ ಭಿನ್ನವಾದ ಇನ್ನೂ ಏಳೆಂಟು ಚಿಂತನಾ ವಿಧಾನಗಳು ಇಲ್ಲಿ ದೊರಕುತ್ತವೆ.

ಇಷ್ಟಾದರೂ ಉಪನಿಷತ್ತುಗಳು ಎಂದರೆ ವೇದಾಂತ ಎಂಬ ಏಕರೂಪವು ಹೇಗೆ ಮತ್ತು ಏಕೆ ನಮ್ಮ ಜನರ ಮೇಲೆ ಹೇರಲ್ಪಟ್ಟಿತು ಎಂಬುದನ್ನು ಮುಂದೆ ಚರ್ಚಿಸೋಣ. ●

ಸಂಪಾದಕೀಯ

ಆಹಾರಕ್ಕಾಗಿ ಕೊಲ್ಲುವುದು ಹಿಂಸೆಯಲ್ಲ



▌ನಿತ್ಯಾನಂದಸ್ವಾಮಿ

ಕರ್ನಾಟಕದಲ್ಲಿ ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ರಾಮನವಮಿ, ಶಿವರಾತ್ರಿಯಂತಹ ಹಬ್ಬಗಳ ದಿನಗಳಲ್ಲಿ, ಬುದ್ಧ ಜಯಂತಿ, ಮಹಾವೀರ ಜಯಂತಿ, ಗಾಂಧಿ ಜಯಂತಿ ಮುಂತಾದ ದಿನಗಳಲ್ಲಿ ಮಾಂಸ ಮಾರಾಟವನ್ನು ನಿಷೇಧಿಸುವ ಪರಿಪಾಠ ಕಾನೂನಿನ ಸ್ವರೂಪ ಪಡೆಯುತ್ತಿದೆ. ನಿರ್ದಿಷ್ಟ ಹಬ್ಬಹರಿದಿನಗಳಂದು ಮಾಂಸಾಹಾರವನ್ನು ನಿಷೇಧಿಸಿ ಶಾಕಾಹಾರವನ್ನು ಕಡ್ಡಾಯಗೊಳಿಸುವ ಏಕಪಕ್ಷೀಯ ತೀರ್ಮಾನವನ್ನು ಸರ್ಕಾರಿ ಆದೇಶವನ್ನಾಗಿ ಮಾರ್ಪಡಿಸಿ ಜಾರಿಮಾಡುವುದು ಪ್ರಶ್ನಾರ್ಹವಾಗಿದೆ. ಒಂದು ವಿಭಾಗದ ಆಹಾರ ಪದ್ಧತಿಯನ್ನು ಇನ್ನುಳಿದವರ ಮೇಲೆ ಹೇರುವ ಪ್ರಯತ್ನದ ಭಾಗವಾಗಿರುವ ಈ ಕ್ರಮವೇ ಹಿಂಸಾತ್ಮಕವಾಗಿದೆ.

ಆಹಾರಕ್ಕಾಗಿ ಕೊಲ್ಲುವುದು ಹಿಂಸೆಯಲ್ಲ. ಅದು ನಿಸರ್ಗದ ನಿಯಮ. ಮಾನವನು ಈ ನಿಸರ್ಗದ ಭಾಗವಾಗಿಯೇ ಆರಂಭದಿಂದಲೂ ಮಾಂಸವನ್ನು ಸೇವಿಸುತ್ತಾ ಬಂದಿದ್ದಾನೆ. ಆದಿ ಮಾನವ ಮಾಂಸವನ್ನು ಸೇವಿಸದೆ ಇರುತ್ತಿದ್ದರೆ, ನೀರಿನಲ್ಲಿ ಸಿಗುವ ಮೀನುಗಳನ್ನು ಹಿಡಿದು ತಿನ್ನದೆ ಇರುತ್ತಿದ್ದರೆ ಅವನ ಮೆದುಳು ವಿಕಾಸಗೊಳ್ಳುತ್ತಿರಲಿಲ್ಲ. ಆದಿ ಮಾನವನು ಗಿಡಮರಗಳಲ್ಲಿ ಸಿಗುತ್ತಿದ್ದ ಹಣ್ಣು ಹಂಪಲುಗಳನ್ನು, ನೆಲದಲ್ಲಿ ಸಿಗುತ್ತಿದ್ದ ಗೆಡ್ಡೆಗೆಣಸುಗಳನ್ನು ಸೇವಿಸುತ್ತಾ ಜತೆಯಲ್ಲೆ ಬೇಟೆಯಾಡಲು ಕಲಿತು, ಬೇಟೆಗೆ ಬೇಕಾಗುವ ಆಯುಧಗಳನ್ನು ತಯಾರಿಸಿ, ಬೇಟೆಯಲ್ಲಿ ಸಿಗುವ ಪ್ರಾಣಿಗಳ ಮಾಂಸವನ್ನು ಸೇವಿಸುತ್ತಾ ಪ್ರಾಣಿ ಲೋಕದಿಂದ ವಿಕಾಸಗೊಂಡವನು ಆಗಿರುತ್ತಾನೆ.


ಹಿಂಸಿಸುವುದು ಅಂದರೆ ಪೀಡಿಸುವುದು, ಕಾಡುವುದು ಎಂದು ಅರ್ಥ. ಒಬ್ಬ ವ್ಯಕ್ತಿ ಅಥವ ಒಂದು ಪ್ರಾಣಿಯನ್ನು ನರಳಾಡುವಂತೆ ಮಾಡಿ ಆನಂದಿಸುವುದು ಹಿಂಸೆ. ಕೋಳಿ ಕಾಳಗದಲ್ಲಿ ಕೋಳಿಗಳ ಕಾಲುಗಳಿಗೆ ಹರಿತವಾದ ಕತ್ತಿಗಳನ್ನು ಕಟ್ಟಿ ಕಾದಾಡಲು ಬಿಡುವುದು ಹಿಂಸೆ ಎನ್ನಬಹುದು. ಉತ್ತರ ಕರ್ನಾಟಕದಲ್ಲಿ ನಡೆಯುವ 'ದನ ಬೆದರಿಸುವ ಆಟ' ಹಿಂಸೆಗೆ ಇನ್ನೊಂದು ಉದಾಹರಣೆ. ಬೆತ್ತಲೆ ಮೆರವಣಿಗೆ ಮಾಡುವುದು, ಉಗುರುಗಳನ್ನು, ಕಣ್ಣುಗಳನ್ನು ಕೀಳುವುದು, ಹಲ್ಲೆಮಾಡುವುದು, ಹತ್ಯೆ ಮಾಡುವುದು ಮೊದಲಾದವುಗಳು ಹಿಂಸಾಚಾರದ ಇತರ ಕೆಲವು ಉದಾಹರಣೆಗಳು. ಆದರೆ ಆಹಾರಕ್ಕಾಗಿ ಒಂದು ಪ್ರಾಣಿಯನ್ನು ಕೊಲ್ಲುವುದು ಹಿಂಸಾಚಾರವಲ್ಲ. ಅಲ್ಲಿ ಪ್ರಾಣಿಗೆ ಚಿತ್ರಹಿಂಸೆ ನೀಡಿ ಕೊಲ್ಲಲಾಗುವುದಿಲ್ಲ. ಅದನ್ನು ಪೀಡಿಸಲಾಗುವುದಿಲ್ಲ. ಅದು ನರಳಾಡುವುದನ್ನು ನೋಡಿ ಆನಂದಿಸುವವರಿಲ್ಲ. ಪ್ರಾಣಿಗೆ ಅದನ್ನು ಕೊಲ್ಲುವಾಗ ನೋವಾಗುವುದು ನಿಜ. ಆದರೆ ಅದು ಯಾತನೆಗೆ ಗುರಿಯಾಗುವುದಿಲ್ಲ. ಕ್ಷಣಾರ್ಧದಲ್ಲಿ ಅದು ನಿರ್ಜೀವವಾಗುತ್ತದೆ. ಅದಕ್ಕೆ ಯೋಚನೆ ಮಾಡುವ ಸಾಮರ್ಥ್ಯ ಇಲ್ಲದಿರುವುದರಿಂದ ಅದು ಹಿಂಸೆಯನ್ನು ಅನುಭವಿಸದು. ನಾವು ಶಾಕಾಹಾರದಲ್ಲಿ ಬಳಸುವ ಸಸ್ಯಗಳಿಗೂ ಜೀವ ಇದೆ. ಸಸ್ಯಗಳು ಸಹ ಹಿಂಸೆಯನ್ನು ಅನುಭವಿಸಲಾರವು.

ಆರಂಭದಿಂದಲೇ ಮಾಂಸಹಾರಿಯಾಗಿದ್ದ ಮಾನವರು ಬೇರೆ ಬೇರೆ ಕಾರಣಗಳಿಗಾಗಿ ಚರಿತ್ರೆಯ ಬೇರೆ ಬೇರೆ ಹಂತಗಳಲ್ಲಿ ತಮ್ಮ ಆಹಾರ ಪದ್ಧತಿಯನ್ನು ಬದಲಾಯಿಸಿ ಕೊಂಡಿದ್ದಾ-ರೆ. ಕೆಲವು ಜನ ಸಮೂಹಗಳು ಮಾಂಸಾಹಾರವನ್ನು ತ್ಯಜಿಸಿ ಸಸ್ಯಹಾರಿಗಳಾಗಿದ್ದಾರೆ. ಈ ಎರಡು ಆಹಾರ ಪದ್ಧತಿಗಳಲ್ಲಿ ಯಾವುದು ಶ್ರೇಷ್ಠ ಯಾವುದು ನಿಕೃಷ್ಟ ಎಂದು ಎತ್ತುವ ವಿವಾದಗಳಲ್ಲಿ ಹುರುಳಿಲ್ಲ. ಮಾಂಸಹಾರ ಕೀಳು ಎಂದು ಪ್ರತಿಪಾದಿಸುವುದೇ ನಿಕೃಷ್ಟ. ಹಾಗೆಯೇ ಶಾಕಾಹಾರಿಗಳನ್ನು ಹೀಯಾಳಿಸುವುದೂ ಸರಿಯಲ್ಲ. ದೇಹದ ಒಳಗೆ ಹೋಗುವ ವಸ್ತು ನಮ್ಮನು ಮಲಿನಗೊಳಿಸುವುದಿಲ್ಲ. ದೇಹದಿಂದ ಹೊರಗೆ ಹೋಗುವ ವಸ್ತು ಎಲ್ಲರನ್ನು ಒಂದೇ ರೀತಿಯಲ್ಲಿ ಮಲಿನಗೊಳಿಸುತ್ತದೆ.

ತಾವೂ ಶ್ರೇಷ್ಠ, ತಮ್ಮ ಆಹಾರ ಪದ್ಧತಿಯೂ ಶ್ರೇಷ್ಠ ಎಂದು ಪ್ರತಿಪಾದಿಸುವವರು ತಮ್ಮ ಆಹಾರ ಪದ್ಧತಿಯನ್ನು ಇತರ ಸಮುದಾಯಗಳ ಮೇಲೆ ಹೇರುವ ಪ್ರಯತ್ನ ಮಾಡುತ್ತಿರುತ್ತಾರೆ. ಇದು ನಮ್ಮ ದೇಶದ ಬಹುಮುಖಿ ಸಂಸ್ಕೃತಿಯನ್ನು ನಾಶಮಾಡುವ ಹುನ್ನಾರವಾಗಿದೆ. ಇದನ್ನು ಬಲವಾಗಿ ವಿರೋಧಿಸಬೇಕಾಗಿದೆ. ಮಾಂಸಹಾರಿಗಳ ಹಾಗೂ ಜೀವನೋಪಾಯಕ್ಕಾಗಿ ಪಶುಗಳ ಸಾಗಾಟ ಮತ್ತು ಮಾಂಸ ಮಾರಾಟ ಮಾಡುವ ವೃತ್ತಿಯಲ್ಲಿ ತೊಡಗಿಕೊಂಡವರ ಹಕ್ಕುಗಳ ರಕ್ಷಣೆಗಾಗಿ ಹೋರಾಡಬೇಕು. ಮಾಂಸ ರಫ್ತು ನಿಷೇಧದ ಕಾನೂನುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಬೇಕು.

ಪ್ರಾಣಿ ದಯೆ ಹೆಸರಿನಲ್ಲಿ ಕೆಲವರು ಇರುವೆಗಳಿಗೆ ಸಕ್ಕರೆ ಹಾಕಿ ಪ್ರಚಾರ ಪಡೆಯುತ್ತಾರೆ. ಆದರೆ ಅವರು ತಮ್ಮ ನಿತ್ಯ ಜೀವನದಲ್ಲಿ ಮನುಷ್ಯರನ್ನೇ ಪೀಡಿಸುತ್ತಿರುತ್ತಾರೆ. ಇರುವೆಗಳಿಗೆ ಸಕ್ಕರೆ ಹಾಕುವ ಇವರು ತಮ್ಮ ಅಂಗಡಿಗಳಲ್ಲಿ ಸಕ್ಕರೆ ತೂಕಮಾಡಿ ಗಿರಾಕಿಗಳಿಗೆ ಕೊಡುವಾಗ ತೂಕದಲ್ಲಿ ಮೋಸ ಮಾಡುತ್ತಾರೆ. ದುಬಾರಿ ಬಡ್ಡಿ ದರಗಳ ಸಾಲ ನೀಡಿ ಜನರನ್ನು ಪೀಡಿಸುತ್ತಿರುತ್ತಾರೆ. ಹಿಂಸೆಯ ಹೆಸರಿನಲ್ಲಿ ರೋಗ ಹರಡುವ ಸೊಳ್ಳೆಗಳನ್ನು ಕೊಲ್ಲದೆ ಇರಲಾಗದು. ಅಡುಗೆ ಮನೆಯಲ್ಲಿ ಅಹಾರ ಪದಾರ್ಥಗಳನ್ನು ಹಾಳು ಮಾಡುವ ಜಿರಲೆಗಳನ್ನು ನಾಶ ಮಾಡಲೇ ಬೇಕಾಗುತ್ತದೆ. ಇಲಿಯು ಗಣಪತಿಯ ವಾಹನ ಎಂದುಕೊಂಡು ಮನೆಯಲ್ಲಿ ಕೂಡಿಟ್ಟ ಆಹಾರ ದಾನ್ಯಗಳನ್ನು ಇಲಿಗಳು ತಿಂದುಹಾಕುವುದನ್ನು ನೋಡಿ ಸುಮ್ಮನಿರಲಾಗದು. ಸರ್ಪದೋಷದ ಭೀತಿಗೆ ಒಳಗಾಗಿ ವಿಷ ಜಂತುಗಳನ್ನು ಓಡಿಸದೆ ಇರಲಾಗುವುದಿಲ್ಲ. ಅಹಿಂಸೆಯ ಇಂತಹ ಅತಿರೇಕಗಳನ್ನೂ ನಿರ್ಭಿಡೆಯಿಂದ ತಿರಸ್ಕರಿಸಬೇಕಾಗಿದೆ. ■

ಗೋರ್ಟಾ ಗ್ರಾಮಕ್ಕೆ ಅಮಿತ್ ಷಾ 'ಹೈದರಬಾದ್ ಕರ್ನಾಟಕ ವಿಮೋಚನೆ' ಹೆಸರಿನಲ್ಲಿ ವಿಷ ಪ್ರಚಾರ



ಬಿಜೆಪಿಯ ಅಖಿಲ ಭಾರತ ಅಧ್ಯಕ್ಷ ಅಮಿತ್ ಷಾ ನೇಮಕವಾದ ಬಳಿಕ ಮೊದಲ ಬಾರಿ ಕರ್ನಾಟಕಕ್ಕೆ ಕಾಲಿಟ್ಟಿದ್ದಾರೆ. ಅದೂ ರಾಜಧಾನಿಯಿಂದ ಬಹುದೂರವೇ ಇರುವ ಗಡಿ ಜಿಲ್ಲೆ ಬೀದರ್‌ಗೆ, ಅದರಲ್ಲೂ ಅತ್ಯಂತ ಸಣ್ಣ ಗ್ರಾಮವಾಗಿರುವ ಗೋರ್ಟಾ ಹಳ್ಳಿಗೆ.

ಬಂದ ಉದ್ದೇಶವೂ ಸ್ಪಷ್ಟ. ಹಿಂದೆ ಸ್ವಾತಂತ್ರ್ಯ ಪಡೆದ ನಂತರ ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಗಾಗಿದ್ದ ಈ ಪ್ರದೇಶದಲ್ಲಿ ರಜಾಕಾರರರು ನಡೆಸಿದ ದೌರ್ಜನ್ಯದಲ್ಲಿ ನಲುಗಿ, ಸಾವಿಗೀಡಾದವರಿಗೆ ಸ್ಮಾರಕ ನಿರ್ಮಿಸುವುದು, ವಲ್ಲಭ ಬಾಯಿ ಪಟೇಲ್‌ರ ಪ್ರತಿಮೆಗೆ ಶಂಕು ಸ್ಥಾಪನೆ ಮಾಡುವ 'ರಾಷ್ಟ್ರೀಯ ಘನೋದ್ದೇಶ' ಇರಿಸಿಕೊಂಡು ಎಂದು ಹೇಳಲಾಗಿದ್ದರೂ ಅದೆಲ್ಲವೂ ಸ್ಪಷ್ಟ ರಾಜಕೀಯ ಅಜೆಂಡಾ ಇಟ್ಟು ಕೊಂಡೇ ನಡಸಿದ ಕಾರ್ಯಕ್ರಮ ಎಂಬುದರಲ್ಲಿ ಅನುಮಾನವಿಲ್ಲ. ಅಲ್ಲಿ ಷಾ ಮಾತನಾಡಿದ ಬಹುತೇಕ ಮಾತುಗಳು, ಒತ್ತು ಬಿಜೆಪಿ–ಮೋದಿಯ ಗುಣಗಾನ ಮತ್ತು ಉಳಿದ ಪಕ್ಷಗಳ ತೆಗಳಿಕೆ, ಜೊತೆಗೆ ಮುಖ್ಯವಾಗಿ ಇದ್ದದ್ದು ಮನ, ಮನೆಗಳಿಗೆ ಕೋಮುವಾದದ ವಿಷದುಸಿರು ಊದುವ ಹುನ್ನಾರ.

ಷಾ, 2014 ಸೆಪ್ಟಂಬರ್ 17ರಂದು ಅಲ್ಲಿಗೆ ಬಂದಿರುವಾಗ ದೇಶದಲ್ಲಿ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಸೋಲನ್ನು ಕಂಡಿತ್ತು. ಆ ಸೋಲು ಯಾಕಾಯಿತೆಂದು ಕನಿಷ್ಟ ಒಂದು ಕಾರಣವನ್ನಾದರೂ ಈ ರಾಷ್ಟ್ರೀಯ ಅದ್ಯಕ್ಷರು ಹೇಳಲಿಲ್ಲ. ಬದಲಿಯಾಗಿ ಅಸ್ಸಾಂ ಮತ್ತು ಬಂಗಾಳದಲ್ಲಿ ಒಂದು ಸೀಟು ಪಡೆದಿದ್ದೇವಲ್ಲಾ ಹಾಗಾಗಿ ಮುಂದಿನ ಮಹಾರಾಷ್ಟ್ರ ಮುಂತಾದ ಚುನಾವಣೆಗಳಲ್ಲಿ ಜಯಭೇರಿ ಹೊಡೆಯಲಿದ್ದೇವೆ ಎಂದದ್ದು ನಿರಾಶೆ ಆವರಿಸುತ್ತಿದ್ದ ಬೆಂಬಲಿಗ ಜನರನ್ನು, ಕಾರ್ಯಕರ್ತರನ್ನು ಹುರಿದುಂಬಿಸಲಷ್ಟೇ. ಯಾಕೆಂದರೆ 'ಅಚ್ಛೇ ದಿನ್'ಗಳನ್ನು ತರುವುದಾಗಿ ಹೇಳಿ ಓಟು ಅಪಹರಿಸಿದ್ದ ಮೋದಿ ಕಂಪನಿ ಮಾಡಿದ್ದೇನು? ಇದೀಗ ಮಾಡುತ್ತಿರುವುದೇನು? ಅಂತಾ ಜನರಲ್ಲಿ ನಿಧಾನವಾಗಿ ಪ್ರಶ್ನೆಗಳು ಏಳುತ್ತಿವೆ. ಅದರ ಪಲಿತಾಂಶವೇ ಈಗ ಬಂದಿರುವುದು.

ಇಲ್ಲಿ ಬಿಜೆಪಿ ಅದ್ಯಕ್ಷರು ತಾವು ಕಾಂಗ್ರೆಸ್‌ಗಿಂತ ಉತ್ತಮರು, ಕಾಂಗ್ರೆಸ್‌ನಿಂದ ಕರ್ನಾಟಕವನ್ನು, ಇಡೀ ದೇಶವನ್ನೇ ಮುಕ್ತಗೊಳಿಸುವುದಾಗಿ ಹೇಳಿದ್ದಾರೆ. ವಿಚಿತ್ರವೆಂದರೆ ಯಾವುದೇ ನೀತಿ ಆಡಳಿತದಲ್ಲಿ ಕಾಂಗ್ರೆಸ್ ನೀತಿಗಳನ್ನೆ ಜಾರಿಗೊಳಿಸುವ ಇವರು ತಾವು ಭಿನ್ನರೆಂದೇ ಹೇಳಿಕೊಳ್ಳುತ್ತಾರೆ? ವಿವಿಧ ರಾಜ್ಯಗಳ ಚುನಾವಣೆಗಳಲ್ಲಿ ಪ್ರಾದೇಶಿಕ ಪಕ್ಷಗಳಿಂದ ಸೋಲನ್ನಪ್ಪಿದ್ದರೂ ಆ ಬಗ್ಗೆ ಏನೂ ಮಾತನಾಡದ ಅವರು ಜನ ಬೆಂಬಲಿಸಿದ ಮೂರನೆಯ ಶಕ್ತಿಗಳನ್ನು ಮರೆ ಮಾಚಲು ಸತತ ಯತ್ನಿಸುತ್ತಾರೆ ಎಂಬುದೂ ಸ್ಪಷ್ಟ. ಅದರಲ್ಲೂ ಕರ್ನಾಟಕ ಹಿಂದಿನ ಹಗರಣಗಳ ಭ್ರಷ್ಟ ಬಿಜೆಪಿ ಸರಕಾರವನ್ನು ಮಾದರಿಯಾಗಿ ಷಾ ಹೊಗಳಿದ್ದು ಮಾತ್ರ ಅತ್ಯಂತ ಹಾಸ್ಯಾಸ್ಪದ. ಹಿಂದೆ ಗಣಿ–ಭೂ ಮಾಫಿಯಾಗಳಿಂದ ಕಪ್ಪ ಕಾಣಿ–ಕೆ ಪಡೆದು ರೆಡ್ಡಿ ಮತ್ತು ಯಡ್ಡಿಗಳನ್ನು ಹೊಗಳಿ ಹೋಗಿದ್ದ ಗಡ್ಕರಿಗಿಂತ ಭಿನ್ನವಾದ ನಿಲುವು ಹೊಸ ಬ್ರಾಂಡಿನ ಇವರಲ್ಲೇನಿದೆ?

ಜನತೆಯ ಜೀವನ ಮಟ್ಟ ಸುಧಾರಿಸಿ, ಘನತೆಯಿಂದ ಬದುಕಲು ಏನೊಂದೂ ಮಾಡಲು ಸಿದ್ಧವಿಲ್ಲದ ಸಂಘ ಪರಿವಾರ ದೇಶದಲ್ಲಿ ಕೋಮು ವಿಭಜನೆಯ ರಾಜಕಾರಣವನ್ನೇ ಜಾರಿಗೊಳಿಸುತ್ತಿದೆ. ಅದರಿಂದ ಇತ್ತೀಚಿನ ಉಪ ಚುನಾವಣೆಯಲ್ಲಿ ಏನೊಂದೂ ಲಾಭವಿಲ್ಲವಾಗಿದೆ, ಜನರು ವಿಭಜ–ಕ ರಾಜಕಾರಣವನ್ನು ತಿರಸ್ಕರಿಸಿದ್ದಾರೆ ಎಂದು ಗೊತ್ತಿದ್ದರೂ ಅದನ್ನು ಕೈ ಬಿಡದ ಭಂಡತನದ ಹಿಂದೆ ಇಡೀ ಸಮಾಜವನ್ನು ದೀರ್ಘ ಕಾಲದಲ್ಲಾದರೂ 'ಹಿಂದುತ್ವ'ದ ಫ್ಯಾಶಿಸ್ಟ್ ನೆಲೆಯಲ್ಲಿ ಪರಿವರ್ತಿಸಬೇಕೆಂಬುದೇ ಗುರಿ ಆಗಿದೆ.

ಹೀಗಾಗಿಯೇ ಹೈದ್ರಾಬಾದ–ಕರ್ನಾಟಕದ ವಿಮೋಚನಾ ದಿನವೆನ್ನಲಾಗುವ ಸಂದರ್ಭವನ್ನು ಕೋಮುವಾದೀ ರಾಜಕೀಯ–ಸಾಮಾಜಿಕ ಧೃವಿಕರಣಕ್ಕೆ ಬಳಸಲು ಮುಂದಾಗಿರುವುದು ಸ್ಪಷ್ಟ. ದಿನಕ್ಕೆ ಇಲ್ಲದ ಪಾವಿತ್ರ್ಯವನ್ನು ಅಲಂಕರಿಸುವುದರ ಹಿಂದಿನ ಉದ್ದೇಶವೇ ಇದು. ಆ ಕಾರಣದಿಂದಾಗಿಯೇ ಚರಿತ್ರೆಯನ್ನು ತಮಗನ್ನಿಸಿದಂತೆ ತಿರುಚಿ ಪ್ರಚಾರಿಸುತ್ತಿರುವುದು.

ಈ ಭಾಗದಲ್ಲಿ ಭಾರತದೊಂದಿಗೆ ವಿಲೀನವಾಗುವ ಹೊತ್ತಿನಲ್ಲಿ ನಿಜಾಮನಾಡಳಿತಕ್ಕೆ ಒಳಗಾಗಿದ್ದ ಈ ಪ್ರದೇಶಗಳ ಜನರ ಮೇಲೆ ರಜಾಕಾರರ ಮೂಲಕ ವಿಪರೀತ ದೌರ್ಜನ್ಯ ನಡದದ್ದು ಐತಿಹಾಸಿಕ ಸತ್ಯ. ಇದನ್ನು ರಾಜಪ್ರಭುತ್ವದ ದಮನಕಾಂಡವೆಂದು ನೋಡಬೇಕಲ್ಲದೇ ಹಿಂದೂ–ಮುಸ್ಲಿಂರ ನಡುವಿನ

ಪುಟ 16 ಕ್ಕೆ



ಕೃಪೆ : ವಿಜಯ ಕರ್ನಾಟಕ, ಪಿ. ಮಹಮ್ಮದ

ತುಮಕೂರು ಭೂ ಸಮಾವೇಶ

ಕರ್ನಾಟಕ ರಾಜ್ಯದಲ್ಲಿ ಭೂಮಿಯ ಸಮಸ್ಯೆ ಗಂಭೀರವಾಗಿ ಬೆಳೆದಿದ್ದು ಭೂಮಿಯ ಸಮಸ್ಯೆಯ ಪರಿಹಾರಕ್ಕೆ ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರಗಳು ಪ್ರಯತ್ನ ನಡೆಸಿಲ್ಲ. ಬಡವರ ಭೂಮಿಯ ಪ್ರಶ್ನೆಗಳ ಆಧಾರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಅಕೋಬರ್ 13ರಿಂದ ಅನಿರ್ಧಿಷ್ಠ ಧರಣಿ ನಡೆಸಲಾಗುವುದು ರಾಜ್ಯಮಟ್ಟದ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ, ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ತಿಳಿಸಿದರು.



ಅವರು ಭೂಮಿ ಮತ್ತು ನಿವೇಶನದ ಹಕ್ಕಿಗಾಗಿ ಬಗರ್‌ಹುಕುಂ ಸಾಗುವಳಿದಾರರ ಹಕ್ಕೊತ್ತಾಯಗಳಿಗೆ ಒತ್ತಾಯಿಸಿ ಸೆಪ್ಟೆಂಬರ್ 15, 2014ರಂದು ಸೋಮವಾರ ತುಮಕೂರು ನಗರದ ರಂಗತಾಲೀಮು ಕೇಂದ್ರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಸಂಘಟಿಸಿದ್ದ ತುಮಕೂರು ಜಿಲ್ಲಾ ಸಂಘಟನಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಬಂಡವಾಳಶಾಹಿಗಳಿಗೆ ಕೃಷಿಯೋಗ್ಯವಾದ ಭೂಮಿಯನ್ನು ನೀಡುವ ಸಲುವಾಗಿ ಹಿಂದಿನ ಬಿಜೆಪಿ ಸರ್ಕಾರ ಭೂಮಿಗಳನ್ನು ಶೇಖರಣೆ ಮಾಡಿ ಅರ್ಜಿ ಸಲ್ಲಿಸಿದ ಬಂಡವಾಳಗಾರರಿಗೆ ನೀಡಲು ಭೂ ಬ್ಯಾಂಕ್‌ನ್ನು ಸ್ಥಾಪನೆ ಮಾಡಿತು. ಇದು ಒಂದು ದೊಡ್ಡ ಅಪಾಯಕಾರಿ ಬೆಳವಣಿಗೆ ಎಂದ ಅವರು ಹಿಂದೆ ಬಿಜೆಪಿ ಅನುಸರಿಸಿದ ನೀತಿಗಳನ್ನೇ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವೂ ಅನುಸರಿಸುತ್ತಿದೆ ಎಂದು ಟೀಕಿಸಿದರು. ರೈತ ಎಂದರೇ ಭೂಮಿಯನ್ನು ಉಳುವವನೇ ರೈತ ಎನ್ನುವ ಕಾಲವಿತ್ತು ಆದರೆ ರಾಜ್ಯ ಸರ್ಕಾರ ಕೃಷಿ ಭೂಮಿಯನ್ನು ಕೊಂಡುಕೊಳ್ಳುವ ಬಂಡವಾಳಗಾರರು, ರಸಗೊಬ್ಬರ ತಯಾರು ಮಾಡುವ ಕಂಪನಿಗಳ ಮಾಲೀಕರನ್ನು ರೈತರು ಎಂದು ಪರಿಗಣಿಸುವ ತಿದ್ದುಪಡಿ ಕಾಯ್ದೆಯನ್ನು ತರಲು ಹೊರಟಿದೆ ಎಂದ ಅವರು ಇದು ರೈತರ ಕೃಷಿಗೆ ನೀಡುವ ಅಲ್ಪಸ್ವಲ್ಪ ಸಬ್ಸಿಡಿ ಹಣವನ್ನು ರೈತ–ರಿಂದ ಕಿತ್ತು ಕಂಪನಿಗಳಿಗೆ ನೀಡುವ ಹುನ್ನಾರ. ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನುಒತ್ತುವರಿ ಮಾಡಿರುವುದನ್ನು ಪತ್ತೆ ಹಚ್ಚಲು ನಿವೃತ್ತ ಐಎಎಸ್ ಅಧಿಖಾರಿ ಬಾಲಸುಬ್ರಮಣಿಯಂ ರವರ ವರದಿಯ ಪ್ರಕಾರ 14 ಲಕ್ಷ 60 ಸಾವಿರ ಎಕರೆ ಭೂಮಿ ಒತ್ತವರಿಯಾಗಿದೆ ಇದರಲ್ಲಿ ದೊಡ್ಡ ದೊಡ್ಡ ಭೂಮಾಲಿಕರು, ಕಾಫೀ, ಟೀ, ಏಲಕ್ಕಿ ಎಸ್ಟೇಟ್‌ಗಳನ್ನು ಹೊಂದಿರುವವರು ಹೆಚ್ಚು ಹೆಚ್ಚು ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದ ಅವರು ಹೇಳಿದರು. ರಾಜ್ಯದಲ್ಲಿ ಉಚಿತ ನಿವೇಶನಗಳನ್ನು ನೀಡುವಂತೆ ಒತ್ತಾಯಿಸಿ 32 ಲಕ್ಷ ನಿವೇಶನ ಜನರು ಅರ್ಜಿಗಳನ್ನು ನೀಡಿದ್ದಾರೆ ಎಂದ ಅವರು ಬಡವರ ಭೂಮಿಯ ಹಕ್ಕಿನ ಪ್ರಶ್ನೆಗಳಿಗೆ ಒತ್ತಾಯಿಸಿ ಬಗರ್‌ಹುಕು ಸಾಗುವಳಿದಾರರು, ಅರಣ್ಯಭೂಮಿ, ಗುಡ್ಡಗಾಡು ಜನರ ಭೂಮಿಯ ಪ್ರಶ್ನೆ, ಸರ್ಕಾರಿ ಭೂಮಿ ಸೇರಿದಂತೆ ಬಡವರ ಭೂಮಿಯ ಪ್ರಶ್ನೆಗಳ ಆಧಾರದಲ್ಲಿ ಅಕ್ಟೋಬರ್ 13ರಿಂದ ರಾಜ್ಯಮಟ್ಟದಲ್ಲಿ ಅನಿರ್ಧಿಷ್ಟಾವಧಿ ಹೋರಾಟವನ್ನು ಆರಂಭಿಸಲಾಗುವುದು ಎಂದರು.

ಎತ್ತಿನ ಹೊಳೆ ಭಯಪಡುವ ಅವಶ್ಯಕತೆ ಇಲ್ಲ :

ಎತ್ತಿನಹೊಳೆಯಿಂದ ಗ್ರಾಮಗಳು ಮುಳುಗಡೆಯಾಗುತ್ತವೆ ಎಂಬ ಕೊರಟಗೆ–ರೆ ತಾಲೂಕಿನ ರೈತರ ಪ್ರಶ್ನೆಗಳಿಗೆ ಉತ್ತರಿಸಿದ ಜಿ.ವಿ.ಶ್ರೀರಾಮರೆಡ್ಡಿ ರವರು ಇದೊಂದು ಮಾಜಿ ಕೇಂದ್ರ ಸಚಿವ ವೀರಪ್ಪಮೊಯ್ಲಿರವರ ಸ್ವಾರ್ಥ ರಾಜಕಾರಣ ಎಂದರು. ಈ ಯೋಜನೆಯ ಬಗ್ಗೆ ಸಂಪೂರ್ಣವಾದ ಡಿ.ಪಿ.ಆರ್. ಸಹ ಆಗಿಲ್ಲ. ಯಾವುದೇ ರೀತಿಯ ಪೂರ್ಣ ಅಧಿಸೂಚನೆಗಳು ಇಲ್ಲದಿರುವಾಗ ರೈತರು ಆತಂಕಪಡುವ ಅವಶ್ಯಕತೆ ಇಲ್ಲ. ಈ ಯೋಜನೆಯಿಂದ ಯಾವುದೇ ರೀತಿಯ ಪ್ರಯೋಜನವಿಲ್ಲ. ಈ ಯೋಜನೆ ಕೇವಲ ಪೊಳ್ಳು ಭರವಸೆಯ ಯೋಜನೆಯಾಗಿದ್ದು ಗ್ರಾಮಗಳು ಮುಳುಗಡೆಯಾಗುತ್ತವೆ ಎನ್ನುವುದು ಸುಳ್ಳು. ರೈತರು, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಸಂಚಾಲಕ ಸಿ.ಅಜ್ಜಪ್ಪ ಮಾತನಾಡಿ ಅಕೋಬರ್ 13ರ ಹೋರಾಟದ ಭಾಗವಾಗಿ ಪ್ರತಿ ಗ್ರಾಮಗಳಲ್ಲಿ ಹೋಬಳಿವಾರು ಬಗರ್‌ಹುಕುಂ ಸಾಗುವಳಿದಾರರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಜಾಥಾಗಳನ್ನು ಸಂಘಟಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಹಸಂಚಾಲಕ ಬಿ. ಉಮೇಶ್, ನೌಷಾದ್ ಸೆಹಗನ್, ವರದರಾಜು, ಆರ್.ಎಸ್. ಚನ್ನಬಸವಣ್ಣ, ವೀರಭದ್ರಯ್ಯ, ಪರಮೇಶ್ ಉಪಸ್ಥಿತರಿದ್ದರು.

ವರದಿ : ಎಸ್. ರಾಘವೇಂದ್ರ.

ಬಿಜಾಪುರ:
ಬಗರ್ ಹುಕುಂ ಜಮೀನು ಸಕ್ರಮಕ್ಕೆ ಆಗ್ರಹ

ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನು ಸಕ್ರಮ ಮಾಡಬೇಕು, ಅಕ್ರಮ ಮನೆ ನಿವೇಶನಗಳು ಸಕ್ರಮಗೊಳಿಸಬೇಕು, ಒತ್ತುವರಿ ತೆರವುಗೊಳಿಸಲು ನೀಡಿರುವ ನೋಟಿಸನ್ನು ಹಿಂಪಡೆಯಬೇಕು ಮುಂತಾದ ಬೇಡಿಕೆಗಳಿಗೆ ಆಗ್ರಹಿಸಿ, ಕರ್ನಾಟಕ ಪ್ರಾಂತ ರೈತ ಸಂಘದಿಂದ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿತು. ಡಾ॥ ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಹೊರಟ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮಾನ್ಯ ಅಪರ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ಕಣಬೂರ, ಶಿರಬೂರ, ಹೂಸೂರ, ಚಿಕ್ಕಗಲಗಲಿ, ಭೂತನಾಳ, ಇಟ್ಟಂಗಿಹಾಳ, ಇಂಡಿ ತಾಲೂಕಿನ ತಡವಲಗ, ಬಸವನ ಬಾಗೇವಾಡಿ ತಾಲೂಕಿನ ಬೇನಾಳದಲ್ಲಿ 30–35 ವರ್ಷಗಳಿಂದ ಸರಕಾರಿ ಭೂಮಿ ಸಾಗುವಳಿ ಮಾಡಿಕೊಂಡು ಬಂದಿರುವ ರೈತರನ್ನು ಒಕ್ಕಲೆಬ್ಬಿಸಲು ಸರಕಾರವು ಮುಂದಾಗಿರುವ ಕ್ರಮವು ಸರಿಯಲ್ಲ. ತಮ್ಮ ಶ್ರಮ ಹಣ ಹಾಕಿ ಭೂಮಿ ಅಭಿವೃದ್ಧಿ ಮಾಡಿರುವ ರೈತರಿಗೆ ಸರಕಾರವು ಇನ್ನಷ್ಟು ಸಹಕಾರ ನೀಡಬೇಕು ಎಂದು ಅಗ್ರಹಿಸಿದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಅಣ್ಣಾರಾಯ ಈಳಗೇರ ಅವರು ಮಾತನಾಡಿ, ಬಿಜಾಪುರ ನಗರದ ರಂಗಿನ ಮಸಿದಿ ಓಣಿಯ ಸರ್ವೆ ನಂಬರ್ 916 ಮತ್ತು 917 ರ ಜಮೀನದಲ್ಲಿ ಜನ ವಾಸವಾಗಿರುವ ಪ್ರದೇಶವನ್ನು 1975ರಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಇದನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿದ್ದು ಇದೆ. ಈಗ ಅದನ್ನು ರದ್ದು ಪಡಿಸಿ ಹೊಸದಾಗಿ ಸಿ.ಟಿ. ಸರ್ವೆ ಮಾಡಿ ನಕಾಶೆ ಮಾಡಿ ಅಲ್ಲಿಯ ಶೌಚಾಯಲಗಳು ಮನೆಗಳು ತೆರವುಗೊಳಿಸಲು ಹುನ್ನಾರ ನಡೆಸಿದ್ದು ಇದನ್ನು ಕೂಡಲೆ ತಡೆಗಟ್ಟಬೇಕು. ಅಲ್ಲಿಯ ನಿವಾಸಿಗಳಿಗೆ ಹಕ್ಕು ಪತ್ರ ಕೊಟ್ಟು ಖಾಯಂ ಮಾಡಬೇಕು ಎಂದು ಆಗ್ರಹಿಸಿದರು. ಅದೇ ರೀತಿ ಸಿಂಧಗಿಯ ಕೊಳಚೆ ನಿರ್ಮೂಲನಾ ಮಂಡಳಿಯವರು ನಿರ್ಮಿಸಿದ ಮನೆಗಳಲ್ಲಿ ವಾಸವಾಗಿರುವ ನಿವಾಸಿಗಳಿಗೆ ಹಕ್ಕು ಪತ್ರ ಕೊಡಬೇಕು ಎಂದು ಆಗ್ರಹಿಸಿದರು.



ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಈ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವದಾಗಿ ಭರವಸೆ ನೀಡಿದರು.

ಇದಕ್ಕೂ ಮೊದಲು ಕರ್ನಾಟಕ ಸರಕಾರದ ಭೂತದಹನ ಮಾಡಿ ಸರಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಬಗರ ಹುಕುಂ ಸಾಗುವಳಿ ಜಮೀನು ಸಕ್ರಮ ಮಾಡಲೇಬೇಕು. ಅಕ್ರಮ ಮನೆ ನಿವೇಶನಗಳನ್ನು ಸಕ್ರಮಗೊಳಿಸಬೇಕು. ರಂಗೀನ ಮಸೀದಿ ಭೂ ಮಾಫಿಯಾಗಳ ಮೇಲೆ ಕಾನೂನು ಕ್ರಮ ಜರುಗಿಸಲೆಬೇಕು. ಭೂಗಳ್ಳರಿಗೆ ಜೈಲಿಗೆ ಕಳಿಸಲೇಬೇಕು. ಬಡಜನರಿಗೆ ನ್ಯಾಯ ಕೊಡಲೇಬೇಕು. ಒತ್ತುವರಿ ತೆರವಿಗೆ ನೀಡಿರುವ ನೋಟಿಸ್ ವಾಪಸ್ ಪಡೆಯಲೇಬೇಕು ಮುಂತಾದ ಘೋಷಣೆಗಳನ್ನು ರೈತರು ಕೂಗುತ್ತಿದ್ದರು.

ಸುರೇಖಾ ರಜಪೂತ ಜಿ.ಎಸ್. ಇಂಗಳಗಿ, ಪುಂಡಲೀಕ ಹಂದಿಗನೂರ, ಸಲೀಂ ನಾಯ್ಕೋಡಿ, ಮಳಸಿದ್ದ ನಾಯ್ಕೋಡಿ, ಸಿದ್ಧರಾಮ ಬಂಗಾರಿ, ಯಲ್ಲಪ್ಪ ಬಗಲಿ, ಸೋಮನಿಂಗ ಸಿಂಗೆ, ಗುತ್ತೇಶ ಸೂರ್ಯವಂಶಿ, ಕುಮಾರ್ ನಾಯ್ಕ್, ಹಿರಾಬಾಯಿ ಹಜೇರಿ, ಜುಬೇದಾ ಹಣಗಿ, ಕಾರ್ಮಿಕ ಮುಖಂಡರಾದ ವಿ.ಎಂ.ಸೊನ್ನದ, ಸೋನಾಬಾಯಿ ಬ್ಯಾಳಿ, ಅಯ್ಯಪ್ಪ ಗದ್ದನಕೇರಿ, ರಜಾಕಸಾಬ ಹೊನ್ನುಟಗಿ, ಅಮೀದ ಸೈಯ್ಯದ, ಅಂಬವ್ವ ಅಂಬಿಗೇರ, ಕೈರುಂಬಿ ಅತ್ತಾರ ಸೇರಿದಂತೆ ಮುಂತಾದವರು ಮೆರವಣಿಗೆಯ ನಾಯಕತ್ವ ವಹಿಸಿದ್ದರು.


100 ಕ್ಕೂ ಸಂಖ್ಯೆಯಲ್ಲಿ ಮಹಿಳೆಯರು ಹಾಗೂ ನೂರು ಸಂಖ್ಯೆಯಲ್ಲಿ ಸಾಗುವಳಿದಾರ ರೈತರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

– ಜಿ. ಎಸ್. ಇಂಗಳಗಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಗಂಗಾವತಿ ಬಂದ್ ಯಶಸ್ವಿ
ಮರಕುಂಬಿ ದಲಿತರಿಗೆ ಗರಿಷ್ಠ ಪರಿಹಾರ ಹಾಗೂ ರಕ್ಷಣೆಗೆ ಆಗ್ರಹ

ನಮ್ಮ ಸಮಾಜದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಮಹಾನುಭಾವರು ಕಂಡ ಕನಸುಗಳು ನನಸಾಗಬೇಕು. ಸಮಾಜದಲ್ಲಿನ ಭೇದ ಭಾವಗಳು ಹೋಗಬೇಕು. ಪ್ರಬಲವಾದ ಹೋರಾಟವಿಲ್ಲದೆ ಜಾತಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ. ಗಂಗಾವತಿ ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿಯೂ ಈ ರೀತಿಯ ಅಸ್ಪೃಶ್ಯತಾ ಆಚರಣೆಗಳು ಜೀವಂತವಾಗಿದ್ದು ಅವುಗಳನ್ನು ನಾಶಮಾಡಲು ಎಲ್ಲ ಸಮಾನ ಮನಸ್ಕರು ರಣರಂಗಕ್ಕೆ ದುಮುಕಬೇಕು



ಕೊಪ್ಪಳ ಬಂದ್...
ಜನರಿಲ್ಲದೆ ಬಣಗುಡುತ್ತಿರುವ
ಕೊಪ್ಪಳ ಬಸ್‌ಸ್ಟ್ಯಾಂಡ್

ಗಂಗಾವತಿ ತಾಲೂಕು, ಕನಕಗಿರಿ ವಿಧಾನಸಭಾ ಕ್ಷೇತ್ರದ ಮರಕುಂಬಿ ಗ್ರಾಮದ ದಲಿತರ ಮೇಲೆ ಹಲ್ಲೆ ಮಾಡಿ, ಅವರ ಗುಡಿಸಲುಗಳಿಗೆ ಬೆಂಕಿಹಚ್ಚಿ ಎಸಗಿದ ದೌರ್ಜನ್ಯ ಪ್ರಕರಣವನ್ನು ಖಂಡಿಸಿ ವಿವಿಧ 27 ಪ್ರಗತಿಪರ ಸಂಘಟನೆಗಳು ಸಪ್ಟೆಂಬರ್ 12 ರಂದು ಕರೆ ನೀಡಿದ್ದ 'ಗಂಗಾವತಿ ಬಂದ್'



ಸಂಪೂರ್ಣ ಯಶಸ್ವಿಯಾಯಿತು. ಬೆಳಿಗ್ಗೆ 6 ಗಂಟೆಯಿದ ಸಂಜೆ 6 ಗಂಟೆಯ ವರೆಗೆ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ರಸ್ತೆಗಿಳಿಯಲಿಲ್ಲ. ಸದಾ ಜನಜಂಗುಳಿಯಿಂದ ಗಿಜಿಗುಡುತ್ತಿದ್ದ ಬಸ್ ನಿಲ್ದಾಣ ಶುಕ್ರವಾರ ಬಿಕೋ ಎನ್ನುತಿತ್ತು. ಆಟೋ ಸಂಚಾರ ಸ್ಥಗಿತಗೊಂಡಿತ್ತು. ಶಾಲಾ ಕಾಲೇಜು, ಹೋಟೇಲ್, ಅಂಗಡಿ ಮುಂಗಟ್ಟುಗಳು, ಚಿತ್ರಮಂದಿರಗಳು ಬಂದ್ ಆಗಿದ್ದವು. ಬ್ಯಾಂಕ್ ಮತ್ತು ಸರ್ಕಾರಿ ಕಛೇರಿಗಳಲ್ಲಿ ಜನರಿಲ್ಲದೆ ಸ್ತಬ್ಧ ವಾತಾವರಣವಿತ್ತು.

ಮಧ್ಯಾಹ್ನ ಸುಮಾರು ಒಂದು ಗಂಟೆಗೆ, ವಿವಿಧ ಪ್ರಗತಿಪರ ಸಂಘಟನೆಗಳು ಅಣಿನೆರೆಸಿದ ಸಾವಿರಾರು ಜನ ಚನ್ನಬಸವ ವೃತ್ತದಿಂದ ಹೊರಟು ಮಹಾವೀರ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ ಮೂಲಕ ಹಾದು ಬಾಬು ಜಗಜೀವನರಾಮ್ ವೃತ್ತದ ಬಳಿ ಬೃಹತ್ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟರು. ಆರಂಭದಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿ. ನಾಗರಾಜ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರೂ ಆಗಿರುವ ನಿತ್ಯಾನಂದಸ್ವಾಮಿ ಮಾತನಾಡುತ್ತಾ ಕಳೆದ ಎರಡು ತಿಂಗಳಿಂದ ಮರಕುಂಬಿ ದಲಿತರಿಗೆ ಕ್ಷೌರದ ಅಂಗಡಿಯಲ್ಲಿ ಪ್ರವೇಶ ನಿರಾಕರಿಸಿ, ಅವರ ಮೇಲೆ ಹಲ್ಲೆ ಮಾಡಿ, ದಲಿತ ಕೂಲಿಕಾರರಿಗೆ ಕೃಷಿ ಕೆಲಸವನ್ನು ನಿರಾಕರಿಸಿ ಬಹಿಷ್ಕಾರ ಹಾಕಿದ ಪ್ರಕರಣದಲ್ಲಿ ಪೊಲೀಸರು ಅಪರಾಧಿಗಳ ವಿರುದ್ಧ ಕಠಿಣಕ್ರಮ ಜರುಗಿಸದೆ ಹೋದುದರಿಂದ ಅಪರಾಧಿಗಳಿಗೆ ಕುಮ್ಮಕ್ಕು ಸಿಕ್ಕಂತಾಗಿ ಮರಕುಂಬಿಯಲ್ಲಿ ದೌರ್ಜನ್ಯ ಮರುಕಳಿಸುತ್ತಿದೆ ಎಂದು ಆರೋಪಿಸಿದರು.



ಬೃಹತ್ ಪ್ರತಿಭಟನೆ

ಸಾರ್ವಜನಿಕರ ದಿಕ್ಕು ತಪ್ಪಿಸಲು ಮರಕುಂಬಿ ಗ್ರಾಮದ ಸಿಪಿಐ(ಎಂ) ಮುಖಂಡ ಹೆಚ್.ಗಂಗಾಧರಯ್ಯ ಮತ್ತು ಅವರ ಕುಟುಂಬದ ಸದಸ್ಯರ



ಗಂಗಾವತಿ : ಸಿಪಿಐ(ಎಂ) ನಿಂದ ಪ್ರತಿಭಟನೆ

ಮೇಲೆ ದಾಳಿಯನ್ನು ಕೇಂದ್ರೀಕರಿಸಲಾಗುತ್ತಿದೆ ಎಂದು ಹೇಳಿದರು.

ಬುದ್ಧ, ಬಸವ, ಅಂಬೇಡ್ಕರ್ ಕಂಡ ಕನಸು ಇನ್ನೂ ನನಸಾಗಿಲ್ಲ. ಪ್ರಬಲವಾದ ಹೋರಾಟವಿಲ್ಲದೆ ಜಾತಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ. ಗಂಗಾವತಿ ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿಯೂ ಈ ರೀತಿಯ ಅಸ್ಪೃಶ್ಯತಾ ಆಚರಣೆಗಳು ಜೀವಂತವಾಗಿದ್ದು ಅವುಗಳನ್ನು ನಾಶಮಾಡಲು ಎಲ್ಲ ಸಮಾನ ಮನಸ್ಕರು ರಣ–ರಂಗಕ್ಕೆ ದುಮುಕಬೇಕು ಎಂದು ಕರೆನೀಡಿದರು. ಕ್ಷೌರದ ಅಂಗಡಿಯಲ್ಲಿ ಪ್ರವೇಶಕ್ಕಾಗಿ ಒತ್ತಾಯಿಸಿ ಹೋರಾಟಕ್ಕೆ ಮುಂದಾದ ಮರಕುಂಬಿ ದಲಿತರನ್ನು ಅಭಿನಂದಿಸಿದ ಅವರು ಮರಕುಂಬಿ ದಲಿತ ಕುಟುಂಬಗಳಿಗೆ ಗರಿಷ್ಠ ಪರಿಹಾರ, ಮನೆ ನಿವೇಶನ, ಮತ್ತು ದಲಿತರಿಗೆ ಹಾಗೂ ಅವರ ಮುಖಂಡ ಹೆಚ್. ಗಂಗಾಧರಯ್ಯ ಅವರಿಗೆ ಅಗತ್ಯ ರಕ್ಷಣೆಯನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇದುವರೆಗೂ ಬಂಧಿಸದೆ ಇರುವ ಪ್ರಮುಖ ಆರೋಪಿಗಳನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿದ ಅವರು ದಲಿತರ ಮೇಲೆ ಮತ್ತು ಹೆಚ್. ಗಂಗಾಧರಯ್ಯ ಅವರ ಮೇಲೆ ದಾಖಲು ಮಾಡಲಾದ ಸುಳ್ಳು ಪ್ರಕರಣವನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ಯು. ಲಕ್ಷಣ, ಅಧ್ಯಕ್ಷ ತಿಪ್ಪಣ್ಣ ಆರತಿ, ಕಾರ್ಯಾಧ್ಯಕ್ಷ ಭಾರದ್ವಾಜ್ ಸಾಹಿತಿಗಳಾದ ವಿಠ್ಠಪ್ಪ ಗೋರಂಟ್ಲಿ, ಪತ್ರಕರ್ತ ಸಿ.ಎಚ್. ನಾರಿನಾಳ್, ಎಚ್.ಎನ್. ಬಡಿಗೇರ, ಮಾರೇಶ್ ಮಸ್ಟೂರು ಮೊದಲಾದವರು ಮಾತನಾಡಿದರು. ಭಾಷಣಕಾರರು ಇತ್ತೀಚೆಗೆ ನಡೆದ ಹೊಸಗುಡ್ಡ ಗ್ರಾಮದ ದಲಿತ ಮಹಿಳೆ ಹನುಮಮ್ಮ ಕೊಲೆಯ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದೂ, ನಿಜವಾದ ಅಪರಾಧಿಗಳನ್ನು ಬಂಧಿಸದೆ ಅಮಾಯಕರನ್ನು ಜೈಲಿಗೆ ಕಳುಹಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದೂ ಒತ್ತಾಯಿಸಿದರು. ಮೀಸಲು ಕ್ಷೇತ್ರದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿರುವಾಗಲೂ ಅದನ್ನು ತಡೆಯಲು ವಿಫಲವಾದ ಸಚಿವ ಶಿವರಾಜ ತಂಗಡಗಿ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ಸ್ಥಳಕ್ಕೆ ಆಗಮಿಸಿದ ತಾಲೂಕ ತಹಶಿಲ್ದಾರ್ ವೆಂಕನಗೌಡ ಪಾಟೀಲ್ ಪ್ರತಿಭಟನಾಕಾರರಿಂದ ಮನವಿಯನ್ನು ಸ್ವೀಕರಿಸಿದರು. ಸಿಪಿಐ(ಎಂ) ಮುಖಂಡರಾದ ಎ. ಹುಲುಗಪ್ಪ, ಹೆಚ್. ಗಂಗಾಧರಯ್ಯ, ಸುಂಕಪ್ಪ ಗದಗ, ನಿರುಪಾದಿ, ಆರ್.ಕೆ. ದೇಸಾಯಿ, ಎಸ್.ಎಸ್. ಹುಲುಗಪ್ಪ, ಬಸವರಾಜ ಮರಕುಂಬಿ, ಕೆ. ಹುಸೇನಪ್ಪ, ಬಸವರಾಜ ಗೋನಾಳ ಮೊದಲಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನಿರುಪಾದಿ ಎಲ್ಲರನ್ನು ವಂದಿಸಿದರು.

– ನಿರುಪಾದಿ

ಪ್ರಜಾಪ್ರಭುತ್ವ ?

ಪ್ರಜಾಪ್ರಭುತ್ವವಂತೆ ಪ್ರಜಾಪ್ರಭುತ್ವ!
ಎಲ್ಲುಂಟು ಹೇಳಯ್ಯ ಆ ಮಹಾತತ್ವ?
ದಲಿತರಿಗೆ ಸ್ವಾತಂತ್ರ್ಯ ಸಿಕ್ಕಿದೆಯೆ ಹೇಳು
ಕೇಳುವವರಿಹರೇನು ನಾರಿಯರ ಗೋಳು?

– ವಿಡಂಬಾರಿ

ದಕ್ಷಿಣ ಕನ್ನಡ ಜಿಲ್ಲಾ ಜನಧ್ವನಿ

ಕಡಲತಡಿ

ವರದಿ : ವಾ. ಉಚ್ಚಿಲ್

ಸಂತೆ ಜಾಗವನ್ನು ಸುವ್ಯವಸ್ಥೆಗೊಳಿಸುವಂತೆ ಸುರತ್ಕಲ್ ಬೀದಿ ಬದಿ ವ್ಯಾಪಾರಿಗಳ ಆಗ್ರಹ:

ಮಂಗಳೂರು ಮಹಾನಗರ ವ್ಯಾಪ್ತಿಯ ಸುರತ್ಕಲ್ ಪೇಟೆಯು ಒಂದು ಮಿನಿ ಪಟ್ಟಣವೇ ಆಗಿದ್ದು, ಅಲ್ಲಿಯೂ ಸಾಕಷ್ಟು ಮಂದಿ ಬೀದಿ ವ್ಯಾಪಾರಿಗಳಿದ್ದಾರೆ. ವಾರದ ಸಂತೆಯ ದಿನ ನೂರಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳು ನಗರ ಪಾಲಿಕೆಗೆ ಶುಲ್ಕ ತೆತ್ತು ವ್ಯಾಪಾರ ನಡೆಸುತ್ತಾರಾದರೂ ಅವರಿಗೆ ಸ್ವಚ್ಛವಾದ ಸ್ಥಳವನ್ನು ಪಾಲಿಕೆ ಒದಗಿಸಿಲ್ಲ. ಈ ಮಧ್ಯೆ ಆಧುನಿಕ ರೀತಿಯ ಸಂತೆ ಮಾರ್ಕೆಟ್ ಕಟ್ಟಡ ನಿರ್ಮಾಣ ಸಿದ್ಧತೆಗಳಾಗುತ್ತಿವೆ. ಬೀದಿ ಬದಿ ವ್ಯಾಪಾರಿಗಳೂ ಯೋಗ್ಯ ಜಾಗದಲ್ಲಿ ವ್ಯಾಪಾರ ನಡೆಸುವಂತೆ ಸಂತೆ ಜಾಗವನ್ನು ಸುವ್ಯವಸ್ಥಿತಗೊಳಿಸುವಂತೆ ಆಗ್ರಹಿಸಿ ಮಂಗಳೂರು ಮಹಾ ನಗರ ಬೀದಿ ಬದಿ ವ್ಯಾಪಾರಿಗಳ ಸಂಘದ ನೇತೃತ್ವದಲ್ಲಿ ಸುರತ್ಕಲ್‌ನ ಬೀದಿ ವ್ಯಾಪಾರಿಗಳು ಸಪ್ಟೆಂಬರ್ 9 ರಂದು ಸುರತ್ಕಲ್‌ನಲ್ಲಿ ಪ್ರತಿಭಟನೆಯನ್ನು ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಬೀದಿ ಬದಿ ವ್ಯಾಪಾರಿಗಳ ದಕ್ಷಿಣ ಕನ್ನಡ ಜಿಲ್ಲಾ ಸಂಘದ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಮಂಗಳೂರು ನಗರ ಸಮಿತಿ ಅಧ್ಯಕ್ಷ ಮಹಮ್ಮದ್ ಮುಸ್ತಾಫಾ, ಕಾರ್ಯದರ್ಶಿ ಸಂತೋಷ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸುರತ್ಕಲ್ ಪ್ರದೇಶ ಬೀದಿ ಬದಿ ವ್ಯಾಪಾರಿಗಳ ಸಭೆಯನ್ನು ನಡೆಸಿ ಸಂಘಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಚೆರಿಯೋನ್ ಅಧ್ಯಕ್ಷರಾಗಿಯೂ, ಅಬ್ದುಲ್ ಆಜೀಜ್ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುತ್ತಾರೆ.

ಹರೇಕಳ ಗ್ರಾಮ ಪಂಚಾಯತ್‌ಗೆ ಡಿವೈಎಫ್ಐ ಮುತ್ತಿಗೆ :

ಹರೇಕಳ ಗ್ರಾಮ ಪಂಚಾಯತಿಯ ನ್ಯೂಪಡ್ಪು ಎಂಬಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಸಲುವಾಗಿ ಏಳು ತಿಂಗಳ ಹಿಂದೆ ಕೊಳವೆ ಬಾವಿ ಕೊರೆದಿದ್ದು, ಇದುವರೆಗೂ ಪಂಪ್ ಅಳವಡಿಸಿರಲಿಲ್ಲ. ಈ ಪ್ರದೇಶದಲ್ಲಿ ತೆರೆದ ಬಾವಿಯೊಂದು ಇದ್ದು, ಜನರು ಬಳಸುತ್ತಿರುವ ಈ ಬಾವಿಗೆ ಚರಂಡಿಯಲ್ಲಿ ಹರಿಯುವ ಕೊಳಚೆ ನೀರು ಸೇರುವುದನ್ನು ತಡೆಯುವ ವ್ಯವಸ್ಥೆಯನ್ನು ಗ್ರಾಮ ಪಂಚಾಯತ್ ಮಾಡಿರಲಿಲ್ಲ. ಈ ಎರಡೂ ಬೇಡಿಕೆಗಳ ಬಗ್ಗೆ ಸ್ಥಳೀಯ ಡಿವೈಎಫ್ಐ ಘಟಕಗಳು ಗ್ರಾಮ ಪಂಚಾಯತಿಗೆ ಹಲವು ಬಾರಿ ಲಿಖಿತ ಮನವಿ ಸಲ್ಲಿಸಿದ್ದರೂ, ಪಂಚಾಯತಿನಿಂದ ಏನೂ ಕ್ರಮ ಕೈಗೊಳ್ಳದಿರುವುದನ್ನು ಪ್ರತಿಭಟಿಸಿ ಸಪ್ಟೆಂಬರ್ 8 ರಂದು ಡಿವೈಎಫ್ಐ ನೇತೃತ್ವದಲ್ಲಿ ಸಾರ್ವಜನಿಕರು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿದರು.

ಮುತ್ತಿಗೆ ಕಾರ್ಯಕ್ರಮ ದೀರ್ಘಕಾಲ ನಡೆದರೂ, ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಯಾರೂ ಬಾರದ ಹಿನ್ನೆಲೆಯಲ್ಲಿ ಪಂಚಾಯತಿ ಬಾಗಿಲಲ್ಲಿ ಧರಣಿ ಕುಳಿತರು. ಮಧ್ಯಾಹ್ನ ಗಂಟೆ 12ರ ವರೆಗೂ ಯಾರೂ ಬಾರದೆ ಇದ್ದಾಗ, ಪ್ರತಿಭಟನಾಕಾರರು ಪಿಡಿಓ ಕಚೇರಿಗೆ ಬೀಗ ಜಡಿದು, 'ನಾಪತ್ತೆಯಾಗಿದ್ದಾರೆ' ಎಂಬ ಫಲಕ ಅಂಟಿಸಿದರು.

ಮಧ್ಯಾಹ್ನ 1 ಗಂಟೆ ಬಳಿಕ ಪಿಡಿಓ ಕಚೇರಿಗೆ ಬಂದಾಗ ಪ್ರತಿಭಟನಾಕಾರರೊಂದಿಗೆ ಮಾತಿನ ಚಕಮಕಿ ನಡೆಯಿತು.





ಪ್ರತಿಭಟನೆಯಲ್ಲಿ ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಉಳ್ಳಾಲ ವಲಯ ಉಪಾಧ್ಯಕ್ಷ ರಫೀಕ್ ಹರೇಕಳ, ಸ್ಥಳೀಯ ಘಟಕಗಳ ಅಧ್ಯಕ್ಷರಾದ ಸಿರಾಜ್, ಇಸ್ಮಾಯಿಲ್ ಮತ್ತು ಯಾಕೂಬ್, ಕಾರ್ಯದರ್ಶಿ ಅಶ್ರಫ್ ಮತ್ತಿತರರು ಉಪಸ್ಥಿತರಿದ್ದರು.

ಶಿರ್ತಾಡಿ ಪಂಚಾಯತ್‌ಗೆ ಮುತ್ತಿಗೆ:

ದಲಿತ ಮೀಸಲು ನಿಧಿ, ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜ್ಯಾರಿ, ಹಕ್ಕುಪತ್ರ, ಡೋರ್ ನಂಬ್ರ ನೀಡುವುದು, ಬಿಪಿಎಲ್ ವ್ಯವಸ್ಥೆಯಲ್ಲಿನ ಪಾರದರ್ಶಕತೆ, ಶಿರ್ತಾಡಿ ಪಂಚಾಯತ್ ವ್ಯಾಪ್ತಿಯ ಹಲವೆಡೆ ರಸ್ತೆ ಡಾಮರೀಕರಣ ಮೂಲ ಸೌಕರ್ಯ, ಸ್ಮಶಾನಭೂಮಿ ಮೊದಲಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಶಿರ್ತಾಡಿ ಗ್ರಾಮ ಪಂಚಾಯತ್ ಕಚೇರಿಯ ಎದುರು ಸಪ್ಟೆಂಬರ್ 15 ರಂದು ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘ, ದಲಿತ ಹಕ್ಕುಗಳ ಹೋರಾಟ ಸಮಿತಿ, ಜನವಾದಿ ಮಹಿಳಾ ಸಂಘಟನೆ, ಡಿವೈಎಫ್ಐ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ದಲಿತ ಹಕ್ಕುಗಳ ಹೋರಾಟ ಸಮಿತಿಯ ಸಹ ಸಂಚಾಲಕ ಲಿಂಗಪ್ಪ ನಂತೂರ್ ಪುರಸಭಾ ಸದಸ್ಯೆ ರಮಣಿ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿ ಅಧ್ಯಯನ ಶಿಬಿರ:

ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ 2 ದಿನಗಳ ಎಸ್‌ಎಫ್ಐ ಅಧ್ಯಯನ ಶಿಬಿರ ಸಪ್ಟೆಂಬರ್ 13 ಮತ್ತು 14 ರಂದು ಮಂಗಳೂರಿನ ಬೋಳಾರದಲ್ಲಿರುವ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನ್ ಸಭಾಂಗಣದಲ್ಲಿ ಜರಗಿತು.

ಸಮಾನ ಗುಣಮಟ್ಟದ ಶಿಕ್ಷಣವನ್ನು ಆಗ್ರಹಿಸಿ, ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಹಾಗೂ ವಿದ್ಯಾರ್ಥಿ ಸೌಹಾರ್ದತೆ ಎಂಬ ಧ್ಯೇಯಗಳೊಂದಿಗೆ ಈ ಅಧ್ಯಯನ ಶಿಬಿರವನ್ನು ನಡೆಸಿದ್ದು, ಆ ನಿಟ್ಟಿನಲ್ಲಿ ತರಗತಿಗಳು ನಡೆದವು.

ಉದ್ಘಾಟನಾ ಸಮಾರಂಭದಲ್ಲಿ ಮಂಗಳೂರಿನ ಖ್ಯಾತ ನ್ಯಾಯವಾದಿ ಹಾಗೂ ಅಖಿಲ ಭಾರತ ನ್ಯಾಯವಾದಿಗಳ ಸಂಘದ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಯಶವಂತ ಮರೋಳಿ, ಸಮುದಾಯ ಸಂಘಟನೆಯ ಹಿರಿಯ ಕಾರ್ಯಕರ್ತ ವಾಸುದೇವ ಉಚ್ಚಿಲ ಅತಿಥಿಗಳಾಗಿ ಭಾಗವಹಿಸಿದ್ದರು. ಎಸ್‌ಎಫ್ಐ ರಾಜ್ಯ ಸಮಿತಿ ಕಾರ್ಯದರ್ಶಿ ಗುರುರಾಜ ದೇಸಾಯಿ ಉದ್ಘಾಟನಾ ಭಾಷಣ ಮಾಡಿದರು. ಎಸ್‌ಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ಚರಣ್ ಪಂಜಿಮೊಗರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಂಝು ಕಿನ್ಯಾ ನಿರೂಪಿಸಿ, ಅಜಯ್ ವಂದಿಸಿದರು. ಉದ್ಘಾಟನೆಗೂ ಮೊದಲು ಎಸ್‌ಎಫ್ಐ ಧ್ವಜಾರೋಹಣ ನಡೆಸಲಾಯಿತು.

ದಲಿತ ಹಕ್ಕುಗಳ ಸಮಿತಿ ರಚನೆ

ಸಿಪಿಐ(ಎಂ) ಕನ್ನಡ ಜಿಲ್ಲೆಯ ನೇತೃತ್ವದಲ್ಲಿ ಜಿಲ್ಲೆಯ 'ದಲಿತ ಹಕ್ಕುಗಳ ಸಮಿತಿ'ಯ ವತಿಯಿಂದ ದಲಿತ ಹಕ್ಕುಗಳ ರಕ್ಷಣೆಗಾಗಿ ದಲಿತರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ದೀರ್ಘಾವಧಿ ಕಾರ್ಯಕ್ರಮವೊಂದನ್ನು ಆಯೋಜಿಸಿರುವ ಎರಡು ದಿನಗಳ ದಲಿತ ಹಕ್ಕುಗಳ ಕುರಿತ ಅಧ್ಯಯನ ಶಿಬಿರ ಸೆಪ್ಟೆಂಬರ್ 7 ಮತ್ತು 8, 2014 ರಂದು ನಡೆದು 8 ರಂದು ಸಂಜೆ ಸಮಾರೋಪಗೊಂಡಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಬಸವರಾಜುರವರು ಉದ್ಘಾಟಿಸಿ ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಭಾಗವಹಿಸಿದ್ದ ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರು 19 ಮಂದಿಯ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದ್ದು ಪ್ರಧಾನ ಸಂಚಾಲಕರಾಗಿ ಕೃಷ್ಣಪ್ಪ ಕೊಂಚಾಡಿ, ಸಹಸಂಚಾಲಕರಾಗಿ ಲಿಂಗಪ್ಪ ನಂತೂರು, ನಾರಾಯಣ ತಲಪಾಡಿ, ಶಂಕರ ವಾಲ್ಪಾಡಿ ಮತ್ತು ಶೇಖರ ಲಾಯಿಲ ಅವರನ್ನು ಆಯ್ಕೆ ಮಾಡಿರುತ್ತಾರೆ. ದಲಿತ ಹಕ್ಕುಗಳ ಸಮಿತಿ ಚಳುವಳಿಯನ್ನು ಜಿಲ್ಲಾದ್ಯಂತ ವಿಸ್ತರಿಸಲು ತೀರ್ಮಾನಿಸಲಾಗಿದೆ.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ವಹಿಸಿದ್ದರು. ಶಿಬಿರ ಸಿದ್ಧತಾ ಸಮಿತಿ ಸಂಚಾಲಕ ವಾಸುದೇವ ಉಚ್ಚಿಲ, ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದಲಿತ ಹಕ್ಕುಗಳ ಮಂಗಳೂರು ನಗರ ಸಮಿತಿ ಅ ಧ್ಯಕ್ಷ ಲಿಂಗಪ್ಪ ನಂತೂರು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಉಡುಪಿ : ಅಂಗವಿಕಲರ ಹಾಗೂ ಪೋಷಕರ ಒಕ್ಕೂಟದ ಹೋರಾಟ

ಅಂಗವಿಕಲರ ಸೇವೆಗಳನ್ನು ನಿರ್ವಹಿಸುತ್ತಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳ ಸೇವೆಯನ್ನು ಖಾಯಂಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪೋಷಕರ ಒಕ್ಕೂಟದ ಉಡುಪಿ ಘಟಕದ ವತಿಯಿಂದ ಸಪ್ಟೆಂಬರ್ 16 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಘಟಕದ ಗೌರವಾಧ್ಯಕ್ಷ ವೆಂಕಟೇಶ್ ಕೋಣಿ ಮಾತನಾಡಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೂ ಗ್ರಾಮ ಪುನರ್ವಸತಿ ಕಾರ್ಯಕರ್ತರಿಗೂ ನೀಡಲಾಗುವ ವೇತನ ತೀರಾ ಕಡಿಮೆ ಇದ್ದು ಅದನ್ನು ಹೆಚ್ಚಿಸಬೇಕೆಂದೂ ಆಗ್ರಹಿಸಿದರು. ●

ಜನಶಕ್ತಿ
ಕನ್ನಡ ವಾರಪತ್ರಿಕೆ



ಮಾಧ್ಯಮಗಳು 'ಲವ್ ಜಿಹಾದ್'ನಂತಹ ಘೋಷಣೆಗಳ ಸುತ್ತ ಕೋಮುವಾದಿ ಧ್ರುವೀಕರಣದ ಕರ್ಕಶ ಪ್ರಚಾರ ತದ್ವಿರುದ್ಧ ಪರಿಣಾಮ ಬೀರಿದೆ ಎಂದು ಬಿಜೆಪಿಯನ್ನು ಎಚ್ಚರಿಸಿದರೆ, ಇವನ್ನೆಲ್ಲ ದೊಡ್ಡ ಚುನಾವಣಾ ಪ್ರಶ್ನೆಗಳನ್ನಾಗಿ ಮಾಡದಿರುವುದಕ್ಕೇ ಬಿಜೆಪಿ ಬೆಲೆ ತೆರಬೇಕಾಗಿ ಬಂದಿದೆ ಎಂದು ಹಿರಿಯ ಆರೆಸ್ಸೆಸ್/ಬಿಜೆಪಿ ಮುಖಂಡರು ಟಿಪ್ಪಣಿ ಮಾಡಿದ್ದಾರೆಂದು ವರದಿಯಾಗಿದೆ. ಇದೀಗ ರಟ್ಟಾಗುತ್ತಿರುವ ಅವರ ನಿಜವಾದ ಗುಟ್ಟು..

ಉಪಚುನಾವಣೆಗಳ ಫಲಿತಾಂಶ ರಟ್ಟು ಮಾಡುತ್ತಿರುವ ಗುಟ್ಟು

ಆರೆಸ್ಸೆಸ್/ಬಿಜೆಪಿಯ 'ಸೀಳು ನಾಲಗೆ'ಯ ರಾಜಕೀಯ ಒಂದು ಕುಟಿಲ ಅಜೆಂಡಾವನ್ನು ಅನುಸರಿಸುತ್ತಿದೆ, ಒಂದೆಡೆ ಸಾರ್ವಜನಿಕರನ್ನು ನಂಬಿಸಲು 'ಅಭಿವೃದ್ಧಿ', 'ಗುಜರಾತ್ ಮಾದರಿ','ಅಚ್ಛೇ ದಿನ್ ಆನೇವಾಲೇ ಹೈಂ' ಇತ್ಯಾದಿ ಜಪಿಸುತ್ತಲೇ, ಇನ್ನೊಂದೆಡೆಯಲ್ಲಿ, ಚುನಾವಣಾ ಪ್ರಯೋಜನಗಳನ್ನು ಗಿಟ್ಟಿಸುವ ನಿಜವಾದ ಕಾರ್ಯವಿಧಾನವಾಗಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮತ್ತು ಹಿಂಸಾಚಾರದ ದಾರಿಯನ್ನು ಅನುಸರಿಸುತ್ತದೆ ಎಂಬುದು ಈಗ ಇನ್ನಷ್ಟು ಸ್ಪಷ್ಟ.. ನಿಜವಾದ ಅಪಾಯ ಇರುವುದು ಇಲ್ಲಿಯೇ..

'ಸೀಳು ನಾಲಗೆ'ಯ ರಾಜಕೀಯದ ಅಪಾಯ

- ಸೀತಾರಾಮ್ ಯೆಚೂರಿ

ಈ ಹಿಂದೆ ನಾವು ಹೇಳಿರುವಂತೆ, ಸಾಮಾನ್ಯವಾಗಿ, ಉಪಚುನಾವಣೆಗಳ ಫಲಿತಾಂಶಗಳು ಯಾವುದೇ ರಾಜಕೀಯ ಪಕ್ಷದ ರಾಷ್ಟ್ರೀಯ ಸ್ಥಾನಮಾನದ ಬಗ್ಗೆ ಪ್ರಮುಖವಾದ ಟಿಪ್ಪಣಿಯೇನೂ ಆಗುವುದಿಲ್ಲ, ವಿಶೇಷವಾಗಿ ಅದು ಕೇಂದ್ರ ಸರಕಾರದ ನೇತೃತ್ವದಲ್ಲಿರುವಾಗ. ಆದರೆ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಸ್ವತಃ ತಾನೇ ಬಹುಮತ ಪಡೆದು ಕೇಂದ್ರದಲ್ಲಿ ಸರಕಾರ ರಚಿಸಿದ ನಂತರ ನಡೆದ ಮೂರು ಸುತ್ತಿನ ಉಪಚುನಾವಣೆಗಳನ್ನು ಒಟ್ಟಾಗಿ ನೋಡಿದಾಗ ಕಾಣುವ ಪ್ರವೃತ್ತಿಗಳು ಮಹತ್ವದ್ದಾಗಿರುವಂತೆ ಅನಿಸುತ್ತದೆ.

ಈ ಮೂರು ಸುತ್ತಿನ ಉಪಚುನಾವಣೆಗಳಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಮತದಾನ ನಡೆದ 50 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ 35ರಲ್ಲಿ 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಗಮನಾರ್ಹ ಮುನ್ನಡೆ ಪಡೆದಿತ್ತು. ಆದರೆ ಅದು ಗೆದ್ದಿರುವುದು 18 ಕ್ಷೇತ್ರಗಳಲ್ಲಿ ಮಾತ್ರ. ಈ ಕ್ಷೇತ್ರಗಳಲ್ಲಿ ಹಿಂದಿನ ವಿಧಾನಸಭಾ ಚುನಾವಣೆಗಳಿಗೆ ಹೋಲಿಸಿದರೂ ಕೂಡ ತೀವ್ರ ಇಳಿಕೆ ಕಾಣುತ್ತದೆ.

ಅಲ್ಲದೆ ಈ ಉಪಚುನಾವಣೆಗಳು ನಡೆದಿರುವುದು ಕೆಲವು ಬಹಳ ಜನಸಂಖ್ಯೆಯ, ಲೋಕಸಭೆಯಲ್ಲಿ ಗಮನಾರ್ಹ ಸ್ಥಾನಗಳನ್ನು ಹೊಂದಿರುವ ರಾಜ್ಯಗಳಲ್ಲಿ.

ಈ ಮೂರನೇ ಸುತ್ತಿನಲ್ಲಿ

ಪ್ರಸಕ್ತ ಸುತ್ತಿನ ಉಪಚುನಾವಣೆಗಳಲ್ಲಿ, 80ರಲ್ಲಿ 71 ಲೋಕಸಭಾ ಸ್ಥಾನಗಳನ್ನು ಪಡೆದು ದಾಖಲೆ ನಿರ್ಮಿಸಿದ ಉತ್ತರ ಪ್ರದೇಶದಲ್ಲಿ ಬಿಜೆಪಿ, ಕೇಂದ್ರ ಸರಕಾರ ರಚಿಸಿದ ನೂರು ದಿನಗಳ ಅಂತರದಲ್ಲೇ, ಹಿಂದಿನ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದಿದ್ದ, ಲೋಕಸಭಾ ಚಲುನಾವಣೆಗಳಲ್ಲಿ ಗಮನಾರ್ಹ ಮುನ್ನಡೆಯನ್ನೂ ದಾಖಲಿಸಿದ್ದ ಎಂಟು ಕ್ಷೇತ್ರಗಳಲ್ಲಿ ಸೋಲುಂಡಿದೆ.

ಗುಜರಾತಿನಲ್ಲಿ ಲೋಕಸಭಾ ಚುನಾವಣೆಗಳು ಮತ್ತು ಹಿಂದಿನ ವಿಧಾನಸಭಾ ಚಲುನಾವಣೆಗಳಿಗೆ ಹೋಲಿಸಿದರೆ ಮೂರು ಸ್ಥಾನಗಳನ್ನು ಕಳಕೊಂಡಿದೆ. ಅದೇ ರೀತಿ ರಾಜಸ್ತಾನದಲ್ಲೂ, ಹಿಂದಿನ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದಿದ್ದ, ಮತ್ತು ಲೋಕಸಭಾ ಚುನಾವಣೆಗಳಲ್ಲಿ ಮುನ್ನಡೆ ಪಡೆದಿದ್ದ ಮೂರು ಸ್ಥಾನಗಳನ್ನು ಕಳಕೊಂಡಿದೆ.

ಈ ಸುತ್ತಿನಲ್ಲಿ ಒಂಭತ್ತು ರಾಜ್ಯಗಳಲ್ಲಿ 32 ವಿಧಾನಸಭಾ ಸ್ಥಾನಗಳಿಗೆ ನಡೆದ ಉಪಚುನಾವಣೆಗಳಲ್ಲಿ ಬಿಜೆಪಿಗೆ ಗೆಲ್ಲಲು ಸಾಧ್ಯವಾಗಿರುವುದು 12 ಸ್ಥಾನಗಳನ್ನು ಮಾತ್ರ.

ಸಮಸ್ತ ರಾಷ್ಟ್ರೀಯ ಮಾಧ್ಯಮಗಳು ಕಳೆದ ಸಾರ್ವತ್ರಿಕ ಚುನಾವಣೆಗಳ ನಂತರ ಎಷ್ಟೊಂದು ತ್ವರಿತವಾಗಿ, ಎಷ್ಟೊಂದು ಮಟ್ಟಿಗೆ ಬಿಜೆಪಿಗೆ ಬೆಂಬಲದ ಪ್ರಮಾಣ ಇಳಿಮುಖಗೊಂಡಿದೆ ಎಂದು ಟಿಪ್ಪಣಿ ಮಾಡುತ್ತಿರುವಾಗ, ಆ ಪಕ್ಷ ತಾನು ಪಶ್ಚಿಮ ಬಂಗಾಲ ವಿಧಾನಸಭೆಯನ್ನು ಮೊದಲ ಬಾರಿಗೆ ಪ್ರವೇಶಿಸಲು ಸಾಧ್ಯವಾಗಿರುವ ಬಗ್ಗೆ ಸಮಾಧಾನ ಪಟ್ಟುಕೊಳ್ಳುತ್ತಿದೆ. ಅದು ಈ ರಾಜ್ಯದಲ್ಲಿ ಹಿಂದಿನ ಬಾರಿ ಲೋಕಸಭಾ ಮತ್ತು ವಿಧಾನಸಭಾ ಸೀಟುಗಳನ್ನು ಗೆದ್ದದ್ದು ತೃಣಮೂಲ ಕಾಂಗ್ರೆಸ್ ಮತ್ತು ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿದ್ದಾಗ. ಈಗ ಅದು ಗೆದ್ದಿರುವ ಬಾಸಿರ್ಹಾಟ್ ವಿಧಾನಸಭಾ ಕ್ಷೇತ್ರದಲ್ಲಿ 2014ರ ಲೋಕಸಭಾ ಚುನಾವಣೆಗಳಲ್ಲಿ ಅದು 30 ಸಾವಿರಕ್ಕೂ ಹೆಚ್ಚು ಮತಗಳ ಮುನ್ನಡೆ ಪಡೆದಿತ್ತು. ಆದರೆ ಈಗ ಅದು ಗೆದ್ದಿರುವುದು ಕೇವಲ 1300 ಕ್ಕಿಂತಲೂ ಕಡಿಮೆ ಅಂತರದಿಂದ. ಇದು ಬಾಂಗ್ಲಾದೇಶದೊಂದಿಗಿನ ಗಡಿಯಲ್ಲಿರುವ ಕ್ಷೇತ್ರವಾದ್ದರಿಂದ ಸದಾ ಕೋಮು ಭಾವೋದ್ರೇಕಗಳಿಗೆ ಪಕ್ಕಾಗುತ್ತಾ ಬಂದಿರುವಂತದ್ದು. ಇದನ್ನು ಬಿಜೆಪಿ ಲೋಕಸಭಾ ಚುನಾವಣೆಗಳಲ್ಲೂ, ಈ ಉಪಚುನಾವಣೆಯಲ್ಲೂ ಪೂರ್ಣವಾಗಿ ಬಳಸಿಕೊಂಡಿದೆ.

ತೃಣಮೂಲ ಕಾಂಗ್ರೆಸ್ ಕೊಡುಗೆ

ಅಲ್ಲದೆ, ಟಿಎಂಸಿ ಗೂಂಡಾಗಳ ಬೆದರಿಕೆ. ಬಲವಂತದ ವಸೂಲಿಗಳಿಗೆ, ಜತೆಗೆ ಹಿಂಸಾಚಾರದ ರಾಜಕೀಯಕ್ಕೆ ಒಳಗಾಗಿರುವ ಪಶ್ಚಿಮ ಬಂಗಾಲದ ದುಡಿಯುವ ಜನಸಾಮಾನ್ಯರು ಕೇಂದ್ರದಲ್ಲಿ ಸರಕಾರ ನಡೆಸುತ್ತಿರುವ ಬಿಜೆಪಿಯಿಂದ ಏನಾದರೂ ಪರಿಹಾರ ಪಡೆಯುವ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದು ಕೂಡ ಬಿಜೆಪಿ ಪರವಾಗಿ ಸಾಕಷ್ಟು ಮತಗಳು ಬೀಳಲು ಒಂದು ಕಾರಣವಾಗಿದೆ. ಬಾಸಿರ್ಹಾಟ್ ಕ್ಷೇತ್ರವನ್ನು 1977ರಿಂದ ಸಿಪಿಐ(ಎಂ) ಮತ್ತು ಎಡರಂಗ ಪ್ರತಿನಿಧಿಸುತ್ತ ಬಂದಿವೆ. ಸಿಪಿಐ(ಎಂ) ಶಾಸಕರ ನಿಧನದಿಂದಾಗಿ ಈ ಉಪಚುನಾವಣೆ ನಡೆದಿದೆ. ಅವರು ಈ ಪ್ರದೇಶದಲ್ಲಿ ಬಹಳ ಜನಪ್ರಿಯ ಮುಖಂಡರಾಗಿದ್ದರು. ಸಿಪಿಐ(ಎಂ) ಮತ್ತು ಪಶ್ಚಿಮ ಬಂಗಾಲದ ಎಡರಂಗ ಈ ಸೋಲಿಗೆ ಕಾರಣಗಳ ಆಳವಾದ ವಿಶ್ಲೇಷಣೆ ನಡೆಸಿ ಕೊರತೆಗಳು, ದೌರ್ಬಲ್ಯಗಳನ್ನು ಗುರುತಿಸಿಕೊಂಡು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತವೆ ಎಂದು ಪ್ರಕಟಿಸಿವೆ.

ಆದರೆ ಬಿಜೆಪಿಗೆ ಪಶ್ಚಿಮ ಬಂಗಾಲದ ರಾಜಕೀಯದಲ್ಲಿ ಪ್ರವೇಶ ಕೊಡಿಸಿದ್ದು ತೃಣಮೂಲ ಕಾಂಗ್ರೆಸ್ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಬಿಜೆಪಿಯೊಂದಿಗೆ ಟಿಎಂಸಿ ಮೈತ್ರಿ ಮಾಡಿಕೊಂಡು ಅದರ ಮುಖ್ಯಸ್ಥರು ವಾಜಪೇಯಿ ಸಂಪುಟದಲ್ಲಿ ರೈಲ್ವೆ ಮಂತ್ರಿಯಾಗಿ ಸೇರಿಕೊಂಡರು. ಎಡರಂಗವನ್ನು ಸೋಲಿಸುವ ಅವರ ತೀವ್ರ ಆಕಾಂಕ್ಷೆ ಒಂದೆಡೆಯಲ್ಲಿ ಬಂಗಾಲದಲ್ಲಿ ಕೋಮುವಾದಿ ಶಕ್ತಿಗಳಿಗೆ ಪ್ರವೇಶ ನೀಡಿದರೆ, ಇನ್ನೊಂದೆಡೆಯಲ್ಲಿ ಮಾವೋವಾದಿ ಹಿಂಸಾಚಾರ ಮತ್ತು ಭಯೋತ್ಪಾದನೆಗೆ ಪ್ರವೇಶ ಒದಗಿಸಿತು. ಇದರ ಒಟ್ಟು ಫಲಿತಾಂಶವೆಂದರೆ ಟಿಎಂಸಿ ಆಳ್ವಿಕೆಯಲ್ಲಿ ಜನತೆಯ ಮೇಲೆ ಸಂಕಟಗಳ ಹೊರೆ. ಇದರಿಂದ ತೀಕ್ಷ್ಣಗೊಂಡಿರುವ ಕೋಮುವಾದಿ ಧ್ರುವೀಕರಣ ಬಂಗಾಲಿ ಜನತೆ ತಾವು ಹಲವು ಪೀಳಿಗೆಗಳ ಹಿಂದೆಯೇ ಬಿಟ್ಟು ಮುಂದೆ ಸಾಗಿ ಬಂದಿದ್ದೇವೆ ಎಂದು ಭಾವಿಸಿದ್ದ ಒಂದು ಐತಿಹಾಸಿಕ ಪರಂಪರೆ ಮತ್ತೆ ಎದ್ದು ಬಂದು ತನ್ನ ಬಲಿ ತೆಗೆದುಕೊಳ್ಳುವಂತಾಗಿದೆ. ಅದು ತನ್ನ ಹಗೆ ತೀರಿಸಿಕೊಳ್ಳುವಂತೆ ಕಾಣುತ್ತಿದೆ.

ಈ ಉಪಚುನಾವಣೆಗಳ ಫಲಿತಾಂಶಗಳ ಎಲ್ಲ ಚರ್ಚೆ, ವಿಶ್ಲೇಷಣೆಗಳಲ್ಲಿ ಒಂದು ಅಂಶವನ್ನು ಉದ್ದೇಶಪೂರ್ವಕವಾಗಿಯೇ ಉಪೇಕ್ಷಿಸಲಾಗುತ್ತಿದೆ. ಅದೆಂದರೆ ತ್ರಿಪುರಾದಲ್ಲಿ ಸಿಪಿಐ(ಎಂ)ನ ಭಾರೀ ಗೆಲುವು. ಇಲ್ಲಿನ ಒಂದು ವಿಧಾನಸಭಾ ಕ್ಷೇತ್ರದಲ್ಲೂ, ಅಲ್ಲಿನ ಶಾಸಕರು ಲೋಕಸಭೆಗೆ ಚುನಾಯಿತರಾದುದರಿಂದಾಗಿ ಉಪಚುನಾವಣೆ ನಡೆಯಿತು. ಇಲ್ಲಿಯೂ ಟಿಎಂಸಿ ಮತ್ತು ಬಿಜೆಪಿ ಬಿರುಸಿನ ಪ್ರಚಾರ ನಡೆಸಿದರು. ಆದರೆ ಸಿಪಿಐ(ಎಂ) ಅಭ್ಯರ್ಥಿ ದಾಖಲೆ ಅಂತರದಿಂದ ಗೆದ್ದರು, ಟಿಎಂಸಿ ಮತ್ತು ಬಿಜೆಪಿ ಅಭ್ಯರ್ಥಿಗಳೂ ಸೇರಿದಂತೆ ಇತರ ಎಲ್ಲ ಅಭ್ಯರ್ಥಿಗಳೂ ಠೇವಣಿ ಕಳಕೊಂಡಿದ್ದಾರೆ.




ಬಿಜೆಪಿ ಸೋತಿದ್ದೇಕೆ?

ಉಪಚುನಾವಣೆಗಳ ಫಲಿತಾಂಶಗಳಿಗೆ ಅದರಲ್ಲೂ ಉತ್ತರಪ್ರದೇಶ, ಗುಜರಾತ ಮತ್ತು ರಾಜಸ್ತಾನ ರಾಜ್ಯಗಳಿಗೆ, ಸಂಬಂಧಪಟ್ಟಂತೆ, ರಾಷ್ಟ್ರೀಯ ಮಾಧ್ಯಮಗಳು ಇದನ್ನು ಬಿಜೆಪಿಗೆ ಒಂದು ಎಚ್ಚರಿಕೆ ಎಂಬುದಕ್ಕಿಂತಲೂ ಆಚೆಗೆ ನೋಡುತ್ತಿವೆ. ಉದಾಹರಣೆಗೆ, ಟೈಂಸ್ ಆಫ್ ಇಂಡಿಯಾ ಈ ಉಪಚುನಾವಣೆಗಳ ಫಲಿತಾಂಶಗಳು ಮತ್ತು ಲೋಕಸಭಾ ಚಲುನಾವಣೆಗಳನ್ನು ಹೋಲಿಸುತ್ತ ಇದು ಪ್ರಚಂಡ ಆರೋಹಣದ ನಂತರ, ಅವರೋಹಣ ಎಂದರೆ, ಇನ್ನೊಂದು ಪತ್ರಿಕೆ(ದಿ ಮೇಲ್) ಇದು ಬಿಜೆಪಿಗೆ ಉಪಚುನಾವಣಾ ಆಘಾತ ಎಂದಿದೆ. ಎಲ್ಲ ರಾಷ್ಟ್ರೀಯ ದೈನಿಕಗಳೂ ಇದಕ್ಕೆ ವಿವಿಧ ಕಾರಣಗಳನ್ನು, ಅಂಶಗಳನ್ನು ಹೇಳುತ್ತ ಬರೆದಿರುವ ಸಂಪಾದಕೀಯಗಳಲ್ಲಿ ಒಂದು ಸರ್ವಸಾಮಾನ್ಯ ಅಂಶವೆಂದರೆ– ಬಿಜೆಪಿ ತನ್ನ ಮುಂದಿರುವ ಸಂಕೇತಗಳನ್ನು ಸ್ಪಷ್ಟವಾಗಿ ಕಾಣಬೇಕು ಎಂದು. ಬಿಜೆಪಿ, ತಾನು ಯಾವುದೇ ತರ್ಕಬದ್ಧ ಟಿಪ್ಪಣಿ ಅಥವ ಅಭಿಪ್ರಾಯವನ್ನು ಕೊಡುವ ಮೊದಲು ಫಲಿತಾಂಶಗಳನ್ನು ವಿವರವಾಗಿ ಪರೀಕ್ಷಿಸುವುದಾಗಿ ಹೇಳಿದೆ. ಆದರೆ, ಹೆಚ್ಚಿನ ಟಿಪ್ಪಣಿಗಳು 'ಲವ್ ಜಿಹಾದ್'ನಂತಹ ಘೋಷಣೆಗಳ ಸುತ್ತ ಕೋಮುವಾದಿ ಧ್ರುವೀಕರಣದ ಕರ್ಕಶ ಪ್ರಚಾರ ತದ್ವಿರುದ್ಧ ಪರಿಣಾಮ ಬೀರಿದೆ ಎಂದು ಎಚ್ಚರಿಸಿವೆ.

ಆದರೆ ಲವ್ ಜಿಹಾದ್, ಮತ್ತು ಮುಝಫ್ಫರ್ ನಗರ, ಸಹಾರಾಣ್‌ಪುರ ಮತ್ತು ಮೊರಾದಾಬಾದ್ ಕೋಮುಗಲಭೆಗಳನ್ನು ದೊಡ್ಡ ಚುನಾವಣಾ ಪ್ರಶ್ನೆಗಳನ್ನಾಗಿ ಮಾಡದಿರುವುದಕ್ಕೆ ಬಿಜೆಪಿ ಬೆಲೆ ತೆರಬೇಕಾಗಿ ಬಂದಿದೆ ಎಂದು ಹಿರಿಯ ಆರೆಸ್ಸೆಸ್/ಬಿಜೆಪಿ ಮುಖಂಡರು ಟಿಪ್ಪಣಿ ಮಾಡಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಈ ಮುಖಂಡರು ತಮ್ಮ ಹೆಸರು ಪ್ರಕಟಿಸಬಾರದು ಎಂದು ಹೇಳಿದ್ದಾರೆ. ಇದೀಗ ಪ್ರಸಕ್ತ ಮೋದಿ ಆಳ್ವಿಕೆಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿ. "2014ರ ಲೋಕಸಭಾ ಚುನಾವಣೆಗಳಲ್ಲಿ ನಮಗೆ ಮತಗಳು ಸಿಕ್ಕಿದ್ದು ನಮ್ಮ ಹಿಂದುತ್ವ ಸಂಬಂಧಿ ಅಜೆಂಡಾದಿಂದಾಗಿ ಎಂಬುದಂತೂ ವಾಸ್ತವ. ನಾವು

ಪುಟ 12 ಕ್ಕೆ

"2014ರ ಲೋಕಸಭಾ ಚುನಾವಣೆಗಳಲ್ಲಿ ನಮಗೆ ಮತಗಳು ಸಿಕ್ಕಿದ್ದು ನಮ್ಮ ಹಿಂದುತ್ವ ಸಂಬಂಧಿ ಅಜೆಂಡಾದಿಂದಾಗಿ ಎಂಬುದಂತೂ ವಾಸ್ತವ. ನಮ್ಮ ನಿಜವಾದ ಅಸ್ಮಿತೆಯನ್ನು ಮರೆತು ಎಲ್ಲರನ್ನು ಒಳಗೊಳ್ಳುವ ರಾಜಕೀಯವನ್ನು ಅನುಸರಿಸಿದಾಗಲೆಲ್ಲ ನಾವು ಚುನಾವಣೆಗಳನ್ನು ಕಳಕೊಂಡಿದ್ದೇವೆ" ಎಂದು ಆರೆಸ್ಸೆಸ್/ಬಿಜೆಪಿಯಹಿರಿಯ ಮುಖಂಡರು ಹೇಳಿರುವುದಾಗಿ 'ಮೇಲ್ ಟುಡೇ' ವರದಿ ಮಾಡಿದೆ.



ಮೋದೀಜೀಗೆ 'ಹ್ಯಾಪಿ ಬರ್ತ್‌ಡೇ'! 'ಅಭಿವೃದ್ಧಿ' ಕೇಕೋ ಅಥವ 'ಲವ್ ಜಿಹಾದ' ಇತ್ಯಾದಿ ಕೇಕ್‌ಗಳೋ? –ಸತೀಶ್ ಆಚಾರ್ಯ ವ್ಯಂಗ್ಯ

ಬೆಂಗಳೂರಿನಲ್ಲಿ ಹಗಲು ರಾತ್ರಿ ಧರಣಿ
ಪೌರ ಕಾರ್ಮಿಕರ ಯಶಸ್ವಿ ಹೋರಾಟ





ಆರ್. ರಾಮಕೃಷ್ಣ

ಸೆಪ್ಟೆಂಬರ್ 15–16 2014 ರಂದು ಬೆಂಗಳೂರು 'ಫ್ರೀಡಂ ಪಾರ್ಕ್'ನಲ್ಲಿ ಸಾವಿರಾರು ಜನ ಪೌರ ಕಾರ್ಮಿಕರು ನೆರೆದರು. ಪುರುಷರು ಮತ್ತು ಮಹಿಳೆಯರು. ಯುವಜನರು ಮಧ್ಯವಯಸ್ಕರರು ಮತ್ತು 'ನಿವೃತ್ತಿಯ ಹತ್ತಿರ'ದ ವಯಸ್ಸಿನವರು. ಮಾಸಲು ಬಟ್ಟೆಯ ಬಡವರು. ಸವೆದ ಚಪ್ಪಲಿಯವರು. ಹಾಸನ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಉತ್ತರ ಕನ್ನಡ ಹೀಗೆ ನಾನಾ ಜಿಲ್ಲೆಗಳಿಂದ ನಾನಾ ಪುರಸಭೆಗಳಿಂದ, ಊರುಗಳಿಂದ ಬಂದವರು. ಕರ್ನಾಟಕದ ನೂರಾರು ಊರುಗಳಲ್ಲಿ ಬೀದಿಗಳನ್ನು ಸ್ವಚ್ಚ ಮಾಡುವವರು. ಸಾರ್ವಜನಿಕ ನಲ್ಲಿಗಳ ಮೂಲಕ ಜನರಿಗೆ ನೀರು ಪೂರೈಸುವ ವ್ಯವಸ್ಥೆ ನೋಡಿಕೊಳ್ಳುವವರು. ವಿದ್ಯುತ್ ವ್ಯವಸ್ಥೆ ನಿರ್ವಹಿಸುವವರು. ಒಳಚರಂಡಿ ವ್ಯವಸ್ಥೆ ಕೆಟ್ಟು ನಿಂತಾಗ ಸರಿಪಡಿಸುವವರು. .. .. ಹೀಗೆ ನಾನಾ ವೃತ್ತಿಯ ಜನರು. ಅವರು ತಮ್ಮ ತಮ್ಮ ಊರುಗಳನ್ನು ಬಿಟ್ಟು, ತಮ್ಮ ದೈನಂದಿನ ಕೆಲಸಗಳನ್ನು ಬಿಟ್ಟು ಹಿಂಡು ಹಿಂಡಾಗಿ ಬೆಂಗಳೂರಿಗೆ ಬಂದಿದ್ದರು. ಕರ್ನಾಟಕ ರಾಜ್ಯದ ನಾನಾ ಜಿಲ್ಲೆಗಳಿಂದ ಬಂದ ಈ ಜನರು ಅಲ್ಲಿ ಸಾಮೂಹಿಕ ಧರಣ ಕುಳಿತರು.

ಧರಣ ಸ್ಥಳದಲ್ಲಿ ಅವರು ಎರಡು ದಿನ ಕುಳಿತರು. ಅಲ್ಲಿ ನೆರಳಿಗೆ ಚಪ್ಪರವಿತ್ತು. ಕುಡಿಯಲು ನೀರಿತ್ತು. ಅದು ಅಧಿಕೃತವಾಗಿ ಉಪವಾಸ ಸತ್ಯಾಗ್ರಹವೇನೂ ಆಗಿರಲಿಲ್ಲ. ಬುತ್ತಿ ತಂದವರು ಬಿಚ್ಚಿ ತಿಂದರು. ಆದರೆ ಬುತ್ತಿ ತರಲಾರದವರು!! ಸೌತೆಕಾಯಿ, ಸಿಬೇ.. – ಕಡಲೆ ಕಾಯಿ ಹೀಗೆ ಏನೋ ಒಂದು ತಿಂದು ಕಾಲದೂಡಿದರು. ಉಪವಾಸ ಮಾಡಿದವರು ಇದ್ದಿರಬಹುದು. ರಾತ್ರಿಚಳಿ ಅವರನ್ನು ಹೆದರಿಸಲಿಲ್ಲ.

ಉಪವಾಸ, ವನವಾಸಗಳು ಹೊಸತೇನು ಅಲ್ಲದ ಜನ ಅವರು. ಅವರು ತಮ್ಮೂರಲ್ಲೂ ಎಷ್ಟೋ ಸಾರಿ ಅರೆ ಹೊಟ್ಟೆಯ ಉಪವಾಸವನ್ನೇ ಮಾಡಬೇಕಾಗಿ ಬರುತ್ತದೆ. ಯಾಕೆಂದರೆ ಅವರಿಗೆ ಸಿಗುವ ಸಂಬಳ ಸೌಲಭ್ಯಗಳು ಅಷ್ಟೆ.

ಇಲ್ಲಿ ಕುಳಿತ ನೌಕರರ ಹಿಂಡು ಅದು, ದೂರದ ಬಾಗಲಕೋಟೆ ಜಿಲ್ಲೆಯ ಗುಳೇದ ಗುಡ್ಡ ಪುರಸಭೆಯಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರ ಹಿಂಡು. ಅವರಲ್ಲಿ 31 ವರ್ಷದ ರಮೇಶ್ ಎಂಬಾತ ಕಳೆದ 13 ವರ್ಷಗಳಿಂದ ಆ ಪುರಸಭೆಯಲ್ಲಿ ಕೆಲಸ ಮಾಡುತ್ತಾ ಬರುತ್ತಿದ್ದಾನೆ. ಈತ ಮತ್ತು ಈತನ ಜೊತೆಯಲ್ಲಿ ಕುಳಿತ ಹಲವು ಜನರು ಊರಿನ ಕಸ ಬಳಿದು ಸ್ವಚ್ಚ ಮಾಡುವ ಕೆಲಸಗಾರರು. ಈಗ ಆತನ ಸಂಬಳ ತಿಂಗಳಿಗೆ 3,700 ರೂ. ಗಳು. ಮತ್ತಾವ ಸೌಕರ್ಯವೂ ಇಲ್ಲ. ನೌಕರಿ ಕಾಯಂ ಅಲ್ಲ. ಹೊರ ಗುತ್ತಿಗೆದಾರನ ಮರ್ಜಿಯಲ್ಲಿ ಆತ ಕೊಟ್ಟಷ್ಟು ವೇತನ ಪಡೆದು ಕೆಲಸ ಮಾಡುತ್ತಾ ಬರುತ್ತಿದ್ದಾನೆ. ವೈದ್ಯಕೀಯ ಸೌಲಭ್ಯ, ವಯಸ್ಸಾದ ಕಾಲಕ್ಕೆಂದು ಭವಿಷ್ಯ ನಿಧಿ– ತಿಂಗಳ ಪಿಂಚಣಿ ಯಾವೂದೂ ಇಲ್ಲ. ಈ ಗುಂಪಿನಲ್ಲಿ ಆತನಿಗಿಂತಲೂ ಹಳಬರೂ ಇದ್ದಾರೆ. 'ಕತ್ತಿ(ಕತ್ತೆ) ಮೈಯಲ್ಲಿ ಕಸುವಿದ್ದಷ್ಟು ದಿನ ಕೆಲಸ ಮಾಡಿಸಿಕೊಂಡು ಓಡಿಸಿದಂಗ ..' ನಮ್ಮನ್ನು



ದುಡಿಸಿಕೊಂಡು ಓಡಿಸುತ್ತಾರಾ ಅಂತ ಇದ್ದವರಲ್ಲೇ ಹಿರಿಯಾನಾದ ಆ ಮನುಷ್ಯ ಅಂದಾಗ ಅವರ ಅತಂತ್ರ ಬದುಕು ಮತ್ತು ಎದೆಯಾಳದ ನೋವು ಕಾಣುತ್ತದೆ.

ಇಲ್ಲಿ ಕುಳಿತ ಒಬ್ಬರು ಟ್ರಾಕ್ಟರ್ ಚಾಲಕ. ಇದೇ ರೀತಿ ಪುರಸಭೆಯಲ್ಲಿ ಟ್ರಾಕ್ಟರ್ ಓಡಿಸುವ ವಾಸು ಎಂಬ ಚಾಲಕನಿಗೆ ಕೆಲಸದ ಮೇಲಿದ್ದಾಗ– ಅಂದರೆ ಟ್ರಾಕ್ಟರ್ ಓಡಿಸುವಾಗಲೇ ಅಪಘಾತ ಆಗಿ ಆತನ ಮಂಡಿಚಿಪ್ಪು ಹಾರಿತಂತೆ. ಆಸ್ಪತ್ರೆಯಲ್ಲಿ 15 ಸಾವಿರ ರೂಪಾಯಿ ಖರ್ಚು ಆಯಿತಂತೆ. ಕಾಂಟ್ರಾಕ್ಟ್‌ದಾರ 5,000 ರೂ ಕೊಟ್ಟು ಕೈತೊಳೆದುಕೊಂಡನಂತೆ. ಆ ನೌಕರನ ಭವಿಷ್ಯವೇನು? ಆತನ ಬದುಕನ್ನು ಕಾಪಾಡುವವರು ಯಾರು.?

ಹುನಗುಂದ ಊರಿನಲ್ಲಿ ಗಟಾರ ಬಳಿಯುವ ಎಲ್ಲವ್ವ, ಹನುಮವ್ವ.. ಎಲ್ಲರ ಕಥೆಯೂ ಅದೇ. ಕನಿಷ್ಠ ಕೆಲಸ ಮಾಡುವಾಗ ಅವರಿಗೆ ಕೈಗೆ ರಕ್ಷಣೆಗೆ ಕವಚ(ಗ್ಲೈಸು), ಕಾಲಿನ ರಕ್ಷಣೆಗೆ ಪಾದರಕ್ಷೆ(ಶೂ) ಕೂಡ ಕೊಡುವುದಿಲ್ಲವಂತೆ. ಯಾರಾದರೂ ಹಿರಿಯ ಅಧಿಕಾರಿಗಳು ಪರಿಶೀಲನೆಗೆಂದು ಬರುವಾಗ ಮಾತ್ರ ಪದರ್ಶನಕ್ಕೆಂದು ಅವುಗಳನ್ನು ಕೊಟ್ಟು ಮತ್ತೆ ವಾಪಸ್ಸು ಕಿತ್ತು ಕಛೇರಿಯಲ್ಲಿಡುವರಂತೆ. !! ಹೇಗಿದೆ ನೌಕರರ ಆರೋಗ್ಯ ರಕ್ಷಣೆಯ ವರಸೆ.

ಇಲ್ಲಿ ಟ್ರಾಕ್ಟ್‌ರ್ ಓಡಿಸುವ ಸಂಗಣ್ಣನಿಗೆ ತಿಂಗಳಿಗೆ 4,300 ರೂ. ಸಂಬಳ. ಮಧ್ಯವಯಸ್ಸಿನ ಮಕ್ಕಳೊಂದಿಗ ಹೇಗೆ ಸಂಸಾರ ನಡೆಸುವುದು. ಲೆಕ್ಕ ಮಾಡಿದರೆ ಈತನ ದುಡಿಮೆ ದಿನಕ್ಕೆ ಎಷ್ಟಾಯಿತು.? ಈತ ತನ್ನ ಒಂದು ದಿನದ ದುಡಿಮೆಯಲ್ಲಿ ನಾಲ್ಕು ಕೆ.ಜಿ. ಒಳ್ಳೆ ಅಕ್ಕಿಯನ್ನಾದರೂ ಕೊಂಡುಕೊಂಡು ಹೋಗಬಹುದಾ? 3,700 ರೂ.ಗಳ ತಿಂಗಳ ಸಂಬಳದ ರಮೇಶನ ದಿನದ ಆದಾಯದಲ್ಲಿ ಎರಡು ಕೆ.ಜಿ. ತೋಗರಿ ಬೆಳೆ ಯಾದರೂ ಬರುವುದಾ? ಇಲ್ಲ, ಬರುವುದೇ ಇಲ್ಲ...

ಇಂತಹ ಸ್ಥಿತಿಯಲ್ಲಿರುವ ಈ ಪೌರ ಕಾರ್ಮಿಕರಿಗೆ ನ್ಯಾಯ ಸಿಗುವಂತಾಗಬೇಕಾದರೆ ಅವರ ಸೇವೆ ಕಾಯಂ ಆಗಬೇಕು. ಅಂದರೆ ಅವರು ಸರಕಾರಿ ನೌಕರರಾಗಬೇಕು. ಸರಕಾರಿ ನೌಕರರಿಗೆ ಸಿಗುವ ಎಲ್ಲ ಸೌಲಭ್ಯಗಳೂ ಸಿಗಬೇಕು. ಅದಕ್ಕಾಗಿಯೇ ನಡೆದದ್ದು ಈ ಬೃಹತ್ ಧರಣ. ಪೌರ ಕಾರ್ಮಿಕರು ಹೀಗೆ ರಾಜ್ಯವ್ಯಾಪಿಯಾಗಿ ಸಂಘಟಿತರಾಗಿ ಹೋರಾಟದ ಕಣಕ್ಕೆ ಧುಮುಕುತ್ತಿರುವುದು ನಿಜಕ್ಕೂ ಒಂದು ಮಹತ್ವದ ಬೆಳವಣಿಗೆಯೇ. ಬಿಡಿ ಬಿಡಿ ಹೋರಾಟ ಸಂಘಟನೆಗಳಿವೆ. ಆದರೆ ಸುಸಂಘಟಿತ ರಾಜ್ಯವ್ಯಾಪಿ ಸಂಘಟನಾ ಜಾಲ ಚಳುವಳಿ ಈಗ ಬೇಕಾಗಿದೆ. ಅದನ್ನು ಈ ಹೋರಾಟ ಸಾಧಿಸಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಸಿಐಟಿಯು ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಗುತ್ತಿಗೆ ಪೌರ ಕಾರ್ಮಿಕರು ನಡೆಸುತ್ತಿದ್ದ ಈ ಹೋರಾಟ 16 ರ ಸಂಜೆ ಅಂತ್ಯಗೊಂಡಿತು. ಸೆ.22 2014 ರಂದು ಸಂಘದ ಮುಖಂಡರೊಂದಿಗೆ ಸಚಿವರು ಮತ್ತು ಅಧಿಕಾರಿಗಳು ಮಾತುಕತೆ ನಡೆಸುವ ಲಿಖಿತ ಭರವಸೆ ನೀಡಿದ್ದರಿಂದ ಹೋರಾಟ ಹಿಂಪಡೆಯಲಾಯಿತು. ಕೇವಲ ಸರಕಾರಿ ಹಣ ಪಡೆದು ಸಮಾವೇಶ ನಡೆಸಿ ಕೆಲವರು ಬಾರೀ ಪ್ರಚಾರ ಪಡೆದಿದ್ದರು. ಆದರೆ ನಿಜವಾಗಿಯೂ ಬಡ ಕಾರ್ಮಿಕರಿಗೆ ಏನು ಪ್ರಯೋಜನವಾಗಿರಲಿಲ್ಲ. ಇದರಿಂದಾಗಿ ಗುತ್ತಿಗೆ ಪದ್ದತಿ ರದ್ದು ಮಾಡಿ ಹಾಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರನ್ನೇ ಕಾಯಂ ಮಾಡಬೇಕು ಎಂಬುದು ಹೋರಾಟದ ಪ್ರಮುಖ ಬೇಡಿಕೆ–ಯಾಗಿತ್ತು. ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಸಂಘವು ಸಂಘಟಿಸಿದ್ದ ಈ ಚಳುವಳಿಗೆ ಹಲವು ಗೆಳೆಯರು ಬಂದು ಬೆಂಬಲ ನೀಡಿದ್ದರು.

ಮುನಿಸಿಪಲ್ ಕಾರ್ಮಿಕ ಸೇವೆಯನ್ನು ಖಾಯಂಗೊಳಿಸಬೇಕು ಹಾಗು ತಕ್ಷಣದಿಂದ ಸಮಾನ ಕೆಲಸಕ್ಕೆ ಸಮಾನ ವೇತನ ನೀತಿ ಜಾರಿಗೆಯಾಗಬೇಕೆಂಬುದು ಈ ಹೋರಾಟದ ಪ್ರಧಾನ ಬೇಡಿಕೆಗಳಾಗಿದ್ದವು.

ಕರ್ನಾಟಕ ರಾಜ್ಯ ಮುನಿಸಿಪಾಲಿಟಿಗಳಲ್ಲಿ ಹಾಗು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರು, ಒಳಚರಂಡಿ ನಿರ್ವಹಿಸುವ ಕಾರ್ಮಿಕರು, ವಾಹನ ಚಾಲಕರು, ನೀರಗಂಟಿಗಳು, ಎಲೆಕ್ಟ್ರೀಷಿಯನ್, ಎಸ್.ಎ.ಎಸ್ ನೌಕರರು ಕಛೇರಿ ಸಹಾಯಕರು 15–20 ವರ್ಷಗಳಿಂದ ಅತ್ಯಲ್ಪ ವೇತನಕ್ಕೆ ಕಾರ್ಮಿಕ ಕಾನೂನುಗಳ ಪ್ರಯೋಜನವು ಸಾಮಾಜಿಕ ಭದ್ರತೆ ಸೌಲಭ್ಯಗಳು ಇಲ್ಲದೆ ಜೀತದಾಳುಗಳಂತೆ ದುಡಿಯುತ್ತಾ ಬಂದಿದ್ದಾರೆ.

ಮುನಿಸಿಪಲ್ ಗುತ್ತಿಗೆ ನೌಕರರ ಸಮಸ್ಯೆಗಳ ಇತ್ಯರ್ಥಕ್ಕೆ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರಲು ಜಿಲ್ಲಾ ಮಟ್ಟದಲ್ಲಿ ಮಾರ್ಚ್ 2014, 13–14 ರಂದು ಧರಣಿ ಅದಕ್ಕೆ ಮುನ್ನ 2013 ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಬೆಳಗಾವಿ ಚಲೋ ನಡೆಸಲಾಗಿತ್ತು.

ಇದಾದ ನಂತರ ಇದೆ ಜುಲೈ 12, 2014 ರಂದು ಮಲ್ಲೇಶ್ವರಂನಲ್ಲಿ ನಡೆದ ಪೌರ ಕಾರ್ಮಿಕರ ರಾಜ್ಯ ಸಮಾವೇಶದಲ್ಲಿ ಸ್ವತಃ ಮುಖ್ಯ ಮಂತ್ರಿಗಳು ಸಮಾನ ಕೆಲಸಕ್ಕೆ ಸಮಾನ ವೇತನ ಹಾಗು ಹಂತ ಹಂತವಾಗಿ ಖಾಯಂಮಾತಿ ಗೊಳಿಸುವ ಭರವಸೆ ನೀಡಿದ್ದರು. ಹೀಗಾಗಿಯೂ ಸಹ ಪೌರಾಡಳಿತ ನಿರ್ದೇಶನಾಲಯ ಈ ಹಿಂದೆ 06.06.2014 ಸುತ್ತೋಲೆ ಸಂಖ್ಯೆ: ನಅಇ.124 ಟಿಎಮ್‌ಎಸ್–2012 ಸಮಾನ ವೇತನಕ್ಕೆ ಪೂರಕವಾಗಿ ಟೆ–ಂಡರ್ ಪ್ರಕ್ರಿಯೆ ನಿಲ್ಲಿಸಲು ಆದೇಶಿಸಲಾಗಿತ್ತು. ಆದರೆ ಮತ್ತೆ ಪೌರಾಡಳಿತ ನಿರ್ದೇಶನಾಲಯ ದಿನಾಂಕ: 28.06.2014 ಸುತ್ತೋಲೆ ಸಂಖ್ಯೆ:



ನಅಇ.124 ಟಿಎಮ್‌ಎಸ್–2012 ಮತ್ತೊಂದು ಸುತ್ತೋಲೆ ಹೊರಡಿಸಿ ಟೆಂಡರ್ ಪದ್ಧತಿಯನ್ನು ಮುಂದುವರಿಸಲು ಸೂಚಿಸಿದೆ. ಅಂದರೆ ಮುಖ್ಯಮಂತ್ರಿಗಳ ಭರವಸೆ ಜಾರಿಯಾಗಲಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘವು ತುರ್ತು ಹೋರಾಟ ಸಂಘಟಿಸುವುದು ಅನಿವಾರ್ಯವಾಯಿತು.

ಸರ್ಕಾರಕ್ಕೆ ಈಗಾಗಲೇ ಸಲ್ಲಿಕೆಯಾಗಿರುವ ಹೋರಾಟದ ಹಕ್ಕೊತ್ತಾಯ ಪತ್ರದಲ್ಲಿ ಈ ಕೆಳಕಂಡ ಅಂಶಗಳಿವೆ.

ಬೇಡಿಕೆಗಳು

ಹಾಲಿ ಗುತ್ತಿಗೆ ಆಧಾರದಲ್ಲಿ ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣಪಂಚಾಯ್ತಿ ಪುರಸಭೆ, ನಗರಸಭೆ, ನಗರಪಾಲಿಕೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರು, ವಾಟರ್‌ಮ್ಯಾನ್, ಡ್ರೈವರ್ಸ್, ಕಂಪ್ಯೂಟರ್ ಆಪರೇಟರ್ಸ್, ಎಲೆಕ್ಟ್ರೀಷಿಯನ್‌ಗಳು, ಕಛೇರಿ ಸಹಾಯಕರು, ಎಸ್.ಎ.ಎಸ್ ನೌಕರರ ಸೇವೆಗಳನ್ನು ಖಾಯಂಗೊಳಿಸಬೇಕು. ಕಾಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಬೇಕು. ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ನೇಮಕಾತಿಗೆ ಅವಕಾಶ ನೀಡದೆ ಹಾಲಿ ದುಡಿಯುತ್ತಿರುವ ಗುತ್ತಿಗೆ ಮುನಿಸಿಪಲ್ ನೌಕರರನ್ನು ಖಾಯಂ ಗೊಳಿಸಲು ಅಗತ್ಯ ಕಾನೂನು ತಿದ್ದುಪಡಿ ಮಾಡಬೇಕು. ಖಾಯಂಗೊಳಿಸುವ ತನಕ ಎಲ್ಲಾ ಗುತ್ತಿಗೆ ಮುನಿಸಿಪಲ್ ನೌಕರರಿಗೆ ಶಾಸನ ಬದ್ದ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಆದೇಶಿಸಬೇಕು. ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಬಿಡಬೇಕು. ಉಚಿತವಾಗಿ ಬೆಳಗಿನ ಉಪಾಹಾರ ನೀಡಬೇಕು. ಪೌರ ಕಾರ್ಮಿಕರ ರಾಜ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವ ಎಲ್ಲಾ ಭರವಸೆಗಳ ಈ ಕೂಡಲೇ ಜಾರಿಗೆ ಒತ್ತಾಯಿಸಿ. ಜನ ಸಂಖ್ಯೆ ಹಾಗೂ ಬೆಳೆಯುತ್ತಿರುವ ನಗರಕ್ಕೆ ತಕ್ಕಂತೆ ಮುನಿಸಿಪಲ್ ನೌಕರರ ಸಂಖ್ಯೆಯನ್ನೂ ಹೆಚ್ಚಿಸಬೇಕು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮುನಿಸಿಪಲ್ ನೌಕರರ ಸಂಘಟನೆಯ ಗೌರವಾಧ್ಯಕ್ಷರಾದ ಎಸ್. ಪ್ರಸನ್ನ ಕುಮಾರ್, ಅಧ್ಯಕ್ಷರಾದ ಹರೀಶ್ ನಾಯಕ್, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಉಪಾಧ್ಯಕ್ಷರುಗಳಾದ ಶಾನೂರು ಗುಡ್ಲಾರ್, ಧರ್ಮೇಶ್, ಜಂಟಿ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ, ಲಕ್ಷ್ಮಣ್ ಹಂದ್ರಾಳ, ಪ್ರಕಾಶ್, ಕೆ.ಮಂಜುನಾಥ್, ಖಜಾಂಜಿ ಸಿ. ವೆಂಕಟೇಶ್ ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು. ನಗರಾಭಿವೃದ್ಧಿ ಸಚಿವರಾದ ವಿನಯ್ ಕುಮಾರ್ ಸೋರಕೆ, ಪೌರಾಡಳಿತ ಸಚಿವ ಖಮರ–ಉಲ್–ಇಸ್ಲಾಮ್, ಸಮಾಜ ಕಲ್ಯಾಣ ಇಲಾಖೆ ಹೆಚ್. ಆಂಜನೇಯ ಈ ಮೂರು ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಈ ಪೌರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಈಗ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೂ ಒತ್ತಡ ಬಿದ್ದಿದೆ.

ಗುತ್ತಿಗೆ ಕಾರ್ಮಿಕರ ರಾಜ್ಯಮಟ್ಟದ ರ್‍ಯಾಲಿ

ಜಾಗತೀಕರಣದ ಯುಗದಲ್ಲಿ ಕಾರ್ಮಿಕರ ಉದ್ಯೋಗ ಭದ್ರತೆ, ಜೀವನ ಭದ್ರತೆ, ಮುಂತಾದ ವಿಷಯಗಳು ಹಿನ್ನೆಲೆಗೆ ಸರಿದು ಎಲ್ಲದರಲ್ಲೂ ಮಾಲೀಕರ, ಬಂಡವಾಳಗಾರರ, ಶ್ರೀಮಂತ ಉದ್ಯಮಿಗಳು ಮತ್ತು ಆಡಳಿತ ಮಂಡಳಿಗಳ ಲಾಭದ ಹಿತಾಸಕ್ತಿಗಳೇ ಮೇಲುಗೈ ಸಾಧಿಸಿವೆ. ಇಂದು ಎಲ್ಲೆಡೆ ಕೈಗಾರಿಕಾ ರಂಗದಲ್ಲೂ ಸರ್ಕಾರದ ನಾನಾ ಇಲಾಖೆಗಳಲ್ಲೂ ಗುತ್ತಿಗೆ ಪದ್ದತಿಯ ಹಾವಳಿ ವಿಪರೀತವಾಗಿದೆ. ಕಾರ್ಮಿಕ ಕಾನೂನುಗಳನ್ನು ಜಾರಿಮಾಡದೇ ಕಾರ್ಮಿಕ ಸೌಲಭ್ಯಗಳನ್ನು ನೀಡದೆ, ದುಡಿಮೆಗೆ ಖಾಯಂ ಕಾರ್ಮಿಕರಿಗೆ ಕೊಡುವಂತೆ ಪ್ರತಿಫಲವನ್ನು ನೀಡದೇ ಅತ್ಯಂತ ಅಗ್ಗವಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುವ ಕಾರ್ಯಯೋಜನೆಯ ಮೂರ್ತ ರೂಪವೇ ಇಂದು ಎಲ್ಲೆಡೆ ಗುತ್ತಿಗೆ ಪದ್ದತಿ ಹೆಚ್ಚುತ್ತಿರುವುದರ ಕಾರಣವಾಗಿದೆ. ಆಳುವ ವರ್ಗಗಳ ಮತ್ತು ಆಳುವ ಸರ್ಕಾರಗಳ ಇಂತಹ ವಂಚಕ ಯೋಜನೆ ನೀತಿಗಳನ್ನು ಹಿಮ್ಮೆಟ್ಟಿಸಿ ಕಾರ್ಮಿಕರು ನ್ಯಾಯಪಡೆಯುವಂತಾಗಲು ಸಾಕಷ್ಟು ಬಲಿಷ್ಟವಾದ ಪ್ರತಿರೋಧವನ್ನೇ ಬೆಳೆಸಬೇಕಿದೆ.

ಈ ಹಿನ್ನೆಲೆಯಲ್ಲಿ ಖಾಯಂ ಸ್ವರೂಪದ ಕೆಲಸಗಳಲ್ಲಿ ಗುತ್ತಿಗೆ ಪದ್ದತಿ ರದ್ದು ಮಾಡುವುದು, ಸಮಾನ ಕೆಲಸಕ್ಕೆ ಸಮಾನ ವೇತನ, ಮೂಲ ಮಾಲಿಕನ ಖಾತೆಯಲ್ಲಿ ಭವಿಷ್ಯನಿಧಿ ಆರಂಭ, ಮೊದಲಾದ ಬೇಡಿಕೆಗಳ ಆಧಾರದಲ್ಲಿ ಇದೇ ಮೊದಲ ಬಾರಿಗೆ ಸಿಐಟಿಯು ನೇತೃತ್ವದಲ್ಲಿ ಸಾವಿರಾರು ಗುತ್ತಿಗೆ ಕಾರ್ಮಿಕರು ಬೆಂಗಳೂರಿನಲ್ಲಿ ಬಾರೀ ಪ್ರದರ್ಶನ ನಡೆಸಿದರು. ವಿವಿಧ ಕಾರ್ಖಾನೆಗಳ ಹಾಗೂ ಕೇಂದ್ರ–ರಾಜ್ಯ ಸರಕಾರಗಳ ವಿವಿಧ ಇಲಾಖೆಗಳ ಸುಮಾರು 18 ಗುತ್ತಿಗೆ ಕಾರ್ಮಿಕ ಸಂಘಗಳ ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ನಗರದ ಟೌನ್‌ಹಾಲ್ ಎದುರು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರು ಸೆಪ್ಟೆಂಬರ್ 16, 2014 ರಂದು ಹೋರಾಟಕ್ಕೆ ಚಾಲನೆ ನೀಡಿದರು. ಅಲ್ಲಿಂದ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿದರು. ಫ್ರೀಡಂ ಪಾರ್ಕ್ ಬಳಿ ಮತ್ತೆ ಸಾವಿರಾರು ಪೌರ ಕಾರ್ಮಿಕರು ಈ ಹೋರಾಟದಲ್ಲಿ ಭಾಗಿಯಾದರು.

ಗುತ್ತಿಗೆ ಕಾರ್ಮಿಕರ ಸಂಖ್ಯೆಯು ಖಾಸಗಿ ಹಾಗೂ ಸರ್ಕಾರಿ ಎರಡು ಕ್ಷೇತ್ರಗಳಲ್ಲೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬಂದಿದೆ. ಗುತ್ತಿಗೆ ಕಾರ್ಮಿಕರ ಶೋಷಣೆಯು ಅವ್ಯಾಹತವಾಗಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಅವಿರತವಾದ ಹೋರಾಟವನ್ನು ಗುತ್ತಿಗೆ ಕಾರ್ಮಿಕರು ನಡೆಸುತ್ತಾ ಬಂದಿದ್ದಾರೆ. ಈ ಹಿಂದೆ 2014 ಜನವರಿ 23 ರಂದು ನಡೆಸಿದ ವಿಧಾನ ಸೌಧ ಚಲೋ ಸಂದರ್ಭದಲ್ಲಿ ಕಾರ್ಮಿಕ ಸಚಿವರು ಆಗಮಿಸಿ ಮನವಿ ಸ್ವೀಕರಿಸಿ 2014 ಜನವರಿ 27 ರಂದು ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಸಭೆ ನಡೆಸಿ ಬೇಡಿಕೆಗಳ ಬಗೆಗೆ ಪರಿಶೀಲಿಸಿದ್ದರು. ಪರಿಣಾಮವಾಗಿ ತಮಿಳುನಾಡು ಮತ್ತು ಆಸ್ಸಾಂ ರಾಜ್ಯಗಳಲ್ಲಿ ರೂಪಿಸಿರುವಂತೆ ಗುತ್ತಿಗೆ ಕಾರ್ಮಿಕರು ಟ್ರೈನಿಗಳು ಮತ್ತು ಮುಂತಾದ ಕಾರ್ಮಿಕರು/ನೌಕರರನ್ನು ಖಾಯಂಗೊಳಿಸಲು ಅಗತ್ಯ ಇರುವ ಶಾಸನವನ್ನು ರಾಜ್ಯದಲ್ಲೂ ರೂಪಿಸಲು ಕರಡು ಪ್ರಸ್ತಾಪವು ರಾಜ್ಯ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ತಯಾರಾಗಿರುವ ವರದಿ ಇದೆ.



ವಿಧಾನ ಸೌಧ ಚಲೋದಲ್ಲಿ ನಗರದ ಹಾಗೂ ರಾಜ್ಯದ ವಿವಿಧ ಕೈಗಾರಿಕೆಗಳ ಗುತ್ತಿಗೆ ಕಾರ್ಮಿಕರು, ಬಿ.ಬಿ.ಎಂ.ಪಿ. ಕಂಪೂಟರ್ ಆಪರೇಟರ್ಸ್, ಗುತ್ತಿಗೆ ಪೌರ ಕಾರ್ಮಿಕರು, ಆಸ್ಪತ್ರೆ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಗುತ್ತಿಗೆ ಕಾರ್ಮಿಕರು, ಅಬಕಾರಿ ಇಲಾಖೆಯ ಬಾಹ್ಯ ಮೂಲ ಗುತ್ತಿಗೆ ಕಾರ್ಮಿಕರು, ಕರ್ನಾಟಕ ರಾಜ್ಯ ಪಾನೀಯ ನಿಗಮ ಗುತ್ತಿಗೆ ಕಾರ್ಮಿಕರು, ರಕ್ಷಣಾ ಇಲಾಖೆ ಗುತ್ತಿಗೆ ಕಾರ್ಮಿಕರು, ಅರೋಗ್ಯ ಇಲಾಖೆಯ ಗುತ್ತಿಗೆ ಕಾರ್ಮಿಕರು, ಬಿ.ಎಸ್.ಎನ್.ಎಲ್. ಗುತ್ತಿಗೆ ಕಾರ್ಮಿಕರು, ಮೈಕೋ, ಐಟಿಐ, ಬಿಇಎಂಎಲ್, ಮುಂತಾದ ಹಲವಾರು ಇಲಾಖೆಗಳ ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದರು.



ಸಿ.ಐ.ಟಿ.ಯು. ರಾಜ್ಯ ಸಮಿತಿ, ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಈ ಸಂದರ್ಭದಲ್ಲಿ ಮಾತನಾಡಿ ಮಾತನಾಡಿ ಗುತ್ತಿಗೆ ಕಾರ್ಮಿಕರು, ಟ್ರೈನಿಗಳು ಮುಂತಾದವರನ್ನು ಖಾಯಂಗೊಳಿಸಲು ತಮಿಳುನಾಡು ಮತ್ತು ಅಸ್ಸಾಂ ರಾಜ್ಯಗಳ ರೀತಿಯಲ್ಲಿ ಕೈಗಾರಿಕಾ ಸಂಸ್ಥೆಗಳ (ಕಾರ್ಮಿಕರಿಗೆ ಖಾಯಂ ಸ್ಥಾನಮಾನ ಖಾತ್ರಿಗೊಳಿಸುವ) ಶಾಸನ ರೂಪಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನಿಯಮದ ರೀತಿಯಲ್ಲಿ ಅದನ್ನು ಖಾತ್ರಿಪಡಿಸಲು, ಪ್ರಧಾನ ಮಾಲೀಕರ ಖಾಯಂ ಕಾರ್ಮಿಕರಿಗೆ ನೀಡಲಾಗುವ ಆರಂಭಿಕ ವೇತನವನ್ನು ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಖಾತ್ರಿಗೊಳಿಸಲು ಮತ್ತು ಪ್ರಧಾನ ಮಾಲೀಕರ ಖಾತೆಯಲ್ಲಿ ಗುತ್ತಿಗೆ ಕಾರ್ಮಿಕ ಭವಿಷ್ಯ ನಿಧಿ (ಪಿಎಫ್) ಹಾಗೂ ಇಎಸ್‌ಐ ಖಾತೆ ತೆರೆಯುವುದನ್ನು ಖಾತ್ರಿಪಡಿಸಲು ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯ್ದೆ, 1970 ಕ್ಕೆ ರಾಜ್ಯ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು. ಕೇಂದ್ರ ಸರ್ಕಾರವು ತರಲು ಉದ್ದೇಶಿಸಿರುವ ಕೇಂದ್ರ ಕಾರ್ಮಿಕರ ಶಾಸನಗಳಿಗೆ ತಿದ್ದುಪಡಿಗಳಲ್ಲಿನ ಕಾರ್ಮಿಕ ವಿರೋಧಿ ಅಂಶಗಳನ್ನು ಕೈ ಬಿಡಬೇಕು ಎಂದೂ ಅವರು ಆಗ್ರಹಿಸಿದರು.

ಗುತ್ತಿಗೆ ಕಾರ್ಮಿಕರ ಉಪಸಮಿತಿಯ ಸಂಚಾಲಕರಾದ ಕೆ.ಎನ್. ಉಮೇಶ್‌ರವರು ಈ ಸಂದರ್ಭದಲ್ಲಿ ಮಾತನಾಡಿ ಇತ್ತೀಚಿನ ನೌಕರರ ಭವಿಷ್ಯ ನಿಧಿ ಕಾಯ್ದೆ ಆಡಿಯ ಅಧಿಸೂಚನೆಯ ಮೂಲಕ ರೂ.15,000/– ಕ್ಕಿಂತ ಹೆಚ್ಚು ವೇತನಕ್ಕೆ ಹಾಲಿ ಪಾವತಿಸಲಾಗುತ್ತಿರುವ ಮಾಲೀಕರು ಮತ್ತು ನೌಕರರು ವಂತಿಗೆಯನ್ನು ಮುಂದುವರೆಸಲು ಆರು ತಿಂಗಳೊಳಗೆ ಅನುಮತಿ ಪಡೆಯಬೇಕೆಂದು ಶರತ್ತು ವಿಧಿಸುವ, ಕೇಂದ್ರ ಸರ್ಕಾರವು ಭರಿಸಬೇಕಿರುವ ವಂತಿಗೆಯನ್ನು ನೌಕರರ ವಂತಿಗೆಗೆ ವರ್ಗಾಯಿಸುವ ಹಾಗು ಹಾಲಿ ಕೊನೆಯ ಹನ್ನೆರಡು ತಿಂಗಳ ವೇತನ ಸರಸಾರಿಯ ಬದಲು ಕೊನೆಯ 60 ತಿಂಗಳ ಪ್ರೋರೇಟಾ ಸರಾಸರಿ ಆಧರಿಸಿ ಪಿಂಚಣಿ ಲೆಕ್ಕ ಹಾಕುವ ವಿಧಾನ ಕೈಬಿಡಬೇಕು. ಇ.ಎಸ್.ಐ.ಸಿ ಆಡಿಯ ಆಸ್ಪತ್ರೆ ಹಾಗು ನೌಕರರು ಮತ್ತು ವೈದ್ಯರ ಅನುಪಾತವನ್ನು ಹೆಚ್ಚಿಸಿ ಯೋಜನೆಯನ್ನು ಸಿಮೀತಗೊಳಿಸುವುದನ್ನು ನಿಲ್ಲಿಸಬೇಕು. ಕನಿಷ್ಟ ವೇತನ ಕಾಯ್ದೆ, 1948 ಕ್ಕೆ ರಾಜ್ಯ ತಿದ್ದುಡಿಯನ್ನು ತಂದು ಎಲ್ಲಾ ಅಧಿಸೂಚಿತ ಉದ್ಯೋಗಳಿಗೂ ರಾಜ್ಯವ್ಯಾಪಿ ಸಮಾನ ಕನಿಷ್ಟ ವೇತನ ಮಾಸಿಕ ರೂ.15,000/– ಖಾತ್ರಿಪಡಿಸಬೇಕು. ಹಾಲಿ ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಜಾರಿಗಾಗಿ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ನಂತರ ಕಾರ್ಮಿಕ ಮುಖಂಡರ ನಿಯೋಗವು ಕಾರ್ಮಿಕ ಆಯುಕ್ತರನ್ನು ಕಂಡಿತು. ಈ ಚಳುವಳಿಯು ಎತ್ತಿರುವ ಪ್ರಶ್ನೆಗಳು ಬೇಡಿಕೆಗಳ ಕುರಿತು ಚರ್ಚಿಸಲು ಇದೇ ಸೆಪ್ಟೆಂಬರ್ 30 ರಂದು ಬೆಳಿಗ್ಗೆ ಸಂಘಟನೆಯ ಪ್ರತಿನಿಧಿಗಳೊಂದಿಗೆ ಮಾತುಕತೆಗೆ ಸಮಯ ನಿಗದಿಯಾಗಿದೆ. ಫಲಿತಾಂಶವನ್ನು ಕಾದು ನೋಡಬೇಕಿದೆ. ಆಯುಕ್ತರನ್ನು ಕಂಡ ನಿಯೋಗದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಮೀನಾಕ್ಷಿ ಸುಂದರಂ, ಮುಜೀಬ್, ಕೆ.ಎನ್. ಉಮೇಶ್, ಕೆ. ಮಹಾಂತೇಶ್ ಮುಂತಾದವರಿದ್ದರು.

ಬಿಸಿಯೂಟ ನೌಕರಳ ಮೇಲೆ ಸಾಮೂಹಿಕ ಅತ್ಯಾಚಾರ – ವ್ಯಾಪಕ ಪ್ರತಿಭಟನೆ

ಶೇಕ್ಷಾ ಖಾದ್ರಿ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಬಂಗಾಲಿ ಪುನರ್ವಸತಿಕ್ಯಾಂಪ್ ನಂ–4 ರ ನಿವಾಸಿ ಮಹಿಳೆ ತಾತಯ್ಯಕ್ಯಾಂಪಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಬಿಸಿಯೂಟ ಯೋಜನೆಯ ಮುಖ್ಯ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದರು. ದಿನಾಂಕ:– 05–09–2014 ರಂದು ಮಧ್ಯಾಹ್ನ ಬಿಸಿಯೂಟದ ಕೆಲಸ ಮುಗಿಸಿ, ಬಿಸಿಯೂಟದ ಮಾಸಿಕ ವರದಿ ನೀಡಲು ಬರ್ಮಾಕ್ಯಾಂಪಿನಿಂದ ಸಿಂಧನೂರು ನಗರದ ತಾಲೂಕಾ ಪಂಚಾಯತಿಗೆ ಬರಲು ಆಟೋ ಹತ್ತಿದ್ದಾಳೆ. (ಬರ್ಮಾ ಮತ್ತು ಬಂಗಾಲಿ ಕ್ಯಾಂಪುಗಳಿಗೆ ಬಸ್ಸಿನ ಸೌಕರ್ಯವಿಲ್ಲ.) ನಗರದಿಂದ 12 ಕಿ.ಮೀ ಇರುವ ಬರ್ಮಾಕ್ಯಾಂಪ್‌ನಿಂದ ಆಟೋದಲ್ಲಿ ಬರುವ ಸಮಯದಲ್ಲಿ ಆಟೋದಲ್ಲಿ ಆಟೋ ಚಾಲಕ ಹಾಗೂ ಮುಖ್ಯಡುಗೆಯವರು ಇಬ್ಬರೇ ಇದ್ದಾರೆ. ಮಧ್ಯಾಹ್ನ 1–30 ಕ್ಕೆ ಬರ್ಮಾಕ್ಯಾಂಪ್‌ನಿಂದ ಹೊರಟ ಆಟೋ ಅರಗಿನಮರಕ್ಯಾಂಪ್ (ಸಿಂಧನೂರು–ರಾಯಚೂರು ಮುಖ್ಯ ರಸ್ತೆ) ತಲುಪಿದ ನಂತರ ಅಲ್ಲಿ ಇಬ್ಬರು ಪ್ರಯಾಣಿಕರಂತೆ ಆಟೋ ಹತ್ತಿದ್ದಾರೆ. ಸಿಂಧನೂರು ಕಡೆ ಬರಬೇಕಾದ ಆಟೋ ರಾಯಚೂರು ರಸ್ತೆ ಕಡೆ ಹೊರಟಿದೆ. ಇದನ್ನು ಆಟೋದಲ್ಲಿದ್ದ ಬಿಸಿಯೂಟದ ಸಿಬ್ಬಂದಿ ಮಹಿಳೆ ಪ್ರಶ್ನಿಸುತ್ತಿದ್ದಂತೆ ಪ್ರಯಾಣಿರಂತೆ ಆಟೋ ಹತ್ತಿದ ಇಬ್ಬರು ಮಹಿಳೆ ಬಾಯಿಗೆ ಬಟ್ಟೆ ತುರುಕಿ ಆಟೋದಲ್ಲಿದ್ದ ಟೇಪ್ ರೆಕಾರ್ಡರ್ ಜೋರಾಗಿ ಸೌಂಡ್ ಬಿಟ್ಟಿದ್ದಾರೆ. ಅಲ್ಲಿಂದ ಪೋತ್ನಾಳ್ ದಾಟಿ ಸುಮಾರು 15 ಕಿ.ಮೀ. ದೂರ ಕರೆದುಕೊಂಡು ಹೋಗಿ ಮುಖ್ಯ ರಸ್ತೆಯ ಪಕ್ಕದಲ್ಲಿ ಆಟೋ ನಿಲ್ಲಿಸಿ ಆಟೋ ಚಾಲಕ ಸೇರಿ 3 ಜನ ಸಾಮೂಹಿಕ ಆತ್ಯಾಚಾರ ಮಾಡಿದ್ದಾರೆ. ನಂತರದಲ್ಲಿ 3 ಜನ ಆ ಮಹಿಳೆಯನ್ನು ಸಾಯಿಸುವ ಕುರಿತು ಚರ್ಚಿಸುವ ಸಮಯದಲ್ಲಿ, ಅತ್ಯಾಚಾರಕ್ಕೊಳಗಾದ ಮಹಿಳೆ ನನ್ನನ್ನು ಸಾಯಿಸಬೇಡಿ ನನಗೆ ಒಬ್ಬಳು ಮಗಳಿದ್ದಾಳೆ. ಈ ಘಟನೆ ಕುರಿತು ಯಾರಿಗೂ ಹೇಳುವುದಿಲ್ಲ ಎಂದು ಅಂಗಲಾಚಿದ ನಂತರ 1–30 ರಿಂದ ಸಾಯಂಕಾಲ 4–00 ಗಂಟೆವರೆಗೆ ಅಲ್ಲಿಯೇ ಕುಳಿತು ನಂತರ ನಗರದ ಕಡೆ ಅದೇ ಆಟೋದಲ್ಲಿ ಕರೆದುಕೊಂಡು ಬರುವ ಸಮಯದಲ್ಲಿ ನಗರದಿಂದ 2 ಕಿ.ಮೀ ದೂರದಲ್ಲಿ ಮುಖ್ಯರಸ್ತೆ ಪಕ್ಕದಲ್ಲಿರುವ ಪೆಟ್ರೋಲ್‌ಬಂಕ್‌ನಲ್ಲಿ ಪರಿಚಿತನೊಬ್ಬ ಪೆಟ್ರೋಲ್ ಹಾಕಿಸಿಕೊಳ್ಳುವುದನ್ನು ಗಮನಿಸಿದ ಮಹಿಳೆ ಚಲಿಸುವ ಆಟೋದಿಂದ ಹೊರಗೆ ಜಿಗಿದಿದ್ದಾಳೆ. ಇದನ್ನು ಕಂಡ ಪೆಟ್ರೋಲ್ ಬಂಕ್ ಹತ್ತಿರದವರು ಓಡಿ ಬಂದಿದ್ದಾರೆ. ಆಗ ಆಟೋದ ಮೂವರು ಆಟೋ ನಿಲ್ಲಿಸದೇ ಆಟೋ ಸಮೇತ ಪರಾರಿಯಾಗಿದ್ದಾರೆ. ಅರೆಪ್ರಜ್ಞೆಯಲ್ಲಿದ್ದ ಮಹಿಳೆಯಿಂದ ವಿಷಯ ತಿಳಿಯಲು ಒಂದು ಗಂಟೆ ಬೇಕಾಗಿದೆ. ಅತ್ಯಾಚಾರದ ಖಚಿತ ಮಾಹಿತಿ ಸಿಕ್ಕ ನಂತರ ಅವರ ಕುಟುಂಬದ ಸದಸ್ಯರು ಬಿಸಿಯೂಟ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ರೇಣುಕಮ್ಮ ಇವರಿಗೆ ಮಾಹಿತಿ ನೀಡಿದ್ದಾರೆ ಹಾಗೂ ಕಾ॥ ರೇಣುಕಮ್ಮ ಅವರನ್ನು ಪೋಲೀಸ್ ಸ್ಟೇಷನ್ನಿಗೆ ಬರುವಂತೆ ಸೂಚಿಸಿದ್ದಾರೆ. ನಂತರ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೇಕ್ಷಾಖಾದ್ರಿ, ಸಿಐಟಿಯು ತಾಲೂಕಾ ಕಾರ್ಯದರ್ಶಿ ಯಂಕಪ್ಪ ಕೆಂಗಲ್, ಬಿಸಿಯೂಟನ ನೌಕರರ ಸಂಘದ ಪದಾಧಿಕಾರಿಗಳಾದ ಶರಣಮ್ಮ, ವಾಣಿ. ಎಸ್.ಖಾದ್ರಿ, ಇವರಿಗೆ ಮಾಹಿತಿ ನೀಡಿ ಪೋಲೀಸ್ ಸ್ಟೇಷನ್ನಿಗೆ ತೆರಳಿ ಅಲ್ಲಿಂದ ಆಟೋದಲ್ಲಿ ಸರಕಾರಿ ದವಾಖಾನೆಗೆ ಕರೆತರಲಾಗಿದೆ.


ಸಿಐಟಿಯುನಿಂದ ಪ್ರತಿಭಟನೆ


ಬಂಗಾಲಿ ಪುನರ್ವಸತಿ ನಿವಾಸಿಗಳಿಂದ ಬೃಹತ್ ಪ್ರತಿಭಟನೆ

ಸರಕಾರಿ ದವಾಖಾನೆಯ ಹೀನಾಯ ಸ್ಥಿತಿ

ಸಾಯಂಕಾಲ 7–30 ಕ್ಕೆ ಸಿಐಟಿಯು ಹಾಗೂ ಬಿಸಿಯೂಟ ನೌಕರ ಸಂಘದ ಪಧಾಧಿಕಾರಿಗಳು ಮಹಿಳೆಯನ್ನು ಆಸ್ಪತ್ರೆಗೆ ಕರೆತಂದಾಗ ಆಸ್ಪತ್ರೆಯಲ್ಲಿ ಇಬ್ಬರು ಸ್ಟಾಫ್ ನರ್ಸ್‌ಗಳನ್ನು ಹೊರತುಪಡಿಸಿ ಯಾರೂ ಇರಲಿಲ್ಲ. ಅರೆಪ್ರಜ್ಞೆಯಲ್ಲಿದ್ದ ಮಹಿಳೆಯನ್ನು ಒಳಗೆ ಕರೆದುಕೊಂಡು ಹೋಗಲು ಸಿಬ್ಬಂದಿಯೂ ಇರಲಿಲ್ಲ. ಸ್ಟಾಫ್‌ನರ್ಸ್‌ಗಳ ಸಹಾಯದಿಂದ ಪಾಳಿಯ ಮೇಲೆ ಇದ್ದ ವೈದ್ಯರ ನಂಬರ್(ಇಲಾಖೆ ನೀಡಿದ ಸಿಮ್) ಗೆ ಕರೆ ಮಾಡಿದರೆ ನಾಟ್ ರೀಚೆಬಲ್. ಇತರ ವೈದ್ಯರಿಗೆ ಸಂಪರ್ಕಿಸಿದರೆ ಎಲ್ಲ ವೈದ್ಯರ ಪೋನ್‌ಗಳು ನಾಟ್ ರೀಚೆಬಲ್ ಆಗಿದ್ದವು. ಅನಿವಾರ್ಯವಾಗಿ ಒಂದು ಗಂಟೆ ನಂತರ ಜಿಲ್ಲಾಧಿಕಾರಿಗೆ ನೇರಫೋನ್‌ನಲ್ಲಿ ಸಂಪರ್ಕಿಸಿ ನಡೆದ ಘಟನೆ ಮಾಹಿತಿ ನೀಡಿದ ಮೇಲೆ ಜಿಲ್ಲಾಧಿಕಾರಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಗೆ ಸಂಪರ್ಕಿಸಿ ವಿಷಯ ತಿಳಿಸಿದಾಗ ತಾಲೂಕಾ ವೈದ್ಯಾಧಿಕಾರಿಗಳು ಬೇರೊಬ್ಬ ಮಹಿಳಾ ವೈದ್ಯಾಧಿಕಾರಿಗಳನ್ನು ಆಸ್ಪತ್ರೆಗೆ ಕಳಿಸಿದ್ದಾರೆ. ಆಗ ಸಮಯ ರಾತ್ರಿ 8–45. ಸುಮಾರು ಒಂದೂವರೆ ಗಂಟೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಕನಿಷ್ಟ ಚಿಕಿತ್ಸೆ ನೀಡಲಾಗಲಿಲ್ಲ. ನಂತರ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹಾಗೂ ತಪಾಸಣೆಗಾಗಿ ಬಳ್ಳಾರಿಗೆ ಕರೆದು–ಕೊಂಡು ಹೋಗಲು ತಿಳಿಸಿದಾಗ ರಾತ್ರಿ 12–30 ಗಂಟೆಯಾಗಿತ್ತು. ಆದಕಾರಣ ಮರುದಿನ ಬಳ್ಳಾರಿಗೆ ಹೋಗಲು ತೀರ್ಮಾನಿಸಲಾಯಿತು. ನಂತರ ಅಲ್ಲೇ ಇದ್ದ ಸಿಐಟಿಯು ಪದಾಧಿಕಾರಿಗಳು ಮುಂಜಾನೆ ಬಿಸಿಯೂಟ ನೌಕರ ಸಂಘದಿಂದ ಘಟನೆ ಖಂಡಿಸಿ ಪ್ರತಿಭಟನೆ ಮಾಡಲು ತೀರ್ಮಾನಿಸಲಾಯಿತು. ಮುಂಜಾನೆ 11–30 ಕ್ಕೆ 150 ಕ್ಕೂ ಹೆಚ್ಚು ಬಿಸಿಯೂಟ ನೌಕರರು ಸೇರಿ ಪ್ರತಿಭಟನಾ ಮೆರವಣಿಗೆ ಮೂಲಕ ಮಾನ್ಯ ತಹಶೀಲ್ದಾರರಿಗೆ ಮನವಿ ಪತ್ರ ನೀಡಿ ಆಪಾದಿತರನ್ನು ತಕ್ಷಣ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಲು ಹಾಗೂ ರಾತ್ರಿ ಸಮಯದಲ್ಲಿ ಕರ್ತವ್ಯದ ಮೇಲೆ ಇರಬೇಕಾದ ವೈದ್ಯರು ಆಸ್ಪತ್ರೆಯಲ್ಲಿ ಇಲ್ಲದ ಕಾರಣ ಅವರನ್ನು ಅಮಾನತ್‌ಗೊಳಿಸಲು ಒತ್ತಾಯಿಸಲಾಯಿತು.

ಸಿಐಟಿಯು ಜಿಲ್ಲಾ ಸಮಿತಿಯಿಂದ ಜಿಲ್ಲೆಯಾದ್ಯಂತ ಪ್ರತಿಭಟನೆ

ಘಟನೆಯನ್ನು ಖಂಡಿಸಿ ಸಿಐಟಿಯು ರಾಜ್ಯ ಸಮಿತಿ ಮಾರ್ಗದರ್ಶನದಲ್ಲಿ ಅಪರಾಧಿಗಳನ್ನು ಬಂಧಿಸಲು ಒತ್ತಾಯಿಸಿ ಸಿಐಟಿಯು ತಾಲೂಕಾ ಸಮಿತಿಗಳು ದಿನಾಂಕ : 08–09–2014 ರಂದು ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ಜಿಲ್ಲೆಯಾದ್ಯಂತ ಪ್ರತಿಭಟನೆಗೆ ಕರೆ ನೀಡಲಾಯಿತು. ಅಂದು ರಾಯಚೂರನಲ್ಲಿ ಹೆಚ್. ಪದ್ಮ ಸಿಐಟಿಯು ಜಿಲ್ಲಾ ಅಧ್ಯಕ್ಷರ, ಶರಣಬಸವ ಸಿಐಟಿಯು ತಾಲೂಕಾ ಕಾರ್ಯದರ್ಶಿ, ಬಿಸಿಯೂಟ ನೌಕರ ಸಂಘದ ಕಲ್ಯಾಣಿ, ನಾಗಮ್ಮ, ಅಕ್ಕಮ್ಮ, ಇವರ ನೇತೃತ್ವದಲ್ಲಿ ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಯಿತು.

ಮಾನವಿಯಲ್ಲಿ ಹೆಚ್. ಶರ್ಫುದ್ದೀನ್ ಸಿಐಟಿಯು ತಾಲೂಕಾ ಅಧ್ಯಕ್ಷರು, ಸಿದ್ದಲಿಂಗಯ್ಯ ಇವರ ನೇತೃತ್ವದಲ್ಲಿ, ಲಿಂಗಸೂಗೂರಿನಲ್ಲಿ ಎಂ.ಸಿ.ನಿಂಗಪ್ಪ ಸಿಐಟಿಯು ತಾಲೂಕಾ ಕಾರ್ಯದರ್ಶಿ, ಜಿ.ಎಸ್. ಯಂಕೋಬ, ಯಲ್ಲಮ್ಮ, ಅಕ್ಕಮ್ಮ, ಶಂಕ್ರಮ್ಮ, ಶರಣಪ್ಪ, ವಿಜಯಲಕ್ಷ್ಮೀ ಇವರ ನೇತೃತ್ವದಲ್ಲಿ, ದೇವದುರ್ಗದಲ್ಲಿ ಸಂಗಮೇಶ ಮೂಲಿಮನಿ, ಮರಿಯಪ್ಪ, ಕಸ್ತೂರಮ್ಮ, ಶಶಿಕಲಾ ಇವರ ನೇತೃತ್ವದಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದೆ.

ಸಿಂಧನೂರಿನಲ್ಲಿ 7 ಸಾವಿರ ಬಂಗಾಲಿ ಪುನರ್ವಸತಿ ನಿವಾಸಿಗಳಿಂದ ಬೃಹತ್ ಪ್ರತಿಭಟನೆ–ರಸ್ತೆ ತಡೆ

ದಿನಾಂಕ : 07–09–2014 ರಂದು ಬಂಗಾಲಿ ಪುನರ್ವಸತಿ ನಂ–4 ಕ್ಯಾಂಪುಗಳ ಸುಮಾರು 7 ಸಾವಿರ ನಿವಾಸಿಗಳು ಘಟನೆಯನ್ನು ಖಂಡಿಸಿ ನಗರದಲ್ಲಿ ಬೃಹತ್ ಪ್ರತಿಭಟನೆ ಮಾಡಿ ರಸ್ತೆ ನಡೆಸಿ ತಹಶೀಲದಾರರಿಗೆ ಮನವಿ ಪತ್ರ ನೀಡಿದರು. ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಬಂಗಾಲಿ ಮುಖಂಡರು ಸಿಐಟಿಯುಗೆ ಆಹ್ವಾನ ನೀಡಿದ್ದರು. ಅದುವರೆಗೆ ಘಟನೆ ಕುರಿತು ಮಾತಾಡದ ಸ್ಥಳೀಯ ರಾಜಕಾರಣಿಗಳು 7 ಸಾವಿರ ಜನರ ಮೆರವಣಿಗೆ ಪ್ರತಿಭಟನೆ ನೋಡಿ ಘಟನೆಯನ್ನು ಖಂಡಿಸಿ ಪ್ರತಿಭಟನೆಗೆ ಬೆಂಬಲಿಸಿ ತಾವೂ ಪಕ್ಷಬೇಧ ಮರೆತು ಭಾಗವಹಿಸಿದ್ದರು.

ದಿನಾಂಕ : 08–09–2014 ರಂದು ಅತ್ಯಾಚಾರಕ್ಕೆ ಒಳಗಾದ ಮಹಿಳೆಯು ಬಳ್ಳಾರಿ ದವಾಖಾನೆಯಿಂದ ಡಿಸ್ಚಾರ್ಜ ಆದಮೇಲೆ ಸಿಐಟಿಯು ಮುಖಂಡರ ಸಹಾಯದಿಂದ ಪೋಲೀಸ್ ಸ್ಟೇಷನ್ನಿಗೆ ಬಂದು, ನಂತರ ಮೊದಲ ಬಾರಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದಾಳೆ. ಹೆಚ್ಚುವರಿ ಚಿಕಿ ತ್ಸೆಗೆ ಬಳ್ಳಾರಿಯಲ್ಲಿದ್ದಾಗ ಬಳ್ಳಾರಿಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಸತ್ಯಬಾಬು ಹಾಗೂ ಇತರ ಪದಾಧಿಕಾರಿಗಳು ಭೇಟಿಯಾಗಿ ಸಹಾಯ ಮಾಡಿದ್ದು, ಬಂಗಾಲಿ ಜನರು ಸಿಐಟಿಯುವಿನ ಈ ಸ್ಪಂದನೆಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಹಾಸನದಲ್ಲಿ ಪ್ರತಿಭಟನೆ

ಘಟನೆ ನಡೆದ 48 ತಾಸಿನಲ್ಲಿ ಆಟೋ ಚಾಲಕನನ್ನೂ ಸೇರಿದಂತೆ ಮೂರು ಜನ ಆರೋಪಿಗಳನ್ನು ಪೊಲೀಸರು ಪತ್ತೆಹಚ್ಚಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಪರಾಧಕ್ಕೆ ಬಳಸಿದ ಆಟೋರಿಕ್ಷಾ ಹಾಗೂ ಮಹಿಳೆಯನ್ನು ಬೆದರಿಸಲು ಬಳಸಿದ ಚಾಕು ಜಪ್ತಿ ಮಾಡಲಾಗಿದೆ. ●

ದೇಶದ ಕಾರ್ಮಿಕ ವರ್ಗವು– ತನ್ನನ್ನು ತುಳಿಯುವ ತನ್ನನ್ನು ಹಿಂಡಿ ಬಂಡವಾಳಗಾರರ ಗಿಂಡಿ ತುಂಬಿಸುವ ಆಳುವ ಸರ್ಕಾರಗಳ ಭಂಡ ನೀತಿಗಳ ವಿರುದ್ಧ ಮೈಕೊಡವಿ ಬಂಡೇಳುವ ದಿನಗಳು ಬಂದೇ ಬರುತ್ತವೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದಿರುವ ವಿಶಾಲ ಕಾರ್ಮಿಕರ ಸಮಾವೇಶವು ಇಂತಹ ಪ್ರಕ್ರಿಯೆಯ ಒಂದು ಸೂಚನೆಯಂತೆ ಕಂಡು ಬರುತ್ತಿದೆ.

ಕಾರ್ಮಿಕ ಹಕ್ಕುಗಳ ಮೊಟಕು... ಕಾರ್ಮಿಕ ನೀತಿಗಳ ಬದಲಾವಣೆ ವಿರುದ್ಧ ಸಮರ ಘೋಷಣೆ

ಕಾರ್ಮಿಕರ ರಾಷ್ಟ್ರೀಯ ಸಮಾವೇಶ

– ಡಿಸೆಂಬರ್ 05, 2014 ರಂದು

ರಾಷ್ಟ್ರೀಯ ಪ್ರತಿಭಟನಾ ದಿನ



ದೇಶದ ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರನ್ನು ಪ್ರತಿನಿಧಿಸುವ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ಫೆಡರೇಷನ್‌ಗಳ ಜಂಟಿ ವೇದಿಕೆಯ ಆಶ್ರಯದಲ್ಲಿ ಸೆಪ್ಟೆಂಬರ್ 15, 2014 ರಂದು ನವ ದೆಹಲಿಯಲ್ಲಿ ಒಂದು 'ಕಾರ್ಮಿಕರ ರಾಷ್ಟ್ರೀಯ ಸಮಾವೇಶ' ನಡೆಯಿತು.

ಈ ಸಮಾವೇಶದಲ್ಲಿ ಸಿಐಟಿಯು, ಬಿಎಮ್‌ಎಸ್, ಐಎನ್‌ಟಿಯುಸಿ, ಎಐಟಿಯುಸಿ, ಎಐಯುಟಿಯುಸಿ, ಟಿಯುಸಿಸಿ, ಎಲ್ಪಿಎಫ್ ಮತ್ತು ರೈಲು, ಜಲ ಸಾರಿಗೆ, ರಸ್ತೆ ಸಾರಿಗೆ, ಕಲ್ಲಿದ್ದಲು, ಉಕ್ಕು, ವಿದ್ಯುಚ್ಛಕ್ತಿ, ತೈಲ, ರಕ್ಷಣೆ, ವಿಮಾ, ಬ್ಯಾಂಕುಗಳು, ಟೆಲಿಕಾಂ, ನಿರ್ಮಾಣ, ನೂತನ ತಯಾರಿಕಾ ವಲಯ, ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರು, ಅಂಗನವಾಡಿ, ಆಶಾ, ಬಿಸಿಯೂಟ ಕೆಲಸಗಾರರು, ಗೃಹ ಆಧಾರಿತ ಕೈಗಾರಿಕೆಗಳು, ಬೀಡಿ, ಮತ್ತು ಮನೆ ಕೆಲಸ ಮಾಡುವವರ ಪ್ರಾತಿನಿಧಿಕ ಕಾರ್ಮಿಕ ಸಂಘಟನೆಗಳು ಭಾಗವಹಿಸಿದ್ದವು.

ತಪನ್ ಸೇನ್(ಸಿಐಟಿಯು), ವ್ರಜೇಶ್ ಉಪಾಧ್ಯಾಯ(ಬಿಎಮ್‌ಎಸ್), ಸಂಜೀವ ರೆಡ್ಡಿ(ಐಎನ್‌ಟಿಯುಸಿ), ಗುರುದಾಸ್ ದಾಸ್ ಗುಪ್ತ(ಎಐಟಿಯುಸಿ), ಶಂಕರ್ ಸಾಹಾ(ಎಐಯುಟಿಯುಸಿ), ಎಸ್.ಪಿ. ತಿವಾರಿ(ಟಿಯುಸಿಸಿ), ಸೋನಾಲಿ ಷಾ(ಸೇವಾ), ಸ್ವಪನ್ ಮುಖರ್ಜಿ(ಎಐಸಿಸಿಟಿಯು), ಅಬನಿ ರಾಯ್(ಟಿಯುಸಿಸಿ) ಮತ್ತು ಎಂ.ಷಣ್ಮುಗಂ(ಎಲ್‌ಪಿಎಫ್) ಮುಂತಾದವರು ಘೋಷಣೆಯ ಪರವಾಗಿ ಮಾತನಾಡಿದರು.

ಸಮಾವೇಶದಲ್ಲಿ ಮಾತನಾಡಿದ ಪ್ರತಿಯೊಬ್ಬ ಮುಖಂಡನೂ ಸಹ ತಮ್ಮ ತಮ್ಮ ರಾಜಕೀಯ ನಿಷ್ಠೆಯನ್ನು ಬದಿಗೊತ್ತಿ, ಬಿಜೆಪಿ ಸರ್ಕಾರದ ಜನ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ನೀತಿಗಳ ವಿರುದ್ಧ ಮಾತನಾಡಿದರು. ಬೆಲೆ ಏರಿಕೆ ಮತ್ತು ನಿರುದ್ಯೋಗ ಸಮಸ್ಯೆಗಳ ಬಗ್ಗೆ ಯುಪಿಎ ಸರ್ಕಾರದ ಮರಗಟ್ಟಿದ ನೀತಿಗಳನ್ನು ವಿರೋಧಿಸುತ್ತಿದ್ದ ಬಿಜೆಪಿಯೂ ಅದೇ ರೀತಿಯಲ್ಲಿ ವರ್ತಿಸುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು.

ಘೋಷಣೆ:

ಶ್ರಮಜೀವಿಗಳಿಗೆ ಸಂಬಂಧಿಸಿದ ಕಾರ್ಮಿಕ ಕಾಯ್ದೆಗಳನ್ನು ಅನೇಕ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಏಕ ಪಕ್ಷೀಯವಾಗಿ ಬದಲಾಯಿಸುತ್ತಿವೆ. ಈ ಬಲಾವಣೆಗಳು ಕಾರ್ಮಿಕರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮೊಟಕುಗೊಳಿಸುತ್ತವೆ. ಅವರು ಕೆಲಸ ಮಾಡಲು ಇರುವ ಪೂರಕವಾದ ವಾತಾವರಣವನ್ನು ಹಾಳುಮಾಡುತ್ತದೆ. ಅವರ ದಿನ ನಿತ್ಯದ ಜೀವನವನ್ನು ಮೂರಾಬಟ್ಟೆ ಮಾಡುತ್ತದೆ.

ಕಾರ್ಮಿಕ ಕಾಯ್ದೆಗಳಿಗೆ ರಾಜಾಸ್ಥಾನದ ವಿಧಾನ ಸಭೆಯು 31–07–14ರಂದು ಅಂಗೀಕರಿಸಿರುವ ಬದಲಾವಣೆಗಳು, ಕೆಲಸಕ್ಕೆ ಸೇರಿಸಿಕೊಳ್ಳುವ ಮತ್ತು ಕೆಲಸದಿಂದ ಕಿತ್ತುಹಾಕುವ ಮಾಲೀಕರ ಅಧಿಕಾರವನ್ನು ಮತ್ತಷ್ಟು ಸರಳಗೊಳಿಸಿದೆ. ಇದ–ರಿಂದಾಗಿ ಕೆಲಸಮಾಡುವ ಎಲ್ಲರೂ ತಾತ್ಕಾಲಿಕ ಕೆಲಸಗಾರರೆಂದೇ ಪರಿಗಣಿಸಲ್ಪಡುತ್ತಾರೆ. ಫ್ಯಾಕ್ಟರಿ ಆಕ್ಟ್‌ನ ತಿದ್ದುಪಡಿಗಳಿಂದಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಕೆಲಸ ಮಾಡುವ ಜಾಗಗಳಲ್ಲಿ ಸುರಕ್ಷತೆ ಇಲ್ಲದಂತಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ಕೆಲಸಗಾರರನ್ನು ನೇಮಿಸಿಕೊಳ್ಳಲು ಈಗ ಇರುವ ಮಿತಿಯನ್ನು 20ರಿಂದ 50ಕ್ಕೆ ಏರಿಸುವುದರಿಂದ ಮಾಲಿಕರು ಮತ್ತು ಗುತ್ತಿಗೆದಾರ ಇಬ್ಬರೂ ತಮಗಿರುವ ಹೊಣೆಗಾರಿಕೆಯಿಂದ ನುಣಿಚಿಕೊಳ್ಳುವಂತಾಗುತ್ತದೆ. ಮಾದರಿ ಉದ್ಯೋಗದಾತನೆನಿಸಿರುವ ಸರ್ಕಾರಗಳೇ ಅತ್ಯಂತ ಹೆಚ್ಚಿನ ಸಂಖ್ಯೆಯ ಗುತ್ತಿಗೆ ಕೆಲಸಗಾರರನ್ನು ಹೊಂದಿರುವುದು ಒಂದು ವಿಪರ್ಯಾಸವೇ.



ಕಾರ್ಮಿಕ ಕಾಯ್ದೆಗಳಿಗೆ ಪಾರ್ಲಿಮೆಂಟಿನಲ್ಲಿ ಈಗಾಗಲೇ ಮಂಡಿಸಿರುವ ತಿದ್ದುಪಡಿಗಳು ಕಾರ್ಮಿಕರ ಮೇಲೆ ಎಂತಹ ಪರಿಣಾಮ ಬೀರುತ್ತವೆ ಎಂದರೆ, ಇನ್ನುಮುಂದೆ, ಬಹುಸಂಖ್ಯಾತ ಕೆಲಸಗಾರರಿಗೆ ಸಧ್ಯ ಸಿಗುತ್ತಿರುವ ಚೂರು ಪಾರು ಕಾನೂನಿನ ರಕ್ಷಣೆಯೂ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ. ಗುತ್ತಿಗೆ, ಆಕಸ್ಮಿಕ, ತಾತ್ಕಾಲಿಕ ಮತ್ತು ಪೂರ್ಣಾವಧಿ(ನಿಯತ ಕಾಲದ) ಹುದ್ದೆಗಳ ಬದಲಾಗಿ ಇನ್ನು ಮುಂದೆ ಬಹಳ ಕಡಿಮೆ ವೇತನದ ಸದಾಕಾಲವೂ ತರಬೇತಿಯ ಹುದ್ದೆ(ಅಪ್ರೆಂಟೀಸ್) ಗಳನ್ನು ಕಾನೂನುಬದ್ಧಗೊಳಿಸುವ ತಿದ್ದುಪಡಿಯೊಂದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ. ರಾಜಾಸ್ಥಾನದ ವಿಧಾನ ಸಭೆಯು ಪಾಸುಮಾಡಿರುವ ಕಾರ್ಮಿಕ ವಿರೋಧಿ ಬದಲಾವಣೆಗಳಿಗೆ ಈಗ ಪಾರ್ಲಿಮೆಂಟಿನ ಅಂಗೀಕಾರದ ಮುದ್ರೆ ಒತ್ತಿದರೆ ಅದು ಇನ್ನು ಮುಂದೆ ಇಂತಹ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಉಳಿದ ರಾಜ್ಯ ಸರ್ಕಾರಗಳಿಗೆ ಕುಮ್ಮಕ್ಕು ಕೊಟ್ಟಂತಾಗುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳಿಗೆ ಮಾಡುತ್ತಿರುವ ಬದಲಾವಣೆಗಳ ಉದ್ದೇಶವೆಂದರೆ, ಮಾಲೀಕರಿಗೆ ಕೆಲಸಗಾರರ ನೇಮಕಾತಿ, ಹೊರಹಾಕುವುದು, ತಮಗೆ ಬೇಕೆನಿಸಿದಾಗ ಫ್ಯಾಕ್ಟರಿ ಮುಚ್ಚುವುದು, ಬೇಕೆನಿಸಿದಾಗ ತೆಗೆಯುವುದು, ಗುತ್ತಿಗೆಮಯ ಮಾಡುವುದು. ಇಂತಹ ಕ್ರಮಗಳಿಗೆ ಯಾವುದೇ ನಿರ್ಬಂಧ ಇಲ್ಲದಂತೆ ನೋಡಿಕೊಳ್ಳುವುದು. ಕಾರ್ಮಿಕ ಕಾನೂನುಗಳ ಈ ಬದಲಾವಣೆಗಳು ಶೇ.70ರಷ್ಟು ಕೆಲಸಗಾರರನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಡುತ್ತವೆ. ಮಾಲೀಕರು ಕೆಲಸಗಾರರನ್ನು ಶೋಷಣೆ ಮಾಡುವುದು ನಿರಾತಂಕವಾಗಿರುತ್ತದೆ.

ಕಾರ್ಮಿಕರ ಈ ಎಲ್ಲ ಸಮಸ್ಯೆಗಳನ್ನು ಚರ್ಚಿಸಿದ ಸಮಾವೇಶವು, ರಾಜಾಸ್ಥಾನ ಸರ್ಕಾರವು ಕಾರ್ಮಿಕ ಕಾನೂನುಗಳಿಗೆ ಮಾಡಿರುವ ತಿದ್ದುಪಡಿಗಳನ್ನು ಹಿಂಪಡೆಯುವಂತೆ ಮತ್ತು ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸದಂತೆ ಒತ್ತಾಯ ಮಾಡಿದೆ.

ಇಡೀ ಕಾರ್ಮಿಕ ಸಮುದಾಯ ಮತ್ತು ಅದರ ಕೇಂದ್ರ ಸಂಘಟನೆಗಳ 10 ಅಂಶಗಳ ಬೇಡಿಕೆಗಳು ಬಹಳ ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿರುವ ಸಂದರ್ಭದಲ್ಲಿ ಈ ಬೇಡಿಕೆಗಳನ್ನು ಈಡೇರಿಸುವಂತೆ ಸಮಾವೇಶವು ಮತ್ತೊಮ್ಮೆ ಒತ್ತಾಯಿಸುತ್ತದೆ. ರೈಲು, ವಿಮಾ ಮತ್ತು ರಕ್ಷಣಾ ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಕೈ ಬಿಡುವಂತೆ ಸಮಾವೇಶ ಒತ್ತಾಯಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಒಂದು ದೇಶವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಿರುವ ಸಮಾವೇಶವು ಈ ಸಂಬಂಧವಾಗಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪೂರ್ವಭಾವಿ ಸಮಾವೇಶ ನಡೆಸುವಂತೆ ಹಾಗೂ ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ಪ್ರದರ್ಶನಗಳ ಮೂಲಕ 05.12.2014 ರಂದು ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಆಯೋಜಿಸಬೇಕೆಂದು ಕರೆ ನೀಡಿದೆ.

ಕಾಂ. ಬಿನೊಯ್ ಕೋನಾರ್ ಎಂಬ ಭೂ ಹೋರಾಟಗಾರ



ದೇಶದಲ್ಲಿಂದು ಭೂ ಸುಧಾರಣೆಯ ಮಾತುಗಳನ್ನು ತುಳಿದು ಹಾಕಲಾಗಿದೆ. ಒಂದು ಕಾಲದಲ್ಲಿ ಭೂ ಸುಧಾರಣೆಯ ಪರ ಮಾತುಗಳನ್ನು ಆಡುವವರನ್ನು ಪ್ರಗತಿಪರರೆಂದು ಭಾವಿಸಲಾಗುತ್ತಿತ್ತು. ಈಗ ಭೂ ಸು ಧಾರಣೆ ಪರಿಕಲ್ಪನೆಯೇ ಅಪ್ರಸ್ತುತ ಎಂಬಂತಹ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ಭೂ ಸುಧಾರಣೆ ಎಂದರೆ ಅಗತ್ಯವಾದಷ್ಟು ಭೂಮಿಯಿಲ್ಲದ ಬಡರೈತರು, ಭೂಮಿ ಇಲ್ಲದ ಕೂಲಿಕಾರರು ಗೇಣಿದಾರರಿಗೆ ಸ್ವಂತ ಬೇಸಾಯಕ್ಕೆ ಸ್ವಂತ ಭೂಮಿ ಸಿಗುವಂತೆ ಮಾಡುವುದು. 'ಉಳುವವನೇ ಭೂಮಿಯ ಒಡೆಯ' ಎನ್ನುವ ಮಾತಿನ ಮತ್ತಷ್ಟು ಉತ್ತಮವಾದ ರೂಪ. ಅಂದರೆ ಅಗತ್ಯ ಮೀರಿ ಭೂಮಿ ಕೇಂದ್ರೀಕರಿಸಿಕೊಂಡಿರುವ ಭೂಮಾಲಿಕರ ಭೂಮಿಯನ್ನು ಕಿತ್ತುಕೊಂಡು ಅಗತ್ಯವುಳ್ಳವರಿಗೆ ಹಂಚುವುದು. ಅಂತಹ ಭೂಮಿಯಲ್ಲಿ ಉತ್ತು ಬಿತ್ತು ಶ್ರಮಿಸುವವರು ಈ ಭೂಮಿ ತಮ್ಮದೇ ಎಂದು ಕೆಂಬಾವುಟ ಹೂಡಿ ಹಕ್ಕು ಸ್ಥಾಪಿಸುವುದು.

ಪಶ್ಚಿಮ ಬಂಗಾಳ ಇಂತಹ ಭೂಮಿ ಹೋರಾಟ ಮತ್ತು ಭೂಸುಧಾರಣೆಗಳಿಗೆ ಎರಡಕ್ಕೂ ಖ್ಯಾತವಾದದ್ದು. ಈ ಭೂ ಆಕ್ರಮಣ ಚಳುವಳಿಗೆ ಮತ್ತು ಭೂ ಸುಧಾರಣಾ ಚಳುವಳಿಗೆ ನೇತೃತ್ವ ಕೊಟ್ಟ ಸಹೋದರರಿಬ್ಬರನ್ನು ಭೂ ಸುಧಾರಣೆಯ ಪರ ಇರುವವರು ಎಂದು ಮರೆಯುವಂತಿಲ್ಲ.

ಹರೇ ಕೃಷ್ಣ ಕೊನಾರ್, ಬಿನೋಯ್ ಕೊನಾರ್ ಅವರೇ ಈ ಅವಳಿ ಸಹೋದರರು. ಈ ವರ್ಷ ಹರೇ ಕೃಷ್ಣ ಕೊನಾರ್ ಅವರ ಜನ್ಮಶತಮಾನೋತ್ಸವ ಆಚರಣೆಯಲ್ಲಿದೆ. ಈಗ ತಮ್ಮ ಬಿನೋಯ್ ಕೊನಾರ್ ಅವರು ತೀರಿಕೊಂಡಿದ್ದಾರೆ.

ಕಾಂ. ಬಿನೊಯ್ ಕೊನಾರ್ ಅವರು ತಮ್ಮ ಸೆಪ್ಟೆಂಬರ್ 14, 2014 ರಂದು ತಮ್ಮ 84 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದಾರೆ. ಸಿಪಿಐ(ಎಂ)ನ ಪಾಲಿಟ್ ಬ್ಯುರೋ ಮತ್ತು ಅಖಿಲ ಭಾರತ ಕಿಸಾನ್ ಮಹಾಸಭಾಗಳು ಅವರ ಸಾವಿಗೆ ತೀವ್ರ ಸಂತಾಪ ವ್ಯಕ್ತಪಡಿಸಿವೆ. ಅವರು ಪಶ್ಚಿಮ್ ಬಂಗಾ ಕೃಷಕ್ ಸಭಾದ ಮಹಾಕಾರ್ಯದರ್ಶಿ ಮತ್ತು ಅದರ ಕೇಂದ್ರ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ ಅವರು ಬಹುಕಾಲ ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿದ್ದರು. ಅವರು 1955 ರಿಂದ 1999 ರವರೆಗೆ ಅಖಿಲ ಭಾರತ ಕಿಸಾನ್ ಮಹಾಸಭಾದ ಅಧ್ಯಕ್ಷರಾಗಿ ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧದ ತನ್ನ ನೀತಿಗಳನ್ನು ರೂಪಿಸುವಲ್ಲಿ ಮತ್ತು ರೈತ ವಿರೋಧಿ ನೀತಿಗಳ ವಿರುದ್ಧದ ಹೋರಾಟಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಕಡ್ಡಲೂರಿನಲ್ಲಿ ಜುಲೈ 2013 ರಲ್ಲಿ ನಡೆದ ಅಖಿಲ ಭಾರತ ಕಿಸಾನ್ ಮಹಾಸಭಾದ 33 ನೇ ಅಖಿಲ ಭಾರತ ಮಹಾಧಿವೇಶನದ ವರೆಗೆ ಅವರು ಅದರ ಉಪಾಧ್ಯಕ್ಷರಾಗಿದ್ದರು.

ಏಪ್ರಿಲ್ 24, 1930 ರಂದು ಬಿನೋಯ್ ಕೊನಾರ್ ಅವರು ಜನಿಸಿದರು. ತಂದೆ ಶರತ ಚಂದ್ರ ಕೊನಾರ್, ತಾಯಿ ಸತ್ಯಬಾಲ ದೇವಿ.



ಕಾಂ. ಬಿನೊಯ್ ಕೊನಾರ್ ಅವರು ತಮ್ಮ ಎಳೆ ವಯಸ್ಸಿನಿಂದಲೇ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದತ್ತ ಆಕರ್ಷಿತರಾಗಿದ್ದರು. ಬಿನೋಯ್ದಾ ಎಂಬ ಪ್ರೀತಿಯ ಹೆಸರಿನಿಂದಲೇ ಖ್ಯಾತರಾದ ಅವರು ಬಂಗಾಳದ ಪಾಳೆಗಾರಿ ವಿರೋಧಿ ಹೋರಾಟದಲ್ಲಿ ತೊಡಗಿಕೊಂಡಿದ್ದರು. ಭೂ ಹೋರಾಟಗಳ ಕೇಂದ್ರಬಿಂದುವಾಗಿ ಅವರು ಭೂ ರಹಿತ ರೈತರ ಮತ್ತು ಗ್ರಾಮೀಣ ಬಡವರ ಹಗಲಿಗೆ ಹಗಲು ನೀಡಿ ಪಾಳೆಗಾರಿ ಜಮೀನುದಾರರ ವಿರುದ್ದ ಹೋರಾಡಿದರು. ದಬ್ಬಾಳಿಕೆಯ ದೀರ್ಘ ಸಮಯದಲ್ಲಿ ಅವರು ಭೂಗತರಾಗಿ ಹೋರಾಡಿದರು. ಹಲವು ಸಾರಿ ಬಂಧಿತರಾಗಿ ಸುಮಾರು ಏಳು ವರ್ಷಗಳ ಕಾಲ ಸೆರೆಮನೆಯಲ್ಲಿ ಕಳೆದರು.

ಕೆಳಹಂತದಿಂದ ಪ್ರಾರಂಭಿಸಿ ಅವರು ರೈತರ ಗೌರವಾನ್ವಿತ ರಾಜ್ಯ ಮತ್ತು ದೇಶದ ನಾಯಕರಾಗಿ ಬೆಳೆದರು. ಅವರ ಸರಳತೆ, ಶೋಷಿತರ ಬಗೆಗಿನ ಅಖಂಡ ಬದ್ಧತೆ ಮತ್ತು ಎಂತಹ ಕಷ್ಟದ ಕಾಲದಲ್ಲೂ ಅಲುಗಾಡದ ಛಲ ಬರುವ ಹಲವು ತಲೆಮಾರುಗಳ ಕಾಲ ಸ್ಪೂರ್ತಿಯ ಸೆಲೆಯಾಗಿರುತ್ತದೆ.

ಭೂ ಆಕ್ರಮಣ ಚಳುವಳಿಗಳು ಎಂದರೆ ಸುಲಭವಲ್ಲ. ಬಲಾಢ್ಯ ಭೂ ಮಾಲಿಕ ವರ್ಗದ ಧಾಳಿಗೆ ಎದೆಯೊಡ್ಡಿ ನಿಲ್ಲಬೇಕಾದ ಸಂದರ್ಭಗಳು ಬರುತ್ತವೆ. ಇಂತಹ ನಾನಾ ದಾಳಿಗಳನ್ನು ಎದುರಿಸಿ ಸಹೋದರರು ಶೋಷಿತರು, ಭೂಹೀನ ಬಡವರು, ಗೇಣೀದಾರರ ಪರವಾಗಿ ಜೀವ ಒತ್ತೆಯಿಟ್ಟು ಸೆಣೆಸಿದವರು. ದೇಶದಲ್ಲಿ 1975 ರಲ್ಲಿ ತುರ್ತು ಪರಿಸ್ಥಿತಿ ಬಂದರೆ ಪಶ್ಚಿಮ ಬಂಗಾಳದಲ್ಲಿ ಅದು ಅದಕ್ಕಿಂತ ನಾಲ್ಕಾರು ವರ್ಷ ಮೊದಲೆ ಬಂದಿತ್ತು. ಅರೆ ಫ್ಯಾಸಿಸ್ಟ್ ಧಾಳಿ ಎನ್ನುವ ಆಳುವ ವರ್ಗಗಳ ಏಜೆಂಟರ ಹಾಗೂ ಗೂಂಡಾಗಳ ಮಾರಣಾಂತಿಕ ಧಾಳಿ ನಡೆಯಿತು. ಆದರೆ ಶೋಷಿತ ಜನತೆಯ ಜೊತೆ ನಿಂತ ಬಿನೋಯ್ ಮತ್ತು ಸಂಗಾತಿಗಳು ಅವುಗಳನ್ನು ಸಮರ್ಥವಾಗಿ ಎದುರಿಸಿದರು.

ಕಾಂ. ಬಿನೊಯ್ ಕೊನಾರ್ ಅವರು ಪಶ್ಚಿಮ ಬಂಗಾಳದ ವಿಧಾನ ಸಭೆಗೆ ಬರ್ಧ್ವಾನ್ ಜಿಲ್ಲೆಯ ಮೆಮಾರಿ ಕ್ಷೇತ್ರದಿಂದ ಮೂರು ಬಾರಿ (1969, 1971 ಮತ್ತು 1977) ಆಯ್ಕೆಯಾಗಿದ್ದರು. ಶಾಸಕರಾಗಿ ಅವರು ರೈತರು ಮತ್ತು ಗ್ರಾಮೀಣ ಬಡವರ ಧ್ವನಿಯಾಗಿದ್ದರು. ಅವರು ರೈತರ ಸಮಸ್ಯೆಗಳನ್ನು ತಿಳಿದವರಾಗಿದ್ದು ಕೃಷಿರಂಗದ ವಿಷಯಗಳ ಮೇಲೆ ಬರೆದಿದ್ದಾರೆ. ಅವರ ಆರೋಗ್ಯ ಹದಗೆಟ್ಟಿರುವಾಗಲೂ ಅವರು ಎಐಕೆಎಸ್ ಕೇಂದ್ರ ಸಮಿತಿ ಕಟ್ಟಡ ನಿಧಿಗೆ ಹಣ ಸಂಗ್ರಹಿಸಲು ಅಪಾರ ಶ್ರಮ ಪಟ್ಟರು. ಕಳೆದ ತಿಂಗಳು ಅವರು ಹರೇ ಕೃಷ್ಣ ಕೊನಾರ್ ಶತಮಾನೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ್ದರು. ಬಿನಯ್ ಕೊನಾರ್ ಅವರು ಒಬ್ಬ ಬರಹಗಾರರರಾಗಿದ್ದರು. ಅವರು ಹಲವು ಲೇಖನಗಳ ಮೂಲಕ ಮಹತ್ವದ ಕಾಣಿಕೆ ನೀಡಿದ್ದಾರೆ.

ಬಿನೋಯ್ ಅವರು 1981 ರಲ್ಲಿ ಸಿಪಿಐ(ಎಂ) ಪಕ್ಷದ ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಸದಸ್ಯರಾದರು. 91 ರಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದರು. 1995 ರಲ್ಲಿ ಕೇಂದ್ರ ಸಮಿತಿ ಸದಸ್ಯರಾದರು. 2012 ರಲ್ಲಿ ಬಿನೊಯ್ ಕೊನಾರ್ ಅವರು ಕೇಂದ್ರ ಸಮಿತಿಯ ಕಂಟ್ರೋಲ್ ಕಮಿತಿಯ ಅ ಧ್ಯಕ್ಷರಾಗಿದ್ದರು. ಆರೋಗ್ಯದ ಕಾರಣದಿಂದ ಅವರು ಈ ಜವಾಬ್ದಾರಿಗಳಿಂದ ಬಿಡುಗಡೆ ಪಡೆದರು.

ಬಿನೋಯ್ ಕೊನಾರ್ ಅವರು ಹೆಂಡತಿ ಮಹಾರಾಣಿ ಕೊನಾರ್, ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಬಿನೋಯ್ ಅವರ ಇಡೀ ಕುಟುಂಬ ಸಿಪಿಐ(ಎಂ) ಪಕ್ಷದೊಂದಿಗೆ ಗುರುತಿಸಕೊಂಡು ಕೆಲಸ ಮಾಡುತ್ತಿದೆ. ಎಐಕೆಎಸ್ ಮತ್ತು ಸಿಪಿಐ(ಎಂ)ಗಳು ಅವರ ಕುಟುಂಬ ಮತ್ತು ಅವರೊಡಗೂಡಿ ಕೆಲಸ ಮಾಡಿದ ಎಲ್ಲರಿಗೂ ತಮ್ಮ ಸಂತಾಪ ವ್ಯಕ್ತಪಡಿಸಿವೆ. •

ಉಪಚುನಾವಣೆಗಳ ಫಲಿತಾಂಶ.....

ಪುಟ 7 ರಿಂದ

ನಮ್ಮ ನಿಜವಾದ ಅಸ್ಮಿತೆಯನ್ನು ಮರೆತು ಎಲ್ಲರನ್ನು ಒಳಗೊಳ್ಳುವ ರಾಜಕೀಯವನ್ನು ಅನುಸರಿಸಿದಾಗಲೆಲ್ಲ ನಾವು ಚುನಾವಣೆಗಳನ್ನು ಕಳಕೊಂಡಿದ್ದೇವೆ" ಎಂದು ಈ ಆರೆಸ್ಸೆಸ್/ಬಿಜೆಪಿಯ ಅನಾಮಧೇಯರಾಗಿರ ಬಯಸುವ ಹಿರಿಯ ಮುಖಂಡರು ಹೇಳಿರುವುದಾಗಿ 'ಮೇಲ್ ಟುಡೇ'(ಸಪ್ಟಂಬರ್ 17, 2014) ವರದಿ ಮಾಡಿದೆ.

ಕಟ್ಟಾ ಹಿಂದುತ್ವ ಅಜೆಂಡಾದ ಅಪಾಯ

ಹೀಗೆ ಇವರ ಗುಟ್ಟು ಈಗ ರಟ್ಟಾಗಿದೆ. ಈ ಹಿಂದೆ ಈ ಅಂಕಣದಲ್ಲಿ ನಾವು ಆರೆಸ್ಸೆಸ್/ಬಿಜೆಪಿಯ 'ಸೀಳು ನಾಲಗೆ'ಯ ರಾಜಕೀಯ ಒಂದು ಕುಟಿಲ ಅಜೆಂಡಾವನ್ನು ಅನುಸರಿಸುತ್ತಿದೆ ಎಂದು ಹೇಳಿದ್ದೆವು. ಒಂದೆಡೆ ಸಾರ್ವಜನಿಕರನ್ನು ನಂಬಿಸಲು 'ಅಭಿವೃದ್ಧಿ', 'ಗುಜರಾತ್ ಮಾದರಿ', 'ಅಚ್ಛೇ ದಿನ್ ಆನೇವಾಲೇ ಹೈಂ' ಇತ್ಯಾದಿ ಜಪಿಸುತ್ತಲೇ, ಇನ್ನೊಂದೆಡೆಯಲ್ಲಿ, ಚುನಾವಣಾ ಪ್ರಯೋಜನಗಳನ್ನು ಗಿಟ್ಟಿಸುವ ನಿಜವಾದ ಕಾರ್ಯವಿಧಾನವಾಗಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು ಹಿಂಸಾಚಾರದ ದಾರಿ. ಈ ಉಪಚುನಾವಣೆಗಳಲ್ಲಿ ಅದೀಗ ಇನ್ನಷ್ಟು ಗೋಚರವಾಗುತ್ತಿದೆ.

ನಿಜವಾದ ಅಪಾಯ ಇರುವುದು ಇಲ್ಲಿಯೇ. ಒಂದಾದ ಮೇಲೊಂದರಂತೆ ಉಪಚುನಾವಣೆಗಳ ಸೋಲುಗಳು ಆರೆಸ್ಸೆಸ್/ಬಿಜೆಪಿ ರಾಷ್ಟ್ರೀಯ ರಾಜಕಾರಣದಲ್ಲಿ, ಆಳ್ವಿಕೆಯಲ್ಲಿ ಮುಂದುವರೆಯ ಬೇಕಾದರೆ ತಮ್ಮ ಕಟ್ಟಾ ಹಿಂದುತ್ವ ಅಜೆಂಡಾಕ್ಕೆ ಮರಳುವುದೇ ಏಕೈಕ ಪಕ್ಕಾ ಆಧಾರ ಎಂಬ ಲೆಕ್ಕಾಚಾರವನ್ನು ಕ್ರೋಡೀಕರಿಸುತ್ತಿವೆ. ಇದು ಭಾರತದ ನಮ್ಮ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರಕ್ಕೆ ವಿನಾಶಕಾರಿಯಾಗಬಲ್ಲದು. ಈ ಅಪಾಯವನ್ನು ಭಾರತೀಯ ಜನತೆ ನೇರವಾಗಿ ಎದುರಿಸಬೇಕಾಗಿದೆ, ಆ ಮೂಲಕ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಅವರ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಕಣ್ಣೋಟವನ್ನು ತಿರಸ್ಕರಿಸಬೇಕಾಗಿದೆ.

ಒಂದು ಐಕ್ಯ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಭಾರತದ ಬುನಾದಿಯನ್ನು ಭದ್ರಗೊಳಿಸಲು ನಮಗೆ ಸಾಧ್ಯವಾದಾಗ ಮಾತ್ರವೇ ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಸಮರ ನಿರ್ಣಾಯಕವಾಗಿ ಮುಂದೆ ಸಾಗಲು ಸಾಧ್ಯ. •

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾರ್ವಜನಿಕ ವಲಯದ 44 ಸಾವಿರ ಕೋಟಿ ರೂ.ಗಳ ಶೇರು ಮಾರಾಟ

ಯುಪಿಎ–2 ಸರಕಾರದ ಪದಚಿಹ್ನೆಗಳಲ್ಲೇ ಮುಂದುವರೆಯುತ್ತಿರುವ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಕೋಲ್ ಇಂಡಿಯಾ, ಎನ್‌ಹೆಚ್‌ಪಿ ಮತ್ತು ಒಎನ್‌ಜಿಸಿಯ ಶೇರು ಮಾರಾಟ ಮಾಡಲು ನಿರ್ಧರಿಸಿದೆ. ಇದರಿಂದ ಒಟ್ಟು ರೂ.44,000 ಕೋಟಿ ರೂ.ಗಳನ್ನು ಗಳಿಸುವ ನಿರೀಕ್ಷೆ ಅದರದ್ದು. ಅದರ ನಿರೀಕ್ಷೆ ಈಡೇರಿದರೆ ಇದು ಇದುವರೆಗಿನ ಅತಿ ದೊಡ್ಡ ಶೇರು ಮಾರಾಟ ಎಂದೆನಿಸುತ್ತದೆ ಎನ್ನಲಾಗಿದೆ. ಇದು ಕಾರ್ಪೊರೇಟ್ ವಲಯಕ್ಕೆ ಇನ್ನಷ್ಟು ಬಕ್ಷೀಸು ನೀಡಲು ಅನುಕೂಲವಾಗುವಂತೆ ಹಣಕಾಸು ಕೊರತೆಯನ್ನು ತುಂಬತ್ತದೆ ಎಂಬ ನಿರೀಕ್ಷೆಯನ್ನು ಅದು ಇಟ್ಟುಕೊಂಡಿದೆ.

ಅಲ್ಲದೆ ಸಿಪಿಐ(ಎಂ) ಪಾಲಿಟ್‌ಬ್ಯುರೋ ಹೇಳಿರುವಂತೆ ಸಾರ್ವಜನಿಕ ವಲಯದ ವಿರುದ್ಧವಾಗಿ ಅದರ ಸೈದ್ಧಾಂತಿಕ ಬದ್ಧತೆ–ಯೂ ಇದರಿಂದ ಈಡೇರಿದಂತಾಗುತ್ತದೆ.

ಹಿಂದಿನ ಎನ್‌ಡಿಎ ಸರಕಾರ, ಅಂದರೆ ವಾಜಪೇಯಿ ನೇತೃತ್ವದ ಸರಕಾರ ಸಾರ್ವಜನಿಕ ವಲಯದ ಶೇರುಗಳ ಮಾರಾಟಕ್ಕೆಂದೇ ಒಂದು ಪ್ರತ್ಯೇಕ ಮಂತ್ರಿಯನ್ನೇ ನೇಮಿಸಿದ ಹೆಗ್ಗಳಿಕೆ ಹೊಂದಿದೆ. ಅದರಿಂದ ಉಂಟಾದ ಹಗರಣಗಳು ಎಲ್ಲರಿಗೂ ತಿಳಿದ ವಿಷಯವೇ. ಅಂತಹ ಶೇರು ಮಾರಾಟ ಮತ್ತಿತರ ಕ್ರಮಗಳಿಂದ ಭಾರತ ಪ್ರಕಾಶಿಸಲಾರಂಭಿಸಿದೆ ಎಂಬ ಬಿಜೆಪಿ ಪ್ರಚಾರವನ್ನು ಜನ ಸಾರಾಸಗಟಾಗಿ ತಿರಸ್ಕರಿಸಿದರು. ಅದರ ಸ್ಥಾನಕ್ಕೆ ಬಂದ ಯುಪಿಎ–1 ಸರಕಾರ ಎಡ ಪಕ್ಷಗಳ ಬೆಂಬಲದ ಮೇಲೆ ನಿಂತಿದ್ದರಿಂದ ಈ ಪ್ರವೃತ್ತಿಯನ್ನು ಕೈಬಿಡಬೇಕಾಗಿ ಬಂದಿತ್ತು. ಆದರೆ ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಯುಪಿಎ–2 ಸರಕಾರ ಮತ್ತೆ ಶೇರು ಮಾರಾಟ ಮಾಡಿ ಹಣಕಾಸು ಕೊರತೆಯನ್ನು ತಗ್ಗಿಸಿ ಆ ಹಣವನ್ನು ಕಾರ್ಪೊರೇಟ್‌ಗಳಿಗೆ ಬಕ್ಷೀಸು ಒದಗಿಸಲು ಬಳಸುವ ಪ್ರವೃತ್ತಿಯನ್ನು ಮುಂದುವರೆಸಿತು. ಅದೀಗ ಅಧಿಕಾರ ಕಳಕೊಂಡ ನಂತರ ಬಿಜೆಪಿ ನೇತೃತ್ವದ ಸರಕಾರ ಅದೇ ದಾರಿಯಲ್ಲಿ ಇನ್ನಷ್ಟು ರಭಸದಿಂದ ಮುಂದುವರೆಯಲು ನಿರ್ಧರಿಸಿದಂತಿದೆ. ಈ ಹಣಕಾಸು ವರ್ಷದಲ್ಲಿ ಅದು ಹೊಸದಾಗಿ 43,425ಕೋಟಿ ರೂ. ಗಳನ್ನು ಸಾರ್ವಜನಿಕ ವಲಯದ ಶೇರುಗಳ ಮಾರಾಟದಿಂದ ಮತ್ತು ಇನ್ನೂ 15,000 ಕೋಟಿ ರೂ.ಗಳನ್ನು ಈಗಾಗಲೇ ಶೇರುಮಾರಾಟಕ್ಕೆ ಒಳಗಾಗಿರುವ ಘಟಕಗಳಲ್ಲಿ ಮತ್ತಷ್ಟು ಶೇರುಗಳನ್ನು ಮಾರುವ ಮೂಲಕ ಗಳಿಸುವ ಅಂದಾಜು ಮಾಡಿತ್ತು.

'ಸ್ವಚ್ಛ ಭಾರತ': ಪಿ–ಪಿ–ಪಿ ಯನ್ನು ಮರೆ ಮಾಚುವ ರಾಜಕೀಯ ಘೋಷವಾಕ್ಯ?

'ಸ್ವಚ್ಛ ಭಾರತ' ನಮ್ಮ ಹೊಸ ಪ್ರಧಾನಿಗಳ ಇನ್ನೊಂದು 'ಹೊಸ' ಕರೆ. 'ಒಂದು ವರ್ಷದೊಳಗೆ ಪ್ರತಿಯೊಂದು ಶಾಲೆಯಲ್ಲಿ ಒಂದು ಶೌಚಾಲಯ' ಇದು ಪ್ರಧಾನಿಗಳು ದೇಶದ ಮುಂದಿಟ್ಟಿರುವ ಗುರಿ. ಈ ಬಗ್ಗೆ ಯಾರದ್ದೂ ತಕರಾರು ಇರಲು ಸಾಧ್ಯವಿಲ್ಲ. ಸರಕಾರದ ಅಂಕಿ–ಅಂಶಗಳ ಪ್ರಕಾರ ಜುಲೈ 2014 ರವೇಳೆಗೆ 7.06ಶೇ. ಶಾಲೆಗಳಲ್ಲಿ ಶೌಚಾಲಯಗಳಿಲ್ಲ, 10ಶೇ. ಶಾಲೆಗಳಲ್ಲಿ ನೀರಿನ ಪೂರೈಕೆ ಇಲ್ಲ. ಅದೇ ಸರಕಾರೀ ಅಂಕಿ–ಅಂಶಗಳ ಪ್ರಕಾರ ಮೂರನೇ ಒಂದರಷ್ಟು ಅಂಗನವಾಡಿಗಳಲ್ಲಿ ಶೌಚಾಲಯಗಳಿಲ್ಲ, 40ಶೇ.ದಷ್ಟು ಅಂಗನವಾಡಿಗಳಲ್ಲಿ ನೀರು ಪೂರೈಕೆ ಇಲ್ಲ. ಆದ್ದರಿಂದ ಸರಕಾರ 'ಸ್ವಚ್ಛ ಭಾರತ'ದ ಬಗ್ಗೆ ಗಂಭೀರವಾಗಿರುವುದಾದರೆ, ವಾಸ್ತವವಾಗಿ ಒಂದು ವರ್ಷದೊಳಗೆ ಪ್ರತಿ ಅಂಗನವಾಡಿಯಲ್ಲಿ ಒಂದು ಶೌಚಾಲಯ' ಎಂಬ ಗುರಿಯಿಟ್ಟುಕೊಳ್ಳಬೇಕಾಗಿತ್ತು ಎನ್ನುತ್ತಾರೆ ಪರಿಣಿತರು.

ಇದು ಕೇವಲ ಕುತರ್ಕವಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಇಲ್ಲ ಎನ್ನುತ್ತಾರೆ ಈ ಪರಿಣಿತರು. ಗಾಂಧಿ ಜಯಂತಿಯಂದು ಸರಕಾರ ಆರಂಭಿಸಬೇಕೆಂದಿರುವ 'ಸ್ವಚ್ಛ ಭಾರತ' ಆಂದೋಲನ' ಒಂದು ರಾಜಕೀಯ ಘೋಷಣೆಯೇ ಹೊರತು ವಾಸ್ತವಿಕತೆಯ ಮೌಲ್ಯಮಾಪನದಿಂದು ರೂಪಿಸಿರುವ ಕಾರ್ಯಕ್ರಮ ಅಲ್ಲ ಎಂದು ಸುರಕ್ಷಿತವಾಗಿ ಹೇಳಬಹುದು ಎನ್ನುತ್ತಾರೆ ಅವರು. ಅವರ ಪ್ರಕಾರ ಈಗಾಗಲೇ ಹಿಂದಿನ ಸರಕಾರಗಳು ಆರಂಭಿಸಿರುವ ಇಂತಹ ಹಲವಾರು ಕಾರ್ಯಕ್ರಮಗಳನ್ನು ಹೀಗಳೆದು ಅದರಿಂದ ಆಗಿರುವ ಅಲ್ಪ–ಸ್ವಲ್ಪ ಸಾಧನೆಗಳ ಕೀರ್ತಿಯನ್ನು ಮಾತ್ರ ತಮ್ಮದಾಗಿಸಿಕೊಳ್ಳುವ ಪ್ರಯತ್ನ ಇದು. ವಾಸ್ತವವಾಗಿ ಇದರ ಹಿಂದಿರುವ ಕಾರ್ಯತಂತ್ರ ಯುಪಿಎ ಸರಕಾರದ ಕಾರ್ಯತಂತ್ರವೇ. ಅಂದರೆ ಮೂಲಸೇವೆಗಳಲ್ಲಿ ದಕ್ಷತೆಯ ಹೆಸರಲ್ಲಿ ಪಿ.ಪಿ.ಪಿ. ಮಾದರಿ, ಅಂದರೆ ಸಾರ್ವಜನಿಕ–ಖಾಸಗೀ ಭಾಗೀದಾರಿಕೆಯ ಮಾದರಿ, ಸಾರ್ವಜನಿಕ ಖರ್ಚಿನಲ್ಲಿ ಖಾಸಗಿಯವರಿಂದ ಸೇವೆ!

ಈಗಾಗಲೇ ಶಾಲೆಗಳಲ್ಲಿ ಶೌಚಾಲಯದ ಕರೆಗೆ ಹಲವಾರು ಕಾರ್ಪೊರೇಟ್ ಕುಳಗಳು ತಮ್ಮ ಕೊಡುಗೆಗಳನ್ನು ನೀಡಲು ಮುಂದೆ ಬಂದಿದ್ದಾರೆ. ಆದರೆ ಈ ಒಟ್ಟು ಕಾರ್ಯತಂತ್ರ ನಿಜವಾದ ಸವಾಲುಗಳನ್ನು ಎದುರಿಸದೆಯೇ ಸಾರ್ವಜನಿಕ ಸೇವೆಗಳ ಪೂರೈಕೆಯ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ತರುವ ಪ್ರಯತ್ನ ನಡೆಸುತ್ತದಷ್ಟೇ ಎನ್ನುತ್ತಾರೆ ಈ ಕ್ಷೇತ್ರದಲ್ಲಿನ ಪರಿಣಿತರು.

ಈ ರಂಗದಲ್ಲಿನ ನಿಜವಾದ ಸವಾಲು ಎಂದರೆ ಮೂಲಭೂತ ಸೇವೆಗಳ ಅಬಾಧಿತ ಪೂರೈಕೆಗೆ ಮತ್ತು ಅವುಗಳ ನಿರ್ವಹಣೆಗೆ ಇರುವ ಸಾಂಸ್ಥಿಕ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ನೀರು ಪೂರೈಕೆ ಮುಂತಾದ ಸೇವೆಗಳನ್ನು ರಾಜಕೀಯವಾಗಿ ಬಲಿಷ್ಠರಾಗಿರುವವರು ಪೋಲು ಮಾಡದಂತೆ ತಡೆಯುವುದು. ನೀರು ಪೂರೈಕೆ ಮುಂತಾದ ಮೂಲಸೇವೆಗಳನ್ನು ಖಾಸಗೀಕರಿಸಿ ಅವನ್ನು ಹಣಬಲದಿಂದ ಖರೀದಿಸಬಹುದಾದ ಸರಕುಗಳನ್ನಾಗಿ ಮಾಡುವುದನ್ನು ನಿಲ್ಲಿಸಿ, ಸಾರ್ವಜನಿಕ ವ್ಯವಸ್ಥೆಯ ಮೂಲಕ ಅವುಗಳನ್ನು ಒದಗಿಸುವುದರ ಮೇಲೆ ಸಾಮಾಜಿಕ ಹತೋಟಿಯನ್ನು ರೂಪಿಸಿ ಸುವ್ಯವಸ್ಥಿತಗೊಳಿಸಬೇಕಾಗಿದೆ. ಮೋದಿ ಸರಕಾರ ಈ ದಿಕ್ಕಿನಲ್ಲಿ ಯೋಚಿಸುತ್ತಲೂ ಇಲ್ಲೆಂಬುದು ಸ್ವಯಂವೇದ್ಯ. ಆದ್ದರಿಂದಲೇ ಇದು ಹಿಂದಿನ ಇಂತಹ ಹಲವಾರು ಘೋಷವಾಕ್ಯಗಳಿಗಿಂತ ಭಿನ್ನವಾಗಿಲ್ಲ ಎನ್ನುತ್ತಾರೆ ಈ ಪರಿಣಿತರು.

'ಮೇಕ್ ಇನ್ ಇಂಡಿಯಾ': ಅಮೆರಿಕಾಕ್ಕೆ ಹೊರಡುವಾಗ ಸೌರ ಪ್ಯಾನಲ್‌ಗಳಿಗೆ ವಿನಾಯ್ತಿ?

ಮೋದಿ ಸರಕಾರ ಅಧಿಕಾರ ವಹಿಸಿಕೊಳ್ಳುವ ಕೆಲವೇ ದಿನಗಳ ಮೊದಲು ಅಮೆರಿಕ, ಚೀನ, ತೈವಾನ್ ಮತ್ತು ಮಲೇಸ್ಯಾದಿಂದ ಸೌರ ಪ್ಯಾನೆಲ್‌ಗಳನ್ನು ಕಡಿಮೆ ಬೆಲೆಗೆ ತಂದು ಸುರಿಯುವುದನ್ನು ತಡೆ ಹಿಡಿಯಲು ಸುಂಕವನ್ನು ವಿಧಿಸುವ ಆದೇಶ ನೀಡಲಾಯಿತು. ಈ ಬಗ್ಗೆ ತನಿಖೆ ನಡೆಸಿದ ಅರೆ–ನ್ಯಾಯಾಂಗ ಸಂಸ್ಥೆಯೊಂದು ಈ ಆದೇಶ ನೀಡಿತ್ತು. ಹಣಕಾಸು ಮಂತ್ರಾಲಯ ನಿಗದಿತ ಅವಧಿಯೊಳಗೆ ಇದರ ಬಗ್ಗೆ ಅಧಿಸೂಚನೆ ಹೊರಡಿಸಬೇಕಾಗಿತ್ತು. ಆದರೆ ಅಧಿಕಾರ ವಹಿಸಿಕೊಂಡ ಮೋದಿ ಸರಕಾರ ಅಧಿಸೂಚನೆ ಹೊರಡಿಸದೆ ಅದು ಲೋಪಗೊಳ್ಳಲು ಬಿಟ್ಟಿದೆ ಎಂದು ವಾಣಿಜ್ಯ ಮಂತ್ರಿಗಳು ಹೇಳಿದ್ದಾರೆ, ಅದಕ್ಕೆ ವಿವರಣೆಯನ್ನೇನನ್ನೂ ಕೊಟ್ಟಿಲ್ಲ.

ಆದರೆ ಇದಕ್ಕೆ ಕಾರಣ ಮೋದಿಯವರ ಅಮೆರಿಕಾ ಭೇಟಿ ಎಂದು ರಾಯ್ಟರ್ ವರದಿ ಮಾಡಿದೆ. ಭಾರತದ ಸೋಲಾರ್ ಪ್ಯಾನೆಲ್ ತಯಾರಕರು, ಅಮೆರಿಕನ್ ತಯಾರಕರು ನಮ್ಮ ಮಾರುಕಟ್ಟೆ ಕಸಿದುಕೊಳ್ಳಲು ತಮ್ಮ ದೇಶದಲ್ಲಿ ಮಾರುವುದಕ್ಕಿಂತ ಕಡಿಮೆ ದರದಲ್ಲಿ ಇಲ್ಲಿ ತಂದು ಸುರಿಯುತ್ತಿದ್ದಾರೆ ಎಂದು ದೂರಿದ ಕಾರಣವಾಗಿ ಈ ತನಿಖೆ ನಡೆಸಲಾಗಿತ್ತು. ಇದು ಅಮೆರಿಕನ್ ತಯಾರಕರಿಗೆ ಮಾರಕವೆನಿಸಿದ್ದರಿಂದ ಅವರು ತಮ್ಮ ಸರಕಾರದ ಮೇಲೆ ಈ ಬಗ್ಗೆ ಒತ್ತಡ ಹೇರುತ್ತಿದ್ದ ಹಿನ್ನೆಲೆಯಲ್ಲಿ, ಅಮೆರಿಕನ್ ಸರಕಾರವನ್ನು ಸಂತುಷ್ಟಗೊಳಿಸಲು ಈ ಕ್ರಮ ಬಂದಿದೆ ಎಂದು ಭಾವಿಸಲಾಗುತ್ತಿದೆ.

ಹಾಗಿದ್ದರೆ ಪ್ರಧಾನ ಮಂತ್ರಿಗಳ 'ಮೇಕ್ ಇನ್ ಇಂಡಿಯಾ' ಎಂಬ ಕೆಂಪುಕೋಟೆ ಕರೆಯ ನಿಜ ಅರ್ಥವೇನು ಎಂದು ಭಾರತೀಯ ಸೌರ ಪ್ಯಾನೆಲ್ ತಯಾರಕರು ಖಿನ್ನರಾಗಿ ಕೇಳುತ್ತಿದ್ದಾರಂತೆ. ಪ್ರಧಾನಿಗಳು ಸೌರಶಕ್ತಿಯ ಬಲವಾದ ಪ್ರತಿಪಾದಕರು, ಈಗ ಸೌರ ವಿದ್ಯುತ್ ಉತ್ಪಾದನೆ 1,700 ಮೆಗಾವಾಟ್ ಇದ್ದು 2022 ರ ವೇಳೆಗೆ 20ಸಾವಿರ ಮೆಗಾವಾಟ್‌ಗೆ ಅದನ್ನು ಏರಿಸುವ ಗುರಿಯಿದೆ. ಕಳೆದ ವರ್ಷ 6,000ಕೋಟಿ ಡಾಲರುಗಳಷ್ಟು ಸೌರಶಕ್ತಿ ಉತ್ಪಾದನೆಗಳನ್ನು ಆಮದು ಮಾಡಿಕೊಳ್ಳಲಾಗಿದೆ, ಅಮೆರಿಕನ್ ಮತ್ತು ಭಾರತೀಯ ಉತ್ಪಾದಕರ ಖಿನ್ನತೆಗಳನ್ನು ಮತ್ತು 'ಮೇಕ್ ಇನ್ ಇಂಡಿಯಾ' ಘೋಷಣೆ ಎಷ್ಟು ಪ್ರಾಮಾಣಿಕ ಎಂಬುದನ್ನು ಈ ಹಿನ್ನೆಲೆಯಲ್ಲಿ ಅಂದಾಜು ಮಾಡಬೇಕಾಗಿದೆ. ಸದ್ಯಕ್ಕೆ ಅಮೆರಿಕನ್ ಉತ್ಪಾದಕರಿಗೆ 'ಒಳ್ಳೆಯ ದಿನ'ಗಳ ಆಸೆ ಚಿಗುರಿದೆ.

ವಿಧವೆಯರ ಬಗ್ಗೆ ಬಿಜೆಪಿ ಎಂಪಿಯ ಬೇಜವಾಬ್ದಾರಿಯುತ ಹೇಳಿಕೆ– ಜನವಾದಿ ಮಹಿಳಾ ಸಂಘಟನೆಯ ಖಂಡನೆ

ಬಿಹಾರ ಮತ್ತು ಪಶ್ಚಿಮ ಬಂಗಾಲದ ವಿಧವೆಯರು ವೃಂದಾವನಕ್ಕೆ ಬಂದು ನೆಲೆಸಬಾರದು ಎಂಬ ಮಥುರಾದ ಬಿಜೆಪಿ ಸಂಸತ್ ಸದಸ್ಯೆ ಹೇಮ ಮಾಲಿನಿಯವರ ಹೇಳಿಕೆ ವ್ಯಾಪಕ ಖಂಡನೆಗೆ ಒಳಗಾಗಿದೆ.


ಇದೊಂದು ಅಮಾನವೀಯ, ಬೇಜವಾಬ್ದಾರಿ ಹೇಳಿಕೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ. ವಿಧವೆಯರಿಗೂ ಭಾರತದ ಇತರ ಎಲ್ಲ ನಾಗರಿಕರಂತೆ ತಮ್ಮ ಆಯ್ಕೆಯ ಸ್ಥಳದಲ್ಲಿ ನೆಲೆಸುವ ಹಕ್ಕು ಇದೆ. ಸಾವಿರಾರು ಅನಾಥ ಮಹಿಳೆಯರು ವೃಂದಾವನಕ್ಕೆ ಶಾಂತಿ, ಸಮಾಧಾನ ಅರಸಿ ಬರುತ್ತಾರೆ. ಅದಾಗಲೇ ವೈಯಕ್ತಿಕವಾಗಿ ದುಃಖಕ್ಕೆ ಈಡಾದ ಆ ಮಹಿಳೆಯರಿಗೆ ಒಂದು ಭದ್ರತೆಯ ಮತ್ತು ಘನತೆಯ ಬದುಕು ಒದಗಿಸುವುದು ಆಡಳಿತದ ಮತ್ತು ಚುನಾಯಿತ ಪ್ರತಿನಿಧಿಯ ಕರ್ತವ್ಯ. ಆದರೆ ಸ್ವತಃ ಮಹಿಳೆಯಾಗಿರುವ ಈ ಎಂಪಿಯ ನಿಲುವು ನಿರ್ಲಕ್ಷ್ಯದಿಂದ ಕೂಡಿದೆ, ನಮ್ಮ ಚುನಾಯಿತ ಪ್ರತಿನಿಧಿಗಳು ಹೆಚ್ಚು ನ್ಯಾಯಯುತವಾದ, ಮಾನವೀಯವಾದ ನಿಲುವನ್ನು ತಳೆಯಬೇಕು, ದೇಶದ ಯಾವ ಮೂಲೆಯಲ್ಲಿಯೇ ಅಗಲಿ, ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಪಾಡಬೇಕು ಎಂದು ಸಂಘಟನೆ ಆಗ್ರಹ ಪಡಿಸಿದೆ.

ವೃಂದಾವನದಲ್ಲಿ ವಿಧವೆಯರಿಗಾಗಿ ಆಶ್ರಮ ನಡೆಸುತ್ತಿರುವ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಮೋಹಿನಿ ಗಿರಿಯವರು ಕೂಡ ಇದೊಂದು ಸಂವೇದನಾಶೂನ್ಯ ಹೇಳಿಕೆ, ಸಾವಿರಾರು ವಿಧವೆಯರ ಮನಸ್ಸು ಮುರಿದಿದ್ದಾರೆ, ಇದನ್ನು ನಾವು ಸಹಿಸಲಾರೆವು ಎಂದಿದ್ದಾರೆ. ನಿಜವಾಗಿ ಅವರು ಲೋಕಸಭಾ ಸದಸ್ಯರಾಗಿ ಈ ಮಹಿಳೆಯರಿಗೆ ಸಾಮಾಜಿಕ ಭದ್ರತೆ ಒದಗಿಸಬೇಕು, ಈ ಬಗ್ಗೆ ಮೂರು ಪತ್ರಗಳನ್ನು ಬರೆದಿದ್ದೇನೆ ಎಂದು ಮೋಹಿನಿ ಗಿರಿಯವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

500 ವಿಧವೆಯರಿಗೆ ಒಂದು ಆಶ್ರಮವನ್ನು ನಡೆಸುತ್ತಿರುವ ಇನ್ನೊಂದು ಎನ್‌ಜಿಒ 'ಮೈತ್ರಿ'ಯ ಮುಖ್ಯಸ್ಥೆ ಸೋನಾಲಿ ಸಿಂಗ್ ವಾದ್ವರವರು ಕೂಡ ಇಂತಹ ಹೇಳಿಕೆಗಳನ್ನು ಕೊಡುವ ಮೊದಲು ಈ ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು, ವಿಧವೆಯರೆನಿಸಿಕೊಂಡು ತಮ್ಮ ಘನತೆಯನ್ನು ಕಳೆದುಕೊಂಡಿರುವ ಈ ಮಹಿಳೆಯರ ಬಗ್ಗೆ ಸಂವೇದನಾಶೀಲತೆ ಬೇಕು, ಹಲವಾರು ವರ್ಷಗಳಿಂದ ಅವರು ನೆಲೆಸಿರುವ ಸ್ಥಳವನ್ನು ಬಿಟ್ಟು ಹೋಗಿ ಎನ್ನುವುದು ಅವರಲ್ಲಿ ಉಳಿದಿರುವ ಘನತೆಯನ್ನೂ ಕಿತ್ತುಕೊಂಡಂತಾಗುತ್ತದೆ ಎಂದು ಅವರು ಟೀಕಿಸಿದ್ದಾರೆ.

'ಒಳ್ಳೆಯ ದಿನ'ಗಳ ಡೈರಿ


ವೇದರಾಜ ಎನ್.ಕೆ.



'ಅಭಿವೃದ್ಧಿ' ಅಜೆಂಡಾದ ಆಚೆ

ಉತ್ತರಾಖಂಡದಲ್ಲಿ ಮತ್ತು ಬಿಹಾರದಲ್ಲಿ ಉಪಚುನಾವಣೆಗಳ ಸೋಲಿನ ನಂತರ ಮೂರನೇ ಸುತ್ತಿನಲ್ಲಿ 9 ರಾಜ್ಯಗಳಲ್ಲಿ ನಡೆದ ಉಪಚುನಾವಣೆಗಳಲ್ಲೂ, ಅದರಲ್ಲೂ ಉತ್ತರಪ್ರದೇಶ, ರಾಜಾಸ್ತಾನ ಮತ್ತು ಸ್ವತಃ ಪ್ರಧಾನಿಗಳ, ಬಿಜೆಪಿ ಅಧ್ಯಕ್ಷರ ರಾಜ್ಯ ಗುಜರಾತಿನಲ್ಲೂ ಹಿನ್ನಡೆ ಅನುಭವಿಸಿರುವುದು 'ಒಳ್ಳೆಯ ದಿನಗಳ' ನಿರೀಕ್ಷೆಯನ್ನು ಜನ ಆಗಲೇ ಕೈಬಿಟ್ಟಿದ್ದಾರೆಯೇ ಎಂದು ಸಂದೇಹಪಡುವಂತಾಗಿದೆ. ಲವ್ ಜಿಹಾದ್ ಮುಂತಾದ ವಿಭಾಜಕ ವಿಷಯಗಳ ಮೇಲೆ ಕರ್ಕಶ ಪ್ರಚಾರದಿಂದಾಗಿ ಹೀಗಾಗಿದೆ ಎಂದು ಆ ಪಕ್ಷದ ಕೆಲವರೇ ಹೇಳಿದರೆ, ಇಂತಹ ಪ್ರಚಾರದಿಂದಾಗಿ ವ್ಯಾಪಕ ಟೀಕೆಗೆ ಗುರಿಯಾದ ಉತ್ತರಪ್ರದೇಶದ ಎಂಪಿ ಯೋಗಿ ಅವೈದ್ಯನಾಥ್ ತನ್ನನ್ನು ಪ್ರಚಾರದ ಕಾರ್ಯದ ಮುಖ್ಯಸ್ಥನಾಗಿ ಮಾಡಿದರೂ ತನಗೆ ಪ್ರಚಾರಕ್ಕೆ ಸಿಕ್ಕಿದ ಅವಕಾಶ ಬಹಳ ಸೀಮಿತ ಎಂದು ತನ್ನ ಕರ್ಕಶ ಪ್ರಚಾರದಿಂದಾಗಿ ಹೀಗಾಗಿದೆ ಎಂಬುದನ್ನು ನಿರಾಕರಿಸಿದ್ದಾರೆ. ಇನ್ನೊಂದು ವಿಭಾಗವಂತೂ ಹಿಂದುತ್ವ ಅಜೆಂಡಾದ ಮೇಲೆ ಪ್ರಚಾರ ನಡೆಸಿರದಿಂದಲೇ ಸೋಲುವಂತಾಯಿತು ಎಂದು ಭಾವಿಸಿದೆ.(ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಸೀತಾರಾಂ ಯೆಚುರಿಯವರ ಲೇಖನ ನೋಡಿ)

ಈ ನಡುವೆ ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯಬೇಕಾದ ಮಹಾರಾಷ್ಟ್ರದಲ್ಲಿ ಕೇಂದ್ರದಲ್ಲಿ ಆಗಿರುವಂತೆ ಕಾಂಗ್ರೆಸ್–ಎನ್‌ಸಿಪಿ ತಮಗೆ ಅಧಿಕಾರ ವಹಿಸಿಯೇ ಬಿಟ್ಟಿದ್ದಾರೆ, ಈಗ ತಮಗೇ ಹೆಚ್ಚು ಸೀಟುಗಳು ಬೇಕು, ತಮ್ಮಲ್ಲಿ ಯಾರು ಮುಖ್ಯಮಂತ್ರಿಯಾಗಬೇಕು ಎಂಬ ಗುದ್ದಾಟದಲ್ಲಿ ಅಲ್ಲಿನ ಕೇಸರಿ ಕೂಟ ತೊಡಗಿದೆ. ಹೆಚ್ಚು ಲಂಪಟತನ ವಿಚ್ಛೇದನಕ್ಕೆ ಕಾರಣವಾಗುತ್ತದೆ ಎಂದು ಶಿವಸೇನೆ ಹೇಳಿದರೆ, 'ನಪುಂಸಕತ್ವ ಕೂಡ ವಿಚ್ಛೇದನೆಗೆ ಕಾರಣವಾಗುತ್ತದೆ ಎಂದು ಬಿಜೆಪಿ ಪ್ರತಿಕ್ರಿಯಿಸುವ ಮಟ್ಟಕ್ಕೆ ಈ ಜಗಳಾಟ ಇಳಿದಿದೆ!



ಕೃಪೆ: ದ ಹಿಂದುನಲ್ಲಿ ಸುರೇಂದ್ರ

ಕಟ್ಟಡ ಕಾರ್ಮಿಕರ ಸವಲತ್ತುಗಳ ಅರ್ಜಿ ವಿತರಣೆಗೆ ಆಗ್ರಹ

ಕಟ್ಟಡ ಕಾರ್ಮಿಕರ ಸವಲತ್ತುಗಳ ಅರ್ಜಿಗಳನ್ನು ವಿಲೇವಾರಿ ಮಾಡುವಲ್ಲಿನ ಕಾರ್ಮಿಕ ಇಲಾಖೆಯ ವಿಳಂಬ ನೀತಿಯ ವಿರುದ್ಧ ಹಾಗೂ ತ್ವರಿತವಾಗಿ ವಿತರಿಸಲು ಆಗ್ರಹಿಸಿ ಕಟ್ಟಡ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ 15-09-2014 ಮಂಗಳೂರು ನಗರದ ಕಾರ್ಮಿಕ ಇಲಾಖಾ ಕಛೇರಿ ಎದುರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸುಮಾರು 500ಕ್ಕೂ ಮಿಕ್ಕಿದ ಕಟ್ಟಡ ಕಾರ್ಮಿಕರು ಕಂಕನಾಡಿ ಮೈದಾನದಿಂದ ಮೆರವಣಿಗೆಯಲ್ಲಿ ಸಾಗುತ್ತಾ, "ಕಟ್ಟಡ ಕಾರ್ಮಿಕರ ಸವಲತ್ತುಗಳನ್ನು ನೀಡದ ರಾಜ್ಯ ಸರಕಾರಕ್ಕೆ ದಿಕ್ಕಾರ, ಶಾಶ್ವತ ಹಾಗೂ ಸಾಕಷ್ಟು ಸಿಬ್ಬಂದಿಗಳ ನೇಮಕಾತಿ ಆಗಲೇ ಬೇಕು, ಕಾರ್ಮಿಕ ಇಲಾಖೆಯಲ್ಲಿನ ಅವ್ಯವಸ್ಥೆಗಳನ್ನು ಸರಿಪಡಿಸಿ" ಮುಂತಾದ ಘೋಷಣೆಗಳನ್ನು ಕೂಗಿದರು.

ಬಳಿಕ ಕಾರ್ಮಿಕ ಇಲಾಖಾ ಕಛೇರಿ ಎದುರು ಜಮಾಯಿಸಿದ ಕಟ್ಟಡ ಕಾರ್ಮಿಕರನ್ನು ಉದ್ದೇಶಿಸಿ, ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ ಕಳೆದ ಹಲವಾರು ವರ್ಷಗಳ ಸತತ ಹೋರಾಟದ ಫಲವಾಗಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಗೊಂಡು 8 ವರ್ಷಗಳು ಕಳೆದರೂ ಕೂಡ ಸರಿಯಾದ ರೀತಿಯಲ್ಲಿ ಸೌಲಭ್ಯಗಳು ಸಿಗುತ್ತಿಲ್ಲ. ಕಳೆದ 2-3 ವರ್ಷಗಳಲ್ಲಿ ಕಟ್ಟಡ ಕಾರ್ಮಿಕರು ಸವಲತ್ತುಗಳಿಗಾಗಿ ಅರ್ಜಿ ಹಾಕಿದ್ದು ಅದನ್ನು ತ್ವರಿತಗತಿಯಲ್ಲಿ ವಿತರಿಸುವ ಬದಲು ಕ್ಷುಲ್ಲಕ ನೆಪವನ್ನೊಡ್ಡಿ ಅರ್ಜಿಗಳನ್ನು ತಿರಸ್ಕರಿಸಿರುವುದು ತೀರಾ ಖಂಡನೀಯ. ಸಾವಿರಾರು ಅರ್ಜಿಗಳು ಕಾರ್ಮಿಕ ಇಲಾಖೆಯಲ್ಲಿ ಕೊಳೆಯುತ್ತಿದ್ದರೂ ಅದನ್ನು ವಿಲೇವಾರಿ ಮಾಡಲು ಸಾಕಷ್ಟು ಸಿಬ್ಬಂದಿಗಳಿಲ್ಲ. ಇರುವ ಸಿಬ್ಬಂದಿಗಳು ಗುತ್ತಿಗೆ ನೌಕರರಾಗಿದ್ದು ಅವರನ್ನು ವಿಪರೀತವಾಗಿ ದುಡಿಸಲಾಗುತ್ತಿದೆ. ಒಟ್ಟಿನಲ್ಲಿ ಅವ್ಯವಸ್ಥೆಗಳ ಆಗರವಾಗಿರುವ ಕಾರ್ಮಿಕ ಇಲಾಖಾ ಕಛೇರಿಯ ಬಗ್ಗೆ ಸರಕಾರದ ಗಮನ ಸೆಳೆದಿದ್ದರೂ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಕಟ್ಟಡ ಕಾರ್ಮಿಕರ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸದಿದ್ದಲ್ಲಿ ಸಹಾಯಕ ಕಾರ್ಮಿಕ ಆಯುಕ್ತರಿಗೆ ಘೇರಾವ್, ರಸ್ತೆತಡೆ ಚಳುವಳಿ, ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಮುಂತಾದ ತೀವ್ರ ರೀತಿಯ ಹೋರಾಟಗಳನ್ನು ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು ಮಾತನಾಡುತ್ತಾ, ಕಟ್ಟಡ ಕಾರ್ಮಿಕರಿಗೆ ಕಾನೂನು ಸವಲತ್ತುಗಳು ಜಾರಿಗೊಂಡಿದ್ದರೂ ಅವುಗಳನ್ನು ನೀಡುವಲ್ಲಿ ಕಾರ್ಮಿಕ ಇಲಾಖಾ ಅಧಿಕಾರಿಗಳು ಕಿಂಚಿತ್ತೂ ಗಮನ ಹರಿಸುತ್ತಿಲ್ಲ. ಕಟ್ಟಡ ಕಾರ್ಮಿಕರಿಗೆ ಪ್ರತಿಯೊಂದು ಸವಲತ್ತುಗಳು ಸಿಗುವಂತೆ ಮಾಡಲು ಕಾನೂನು ಕ್ರಮಗಳು ಇರಬೇಕೇ ಹೊರತು ಅದನ್ನು ನೀಡದಂತೆ ತಡೆಯೊಡ್ಡುವುದು ಹೇಗೆ ಎಂಬಂತೆ ಕಾರ್ಮಿಕ ಇಲಾಖೆ ಹಾಗೂ ರಾಜ್ಯ ಸರಕಾರ ಪಿತೂರಿ ನಡೆಸುತ್ತಿದೆ. ಕಲ್ಯಾಣ ಮಂಡಳಿಯಲ್ಲಿ ಜಮಾವಣೆಗೊಂಡ ರೂ. 2,500 ಕೋಟಿಗೂ ಮಿಕ್ಕಿದ ಹಣವನ್ನು ಕಟ್ಟಡ ಕಾರ್ಮಿಕರಿಗೆ ವಿನಿಯೋಗಿಸುವ ಬದಲು ಶಾಸಕರ ಸಚಿವರ ಮೋಜಿನ ಪ್ರವಾಸಕ್ಕೆ ದುರುಪಯೋಗ ಪಡಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಜಿಲ್ಲೆಯಲ್ಲಿ ಸಾವಿರಾರು ಸಂಖ್ಯೆಯ ಕಟ್ಟಡ ಕಾರ್ಮಿಕರು ಗಂಭೀರ ರೀತಿಯ ಸಮಸ್ಯೆಯನ್ನು ಅನುಭವಿಸುತ್ತಿದ್ದರೂ ಜಿಲ್ಲೆಯ ಯಾವನೇ ಒಬ್ಬ ಸಚಿವರೂ, ಶಾಸಕರೂ ಮಾತನಾಡದಿರುವುದು ಈ ಜಿಲ್ಲೆಯ ದುರಂತವಾಗಿದೆ. ಇಂತಹ ಸಮಸ್ಯೆ ಮುಂದುವರಿದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳ ಮನೆಗೂ ಮುತ್ತಿಗೆ ಹಾಕಲಾಗುವುದು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಟ್ಟಡ ಕಾರ್ಮಿಕರ ಸಂಘಟನೆಯ ಮಂಗಳೂರು ನಗರ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರುರವರು, ಕಳೆದ ಕೆಲವು ವರ್ಷಗಳಲ್ಲಿ ಕಟ್ಟಡ ಕಾರ್ಮಿಕರು ಅನುಭವಿಸುತ್ತಿರುವ ಬವಣೆಗಳ ಬಗ್ಗೆ ಬೆಳಕು ಚೆಲ್ಲುತ್ತಾ, ಈ ಬಗ್ಗೆ ಹಲವಾರು ಬಾರಿ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ತೀರಾ ನಿರ್ಲಕ್ಷ್ಯವಹಿಸಲಾಗಿದೆ. ಸಮಸ್ಯೆ ಪರಿಹರಿಸಬೇಕಾದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರವೂ ಕೂಡ ಕಟ್ಟಡ ಕಾರ್ಮಿಕರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಕಟ್ಟಡ ಕಾರ್ಮಿಕರ ಸಂಘಟನೆಯ ಮಂಗಳೂರು ನಗರಾಧ್ಯಕ್ಷರಾದ ರವಿಚಂದ್ರ ಕೊಂಚಾಡಿ, ಸಿಐಟಿಯು ಮಂಗಳೂರು ನಗರಾಧ್ಯಕ್ಷರಾದ ಜಯಂತಿ ಬಿ. ಶೆಟ್ಟಿಯವರು ಮಾತನಾಡಿ ಕಟ್ಟಡ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರಕಾರ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ಹೋರಾಟದ ನೇತೃತ್ವವನ್ನು ಕಟ್ಟಡ ಕಾರ್ಮಿಕ ಸಂಘಟನೆಯ ನಗರ ಮುಖಂಡರಾದ ಸಂತೋಷ್ ಶಕ್ತಿನಗರ, ದಿನೇಶ್ ಶೆಟ್ಟಿ, ಪ್ರೇಮ್‌ನಾಥ್, ಲೋಕೇಶ್ ಎಂ, ಮನೋಜ್ ಉರ್ವಸ್ಟೋರ್, ಕಿಶೋರ್, ಅಶೋಕ್ ಸಾಲ್ಯಾನ್, ಉಮಾಶಂಕರ್, ಶ್ಯಾಮುವೆಲ್ ಟೈಟಸ್ ಮುಂತಾದವರು ವಹಿಸಿದ್ದರು. ಬಳಿಕ ನಿಯೋಗವೊಂದು ಕಾರ್ಮಿಕ ಇಲಾಖಾ ಅಧಿಕಾರಿಗಳನ್ನು ಭೇಟಿಯಾಗಿ ಮನವಿಯನ್ನು ಅರ್ಪಿಸಿತು. ಮನವಿಗೆ ಕೂಡಲೇ ಸ್ಪಂದನ ದೊರೆಯದಿದ್ದಲ್ಲಿ ತೀವ್ರ ರೀತಿಯ ಹೋರಾಟವನ್ನು ನಡೆಸುವ ಎಚ್ಚರಿಕೆಯನ್ನು ನೀಡಲಾಯಿತು.



ಯಡ್ತರೆ - ಊದೂರು ಪ್ರದೇಶದ ಕಟ್ಟಡ ಕಾರ್ಮಿಕರ ಬೃಹತ್ ಸಮಾವೇಶ

ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಇಡ್ಲ್ಯೂಎಫ್‌ಐ)ಗೆ ಸಂಯೋಜಿಸಲ್ಪಟ್ಟ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಅಡಿಯಲ್ಲಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ.) (ಸಿಐಟಿಯು) ಆಶ್ರಯದಲ್ಲಿ ಬೈಂದೂರು ಹೋಬಳಿಯ ಯಡ್ತರೆ ಗ್ರಾಮದ ಊದೂರು ಪ್ರದೇಶದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಬೃಹತ್ ಸಮಾವೇಶವು ದಿನಾಂಕ 16 ಸೆಪ್ಟೆಂಬರ್ 2014ರಂದು ಜರುಗಿತು.

ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ.) (ಸಿಐಟಿಯು) ದ ಅಧ್ಯಕ್ಷ ಯ. ದಾಸ ಭಂಡಾರಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಭಾರತದೇಶದಲ್ಲಿ ಕೃಷಿಕ್ಷೇತ್ರವನ್ನು ಹೊರತು ಪಡಿಸಿದರೆ ಅತೀ ಹೆಚ್ಚು ಸಂಖ್ಯೆಯಲ್ಲಿ ಉದ್ಯೋಗ ಒದಗಿಸುವ ಕ್ಷೇತ್ರ ನಿರ್ಮಾಣ ಕ್ಷೇತ್ರವಾಗಿದೆ. ನಿರ್ಮಾಣ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರು ಬಹುತೇಕ ದಿನಕೂಲಿ ನೌಕರರಾಗಿದ್ದಾರೆ. ನಗರ ಪ್ರದೇಶದಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನೇ ನಿರ್ಮಿಸಿದರೂ ಇಂದಿಗೂ ಸ್ಲಂಗಳಲ್ಲಿ ಮಾತ್ರವೇ ಬದುಕು ಸಾಗಿಸುವ ಪರಿಸ್ಥಿತಿ ನಿರ್ಮಾಣ ಕಾರ್ಮಿಕರದ್ದಾಗಿದೆ ಎಂದು ಹೇಳಿದರು. ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ಕಾರ್ಮಿಕ ಸಂಘಟನೆಯ ದಶಕಗಳ ಹೋರಾಟದ ಫಲವಾಗಿ 1996ರಲ್ಲಿ ಕೇಂದ್ರ ಸರಕಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಉದ್ಯೋಗ ಮತ್ತು ಸೇವಾ ನಿಯಮಾವಳಿಗಳ ರೂಪದಲ್ಲಿ ಒಂದು ಜೀವನ ಭದ್ರತೆಯ ಕಾನೂನು ಜಾರಿಗೆ ತಂದಿತು ಎಂದು ಭಂಡಾರಿ ಹೇಳಿದರು.

ಕಟ್ಟಡ ಕಾರ್ಮಿಕರ ಸಮಾವೇಶದ ಅಧ್ಯಕ್ಷತೆಯನ್ನು ಮಹೇಶ ಭಂಡಾರಿ ವಹಿಸಿದ್ದರು. ಸಿಐಟಿಯು ಬೈಂದೂರು ಕಛೇರಿ ಕಾರ್ಯದರ್ಶಿ ನಾಗರತ್ನ ಉಪಸ್ಥಿತರಿದ್ದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಊದೂರು ಘಟಕದ ಕಾರ್ಯಕಾರಿ ಸಮಿತಿಗೆ ಮಹೇಶ ಭಂಡಾರಿ (ಅಧ್ಯಕ್ಷ) ಮಂಜುನಾಥ ಖಾರ್ವಿ (ಉಪಾಧ್ಯಕ್ಷ) ಸುಭಾಷ್ ಭಂಡಾರಿ (ಕಾರ್ಯದರ್ಶಿ) ಮಂಜು ಪೂಜಾರಿ (ಜತೆ ಕಾರ್ಯದರ್ಶಿ), ಗಣಪತಿ ಭಂಡಾರಿ (ಕೋಶಾಧಿಕಾರಿ) ಸುರೇಂದ್ರ ಭಂಡಾರಿ, ಸುಬ್ರಾಯ ಭಂಡಾರಿ, ವಿಘ್ನೇಶ್ವರ ಭಂಡಾರಿ, ಪ್ರದೀಪ ಭಂಡಾರಿ, ನಾಗೇಶ ಎಂ.ಭಂಡಾರಿ, ಚಂದ್ರ ಭಂಡಾರಿ, ನಾಗೇಶ ಭಂಡಾರಿ, ನರಸಿಂಹ ಭಂಡಾರಿ (ಸದಸ್ಯರು) ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವರದಿ : ವೆಂಕಟೇಶ ಕೋಣಿ.

ಕೃಷಿಗೆ ಪೂರಕ ಕೈಗಾರಿಕೆಗಳನ್ನು ಸರ್ಕಾರ ಸ್ಥಾಪಿಸಲಿ

- ಬಿ.ಉಮೇಶ್

ಇತ್ತೀಚಿಗೆ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು, ಸಂಪಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಡ ಕಾರ್ಮಿಕರ ಸಮ್ಮೇಳನವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ರಿ) ಸಿಐಟಿಯು ಸಂಘದ ವತಿಯಿಂದ ಸಂಪಿಗೆ ಗ್ರಾಮದ ಬಿ.ಎಂ.ಶ್ರೀ. ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿ.ಡಬ್ಲ್ಯು.ಎಫ್.ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಉಮೇಶ್ ಮಾತನಾಡಿ ದೇಶದಲ್ಲಿ ಹೆಚ್ಚು ಉದ್ಯೋಗಗಳನ್ನು ನೀಡಿದ್ದ ಕೃಷಿ ವಲಯ ಸರ್ಕಾರದ ಜನವಿರೋಧಿ ನೀತಿಗಳಿಂದ ವಿನಾಶದ ಹಾದಿ ಹಿಡಿದಿದೆ. ನಗರ ಕೇಂದ್ರಿತ ಅಭಿವೃದ್ಧಿಯಿಂದ ಜನರು ಉದ್ಯೋಗಕ್ಕಾಗಿ ನಗರದತ್ತ ವಲಸೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಕೃಷಿಗೆ ಪೂರಕ ಕೈಗಾರಿಕೆಗಳನ್ನು ಸರ್ಕಾರ ಸ್ಥಾಪಿಸಿದರೆ ಮಾತ್ರ ಜನರ ಆದಾಯದಲ್ಲಿ ಹೆಚ್ಚಳ, ಉದ್ಯೋಗ ಸೃಷ್ಟಿ, ಮತ್ತು ಅಭಿವೃದ್ಧಿಯನ್ನು ದೇಶದಲ್ಲಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು. ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಗುತ್ತಿಗೆದಾರರಾದ ಎಂ.ಟಿ.ದೇವರಾಜು ಮತ್ತು ಷಣ್ಮುಖಸ್ವಾಮಿಯವರು ಕಾರ್ಮಿಕರಿಗೆ ಗುರುತು ಚೀಟಿ ವಿತರಿಸಿದರು. ಸಿ.ಡಬ್ಲ್ಯು.ಎಫ್.ಐ. ರಾಜ್ಯ ಉಪಾಧ್ಯಕ್ಷ ಶ್ರೀಧರ್, ಅಂಗನವಾಡಿ ಸಂಘಟನೆಯ ತಾಲ್ಲೂಕು ಅಧ್ಯಕ್ಷರಾದ ವಸಂತಕುಮಾರಿ, ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ಮಲ್ಲೇಶಯ್ಯ, ಗಂಗಣ್ಣ, ಬಿ.ಕೆ.ಶಿವರಾಜ್, ಅಕ್ಷರ ದಾಸೋಹ ನೌಕರರ ಮುಖಂಡರಾದ ಸಿದ್ದಗಂಗಮ್ಮ, ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಪದಾಧಿಕಾರಿಗಳ ಆಯ್ಕೆ

ಸಂಘದ ಸಂಪಿಗೆ ಗ್ರಾಮ ಪಂಚಾಯಿತಿ ಶಾಖೆಗೆ ಅಧ್ಯಕ್ಷರಾಗಿ ಶಂಕರಪ್ಪ, ಕಾರ್ಯದರ್ಶಿಯಾಗಿ ಬಿ.ಕೆ.ಶಿವರಾಜು, ಖಜಾಂಚಿಯಾಗಿ ವೇದಮೂರ್ತಿ, ಉಪಾಧ್ಯಕ್ಷರುಗಳಾಗಿ ತಿಮ್ಮಯ್ಯ,ಆನಂದ್,ಮೋಹನ್ ಕುಮಾರ್, ನಾಗರಾಜ್, ಸಹಕಾರ್ಯದರ್ಶಿಗಳಾಗಿ, ಸುರೇಶ್, ನಂದೀಶ್ ಎಂ.ಎಸ್, ರಮೇಶ್ ಎ.ಟಿ., ಶ್ರೀಮತಿ ನಾಗಮ್ಮನವರು ಆಯ್ಕೆಯಾಗಿದ್ದು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹನುಮಯ್ಯ, ಶಿವಕುಮಾರಸ್ವಾಮಿ, ರಾಮಯ್ಯ, ಲಕ್ಷ್ಮಣ್, ಶ್ರೀನಿವಾಸ್ ಗಂಗಾಧರಯ್ಯ, ಲಕ್ಷ್ಮೀಕಾಂತ್, ನರಸಿಂಹಮೂರ್ತಿ, ಚಿಕ್ಕಲಿಂಗಯ್ಯನವರನ್ನು ಸಮ್ಮೇಳನ ಆಯ್ಕೆ ಮಾಡಿತು.

ಪ್ರಾರಂಭದಲ್ಲಿ ವೇದಮೂರ್ತಿ ಸ್ವಾಗತಿಸಿ ಶಂಕರಪ್ಪನವರು ವಂದನಾರ್ಪಣೆ ಮಾಡಿದರು.

-ಬಸವರಾಜು

ಈ ವಾರ.....

ಪುಟ 3 ರಿಂದ

ದಬ್ಬಾಳಿಕೆ ಎಂದು ನೋಡುವುದೇ ಅವೈಜ್ಞಾನಿಕ, ಅಚಾರಿತ್ರಿಕ. ದಮನಕಾಂಡವೆಂಬುದು ಬಹುತೇಕ ಎಲ್ಲಾ ರಾಜಪ್ರಭುತ್ವದ ಅಂತರ್ಗತ ಪ್ರಮುಖ ಆಡಳಿತ ವಿಧಾನ. 'ಒಂದು ಊರಿನಲ್ಲಿ ಒಬ್ಬ ರಾಜನಿದ್ದ, ಆತ ಒಳ್ಳೆಯವನಾಗಿದ್ದ' ಎಂಬುದನ್ನು ಮಕ್ಕಳಿಗೆ ಹೇಳುವ ಕಥೆಗಳಲ್ಲಿ ಅಷ್ಟೇ ಕೇಳಬಹುದು. ಒಂದು ವೇಳೆ ರಾಜ 'ಒಳ್ಳೆಯವನಾಗಿದ್ದರೆ' ಅವನ ಪ್ರಜೆಗಳು 'ರಾಜಶಾಹಿಯನ್ನು ಪ್ರಶ್ನಿಸದ' ಒಳ್ಳೆಯವರಾಗಿದ್ದರಿಂದ ಎಂಬುದನ್ನು ಮರೆಯಬಾರದು.

ಒಂದು ವೇಳೆ ರಜಾಕಾರರ ದಬ್ಬಾಳಿಕೆಯನ್ನು ಮತೀಯ ನೆಲೆಯಲ್ಲಿ ವ್ಯಾಖ್ಯಾನಿಸುವುದಾದರೆ ಅದೇ ಹೊತ್ತಿನಲ್ಲಿ ನಿಜಾಂಶಾಹಿ ವಿರುದ್ಧ, ಅಲ್ಲಿಯ ಭೂ ಮಾಲೀಕ ಪಾಳೇಗಾರರ ವಿರುದ್ಧ ಭೂಮಿಗಾಗಿ, ನ್ಯಾಯಕ್ಕಾಗಿ, ದಬ್ಬಾಳಿಕೆ ಶೋಷಣೆಗಳ ವಿರುದ್ಧ ಹೋರಾಡುತ್ತಿದ್ದ ತೆಲಂಗಾಣದ ವೀರ ರೈತರು, ಕಮ್ಯೂನಿಸ್ಟ್ ಯೋಧರನ್ನು ದಮನಗೊಳಿಸಲು ರಜಾಕರ ಹತ್ತಾರು ಪಟ್ಟು ದಬ್ಬಾಳಿಕೆ, ಹಿಂಸೆಯ ಮಿಲಿಟರಿ ಕಾರ್ಯಾಚರಣೆ ಮಾಡಿದ ನೆಹರೂ, ವಲ್ಲಭಭಾಯಿ ಪಟೇಲ್ ರವರನ್ನು ಏನೆಂದು ಕರೆಯಬೇಕು. ಭಾರತೀಯ ಪ್ರಭುತ್ವದ ದಮನ ವೆನ್ನದೇ ಜಾತಿ– ಮತದ ನೆಲೆಯಲ್ಲಿ ಹೇಳಲಾದೀತೇ?

ಹಾಗೆಯೇ, ಈ ಪ್ರದೇಶಕ್ಕೆ ಮಾತ್ರ ತಡವಾಗಿ ಸ್ವಾತಂತ್ರ್ಯ ಸಿಕ್ಕಿತೆಂದೂ, ಎರಡೆರಡು ಸ್ವಾತಂತ್ರ್ಯ ದಿನಗಳಿವೆಯೆಂಬುದೂ ದಾರಿ ತಪ್ಪಿಸುವ ವಾದವೇ ಆಗಿದೆ. ಬ್ರಿಟೀಶರಿಂದ ಸ್ವಾತಂತ್ರ್ಯ ಪಡೆದ ಹೊಸ್ತಿಲಿನಲ್ಲಿ 1947ರಲ್ಲಾದ ಮೌಂಟ್ ಬ್ಯಾಟನ್ ಪ್ಲಾನ್ ಆಧರಿಸಿದ ಒಪ್ಪಂದಂತೆ 636 ರಾಜರ ಸಂಸ್ಥಾನಗಳು ಭಾರತ ಅಥವಾ ಪಾಕಿಸ್ತಾನ ಸೇರುವ ಇಲ್ಲವೇ ಸ್ವತಂತ್ರವಾಗುಳಿಯುವ ಅವಕಾಶ ನೀಡಲಾಗಿತ್ತು. ಇದರಲ್ಲಿ ಮುಂದೆ 565 ಪ್ರಾಂತ್ಯಗಳು ಭಾರತ ಒಕ್ಕೂಟದೊಂದಿಗೆ ವಿಲೀನವಾಗಲು ಒಪ್ಪಿದವು. ಇದಕ್ಕೆ ಜನರ ಒತ್ತಡದ ಚಳುವಳಿಗಳೇ ಮುಖ್ಯ ಕಾರಣ. ಇದಕ್ಕೊಪ್ಪದ ಕೆಲವರು ಕಾಲಕ್ರಮೇಣ ಒಪ್ಪಿದರು. ವಿಶೇಷವಾಗಿ ಮುಸ್ಲಿಮರೇ ಅಧಿಕವಾಗಿದ್ದ ಕಾಶ್ಮೀರದ ಜನತೆ ಭಾರತದೊಂದಿಗೆ ಇರಲು ಬಯಸಿದರೆ, ಅಲ್ಲಿದ್ದ ಹಿಂದೂ ರಾಜ ಪ್ರತ್ಯೇಕವಾಗಿರಲು ಬಯಸಿದ. ಈಗ ಕಾಶ್ಮೀರದ ಬಗ್ಗೆ ಮನಸ್ಸಿಗೆ ಬಂದಂತೆ ಹಾರಾಡುತ್ತಿರುವ ಬಿಜೆಪಿಯ ಹಿಂದಿನ ಅವತಾರವಾದ ಜನಸಂಘ ಈ ಮಹಾರಾಜನಿಗೆ ಬೆಂಬಲವಾಗಿ ನಿಂತದ್ದು ಗೊತ್ತಿಲ್ಲದ ವಿಷಯವೇನಲ್ಲ. ಆಗ ಹೈದರಾಬಾದ್ ನಿಜಾಂ 'ಸ್ಟ್ಯಾಂಡ್ ಸ್ಟಿಲ್' ಒಪ್ಪಂದದಲ್ಲಿದ್ದ, ಈ ನಂತರ ಭಾರೀ ಮಿಲಿಟರಿ (ಪೋಲೀಸ್) ಕಾರ್ಯಚರಣೆ ಮೂಲಕವೇ ನಿಜಾಂನನ್ನು ಸೇರಿಸಿಕೊಳ್ಳಲಾಯಿತು ಎಂಬುದೂ ಒಂದು ಉತ್ರೇಕ್ಷಿತ ಸಂಗತಿ ಎನ್ನುತ್ತಾರೆ ಇತಿಹಾಸಕಾರರು. ಯಾವುದೇ ಪ್ರತಿರೋಧವಿಲ್ಲದೇ ಪಡೆಗಳು ಅರಮನೆ ಪ್ರವೇಶಿಸಿದ್ದು, ನಿಜಾಂ ಭಾರತ ಸರಕಾರದ ಪ್ರತಿನಿಧಿಯೊಂದಿಗೆ ಘೋಷಣೆ ಹೊರಡಿಸಿದ್ದು ಲಿಖಿತ. ಎಲ್ಲಾ ಪ್ರಾಂತ್ಯಗಳಂತೆ ಹೈದ್ರಾಬಾದ್ ಪ್ರಾಂತ್ಯವೂ ಸಹ 1950 ಜನವರಿ26ಕ್ಕೆ ಹೊಸ ರಾಜ್ಯವಾಗಿ ಸೇರ್ಪಡೆಯಾಯಿತು. ಆದ್ದರಿಂದಲೇ ಸೆಪ್ಟಂಬರ್ 17 ನ್ನು ವಿಮೋಚನಾ ದಿನವೆಂದು ಆಚರಿಸುವುದಕ್ಕೆ ಯಾವುದೇ ಮಹತ್ವವೇ ಇಲ್ಲ, ಅದು ನಿಜಾಂ ರೇಡಿಯೋದಲ್ಲಿ ಮಾತನಾಡಿದ ದಿನವಷ್ಟೇ ಎಂದು ಇತಿಹಾಸಕಾರರು ಹೇಳುತ್ತಾರೆ.



ಹಿಂಸಾಕಾಂಡವೆಂಬುದು ನಡೆದದ್ದು ಹಿಂದೆ ನಿಜಾಂ ಆಡಳಿತದಲ್ಲಿ ರಜಾಕಾರರರಿಂದ, ಇದರ ಹತ್ತಾರು ಪಟ್ಟು ನಡೆದದ್ದು ನೆಹರೂ ಪಟೇಲ್ ಸೈನ್ಯ ಜಮೀನುದಾರರು, ಅವರ ಗೂಂಡಾ ಪಡೆಗಳಿಂದ. ಒಂದೆಡೆ ಇಲ್ಲಿ ತೆಲಂಗಾಣ ಹೋರಾಟಗಾರರ ವಿರುದ್ಧ, ಇನ್ನೊಂದೆಡೆ ಸಾಮಾನ್ಯ ಜನ, ಅದರಲ್ಲೂ ಮುಸ್ಲಿಂರ ವಿರುದ್ಧ. ಇದರಲ್ಲಿ ಹತ್ತಾರು ಸಾವಿರ ಅಮಾಯಕರು ಕಗ್ಗೊಲೆಗೀಡಾದರು, ಆಸ್ತಿ–ಪಾಸ್ತಿ ಕಳೆದುಕೊಂಡರು ಎಂಬುದನ್ನು ಹಲವಾರು ಚರಿತ್ರಕಾರರು ತಿಳಿಸುತ್ತಾರೆ. ಮತೀಯ ನೆಲೆಯ ಇಂತಹ ಅನಾಹುತಗಳು ಈಗ ಮರುಕಳಿಸಬೇಕೇ?.

ಇಂತಹುದನ್ನೇ ಎತ್ತಾಡಿ, ವಿಜೃಂಭಿಸುವುದರಲ್ಲಿ ಬಿಜೆಪಿಯ ಸಂತೋಷ ಏನು, ಅದರ ಉದ್ದೇಶ ಏನು ಎಂದು ಅರ್ಥವಾಗುವುದು ಕಷ್ಟವೇನಲ್ಲ. ಕರ್ನಾಟಕವನ್ನು ಗುಜರಾತ್ ಮಾಡ ಬಯಸಿದವರು ಈಗ ಇಡೀ ಭಾರತವನ್ನೇ 'ಗುಜರಾತ್'ನ್ನಾಗಿಸ ಹೊರಟಿದ್ದಾರೆ. ಎಂದೋ ಚರಿತ್ರೆಯಲ್ಲಿ ಆಳುವವರ ಕುತಂತ್ರಗಳಿಗಾಗಿ ನಡೆದು ಹೋದ ಕೆಲವು ಘಟನೆಗಳನ್ನೇ ಮತ್ತೆ ಮತ್ತೇ ಕೆದಕಿ ಕೋಮು ಸೌಹಾರ್ದತೆ, ಸಾಮರಸ್ಯದ ಪರಂಪರೆಯಿರುವ ಹೈದ್ರಾಬಾದ್– ಕರ್ನಾಟಕವನ್ನು ಕೋಮುದ್ವೇಷದ ದಳ್ಳುರಿಯಲ್ಲಿ ತಳ್ಳುವುದಕ್ಕೆ ಹೋಗುವುದೆಂದರೆ ಏನರ್ಥ? ಇದಕ್ಕೆ ನಾವು ಅವಕಾಶ ನೀಡಬೇಕೇ? ಯಾಕೆಂದರೆ ಇದೀಗ ಗೋರ್ಟಾವನ್ನು 'ಕರ್ನಾಟಕದ ಅಯೋಧ್ಯಾ' ಎಂತೆಲ್ಲಾ ಬಣ್ಣಿಸುತ್ತಿರುವವರ ಅಂತಿಮ ಗುರಿ ಏನು ಎಂಬ ಬಗ್ಗೆ ಎಚ್ಚರವಿರಲಿ.

ಈ ಅಮಿತ್‌ಷಾ ಗುಜರಾತ್ ಹತ್ಯಾಕಾಂಡದ ರುವಾರಿಗಳಲ್ಲಿ ಒಬ್ಬ ಎಂಬ ಪ್ರಮುಖ ಆರೋಪಿ, ಮೋದಿಯ ಸಾಥಿ, ಇವರು ನಡೆದಾಡಿದಲ್ಲಿ ನೆತ್ತರ ಮಳೆ ಸುರಿಯಬೇಕೇ? ವಿಷದ ಉಸಿರು ಸೋಂಕಬೇಕೇ?

ಮನುಷ್ಯತ್ವ

ನನ್ನ ದೇವರ ಒಲಿಸೆ ಬಾಹ್ಯ ಭಕ್ತಿ ಬೇಡ
ಆ ಹಣ್ಣು ಕಾಯಿಗಳು ಕಾಣಿಕೆಯು ಕೂಡ
ಬರೆ ಒಂದು ಕೆಸರಿರದ ಪ್ರೀತಿಯೇ ಸಾಕು
ಧನ್ಯ ನಲ್ಲವೆ ನಾನು ಇನ್ನೇನು ಬೇಕು?

– ವಿಡಂಬಾರಿ

ಪ್ರಶ್ನೋತ್ತರ

ಬಡತನವ ತೊಲಗಿಸುವ ಯೋಜನೆಯು ಮತ್ತೆ
ಎಷ್ಟು ಶತಮಾನದ್ದು ಅನ್ನುವುದು ಗೊತ್ತೆ?
ಎಲ್ಲರೂ ಉಣ್ಣಲೆಂಬ ತತ್ವದಧಿಕಾರ
ಬರುವವರೆಗೂ ಗೊತ್ತೆ ಭ್ರಷ್ಟರ ದರಬಾರ.

– ವಿಡಂಬಾರಿ

ಈ ಐವರು ಉದ್ಯೋಗ ಪತಿಗಳು

ದೇಶದ ಒಟ್ಟೂ ಸಂಪತ್ತಿನಲ್ಲಿ ನೋಡಿ
ಅರ್ಧವನು ಐವರೇ ಹಾಕಿಹರು ಕೂಡಿ
ಉಳಿದಿರುವ ಅರ್ಧದೊಳು ಮಠ ಗುಡಿಗೆ ಕೊನೆಗೆ
ಪ್ರಭುಗಳಿಗೆ ಪಾಲಾಗಿ ಉಳಿದಿರಲು ನಮಗೆ

– ವಿಡಂಬಾರಿ

ಲೋಭಿ ದೊಡ್ಡಣ್ಣ

ಯುದ್ಧ ಪ್ರಚೋದಕನೇ ದೊಡ್ಡ ನೋಡಿ
ಉಬ್ಬಿಸುವ ಇಬ್ಬದಿಗು ಶಸ್ತ್ರಾಸ್ತ್ರ ನೀಡಿ
ಈ ರೀತಿ ನೆತ್ತರಿನ ವ್ಯಾಪದಿಂದ
ಅಪಾರ ಪುಣ್ಯವನು ಗಳಿಸುತ್ತ ಬಂದ.

– ವಿಡಂಬಾರಿ

ಇಂಡೋನೇಷ್ಯಾಕ್ಕೆ ......

ಪುಟ 16 ರಿಂದ

ನಾಯಕತ್ವದಿಂದ ಹೆಚ್ಚು ವಿಕೇಂದ್ರೀಕೃತ ನಾಯಕತ್ವದತ್ತ ಹೊರಳಲಿದೆ ಎಂದರು.

ನವ–ಉದಾರವಾದಿ ನೀತಿ ಬದಲಾವಣೆ ಸಾಧ್ಯತೆ ಇದೆಯೇ?

ಆದರೆ ಅಕ್ಟೋಬರಿನಲ್ಲಿ ಅಧಿಕಾರ ವಹಿಸಿಕೊಳ್ಳಲಿರುವ ಅವರ ಮುಂದೆ ತೀವ್ರ ಸವಾಲುಗಳೂ ಇವೆ. 4ನೇ ಅತಿದೊಡ್ಡ ಜನಸಂಖ್ಯೆಯ 16ನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ಇಂಡೋನೇಷ್ಯಾದಲ್ಲಿ 3 ಕೋಟಿ ಜನ ಬಡತನದ ರೇಖೆಯ ಕೆಳಗೆ (ಅಂದರೆ ದಿನಕ್ಕೆ ಒಂದುವರೆ ಡಾಲರು ಅಂದರೆ 90 ರೂ.ನಲ್ಲಿ) ಬದುಕುತ್ತಿದ್ದಾರೆ. ಇಂಡೊನೇಶ್ಯಾ ನಿಕ್ಕೆಲ್‌ನ ಅತಿದೊಡ್ಡ ಉತ್ಪಾದಕ. ತಾಮ್ರ, ಕಬ್ಬಿಣ ಮತ್ತು ಬಾಕ್ಸೈಟುಗಳ ದೊಡ್ಡ ಉತ್ಪಾದಕ. ಆದರೆ ಈವರೆಗಿನ ಸರಕಾರಗಳು ನವ–ಉದಾರವಾದಿ ನೀತಿಗಳನ್ನು ಅನುಸರಿಸುತ್ತಿದ್ದು ಇಂಡೋನೇಶ್ಯಾದ ಪ್ರಾಕೃತಿಕ ಸಂಪನ್ಮೂಲಗಳು ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿವೆ. ಉದಾಹರಣೆಗೆ ಎರಡು ಅಮೆರಿಕನ್ ಕಂಪನಿಗಳು ದೇಶದ ಶೇ. 97 ತಾಮ್ರ ರಫ್ತು ಮಾಡುತ್ತಿವೆ. ವಿಶ್ವ ಬ್ಯಾಂಕ್ ಮುಂತಾದ ಸಂಸ್ಥೆಗಳು ಗಣಿಗಳಲ್ಲಿ ಇನ್ನಷ್ಟು ವಿದೇಶೀ ಹೂಡಿಕೆಗೆ ಅವಕಾಶ ಮಾಡಲು ಒತ್ತಾಯಿಸುತ್ತಿವೆ. ಹಿಂದಿನ ಸರಕಾರ ಅದಿರಿನ ರಫ್ತಿಗೆ ನಿಷೇಧ ಹೇರಿದ್ದು ಅದರ ಸಂಸ್ಕರಣೆ ಮಾಡುವ ಕಾರ್ಖಾನೆಗಳನ್ನು ದೇಶದಲ್ಲೇ ಸ್ಥಾಪಿಸಿ ಸಂಸ್ಕರಣೆ ಮಾಡಿದ ಉತ್ಪನ್ನಗಳನ್ನು ರಫ್ತು ಮಾಡುವಂತೆ ಈ ಕಂಪನಿಗಳನ್ನು ಕೇಳಿತ್ತು. ಈ ಕಂಪನಿಗಳು ಮತ್ತು ಅವುಗಳನ್ನು ಬೆಂಬಲಿಸುವ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಈ ನಿಷೇಧವನ್ನು ತೆಗೆಯುವಂತೆ ಹೊಸ ಅಧ್ಯಕ್ಷ ಜೊಕೊವಿ ಮೇಲೆ ಒತ್ತಡ ಹಾಕಲಿವೆ.

ಭ್ರಷ್ಟಾಚಾರ–ಮುಕ್ತ ಸ್ವಚ್ಛ ಆಡಳಿತದ ಹಿನ್ನೆಲೆ ಇರುವ ಜೊಕೊವಿ ನವ–ಉದಾರವಾದಿ ನೀತಿಗಳ ವಿರುದ್ಧ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಚುನಾವಣಾ ಸಂದರ್ಭದಲ್ಲಿ ಒಂದು ಸಂದರ್ಶನದಲ್ಲಿ ವಿದೇಶೀ ಹೂಡಿಕೆ ಉತ್ತೇಜನ ನೀಡುವ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದಿದ್ದರು. ಆದ್ದರಿಂದ ನವ–ಉದಾರವಾದಿ ನೀತಿಗಳು ಹಾಗೇನೆ ಮುಂದುವರೆಯುವ ಸಾಧ್ಯತೆಯೇ ಹೆಚ್ಚು. ದೇಶದ ಮೂಲ ಸೌಕರ್ಯಗಳನ್ನು ವ್ಯಾಪಕವಾಗಿ ಹೆಚ್ಚಿಸುವುದು ತಮ್ಮ ಆದ್ಯತೆ ಎಂದಿದ್ದಾರೆ. ಇದಕ್ಕೆ ವಿಶ್ವಬ್ಯಾಂಕ್ ಮುಂತಾದ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಸಹಾಯಧನ ಬೇಕಾಗುತ್ತದೆ. ಆದರೆ ಈ ಸಂಸ್ಥೆಗಳು ದೇಶದ ಬಜೆಟಿನ ಐದನೇ ಒಂದು ಭಾಗದಷ್ಟು ಸಂಪನ್ಮೂಲ ಬೇಕಾಗುವ ಇಂಧನ ಸಬ್ಸಿಡಿ ಕೊನೆಗೊಳಿಸುವ ಒತ್ತಡ ಹಾಕಲಿವೆ. ಬಡಜನರ ಸಮಸ್ಯೆಗಳ ಬಗ್ಗೆ ಸಹಾನುಭೂತಿ ಇರುವ ಜೊಕೊವಿ ಅವರಿಗೆ ಇದು ನುಂಗಲಾರದ ತುತ್ತಾಗಲಿದೆ. ಆದ್ದರಿಂದ ಯಾವ ರೀತಿಯ ಆರ್ಥಿಕ ನೀತಿಗಳನ್ನು ಅವರು ಅಂಗೀಕರಿಸಲಿದ್ದಾರೆ ಎಂದು ಕಾದು ನೋಡಬೇಕು.

JANASHAKTHI KANNADA VARA PATRIKE SEPT 28, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ

ಇಂಡೋನೇಶ್ಯಾಕ್ಕೆ ಹೊಸ ಅಧ್ಯಕ್ಷ



ಇಂಡೋನೇಶ್ಯಾ ಹೊಸ ಅಧ್ಯಕ್ಷರನ್ನು ಚುನಾಯಿಸಿದೆ. ಅವರ ಹೆಸರು ಜೊಕೊವಿದೊದೊ. ಅವರ ಚುನಾವಣೆಯೊಂದು ವಿಶೇಷ. ಅವರು ಜಗತ್ತಿನ 4ನೇ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶವೊಂದರ ಅಧ್ಯಕ್ಷ ಎಂಬುದು ಮಾತ್ರ ವಿಶೇಷವಲ್ಲ. ಇದೇ ಮೊದಲ ಬಾರಿಗೆ ಜನರಲ್ ಸುಹಾರ್ತೊ ಮತ್ತು ಅವರ ಮಿಲಿಟರಿ ಸರ್ವಾಧಿಕಾರಿ ಆಡಳಿತದ ಜತೆ ಯಾವುದೇ ಸಂಬಂಧ ಹೊಂದಿರದ ಮತ್ತು ಯಾವುದೇ ಪ್ರಸಿದ್ಧ ರಾಜಕೀಯ ಅಥವಾ ಉದ್ಯಮಿ 'ಕುಲೀನ' ಮನೆತನಕ್ಕೆ ಸೇರದ 'ಸಾಮಾನ್ಯ ನಾಗರಿಕ' ಒಬ್ಬ ಅಧ್ಯಕ್ಷನಾಗಿ ಚುನಾಯಿತರಾಗಿರುವುದು ವಿಶೇಷ. ಜೊಕೊವಿ ಎಂದು ಜನಪ್ರಿಯರಾಗಿರುವ ಅವರು ಜಾವಾ ಪ್ರಾಂತ್ಯದ ಸುರಕರ್ತಾ ಎಂಬ ಪಟ್ಟಣದ ಸ್ಲಂ ಪ್ರದೇಶದಲ್ಲಿ ಹುಟ್ಟಿ ಬಡಗಿಯಾಗಿ ತಮ್ಮ ಜೀವನ ಆರಂಭಿಸಿ, ಆ ಮೇಲೆ ಫರ್ನಿಚರ್ ರಫ್ತುದಾರರಾಗಿ ಬೆಳೆದಿದ್ದರು. ಮಾತ್ರವಲ್ಲ, ಅವರು ಸ್ಥಳೀಯ ರಾಜಕಾರಣ ಪ್ರವೇಶಿಸಿ ಹಂತ ಹಂತವಾಗಿ ಮೇಲೆ



ಬಂದವರು. ತಮ್ಮ ಪಟ್ಟಣದ ಮೇಯರ್ ಆಗಿ ಅವರು ಎರಡು ಬಾರಿ ಆಯ್ಕೆಯಾಗಿದ್ದು, ಜಾವಾ ಪ್ರಾಂತ್ಯದ ಗವರ್ನರ್ ಆದ ನಂತರವೇ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದು ಇನ್ನೊಂದು ವಿಶೇಷ.

'ಚೀನಿಯ ಮಗ', 'ಕಮ್ಯುನಿಸ್ಟ್' ಎಂಬ ಅಪಪ್ರಚಾರ

ಜೊಕೊವಿ ಶೇ. 53 ಮತ ಗಳಿಸಿದ್ದು, ಅವರು ಪ್ರಚಾರ ಆರಂಭಿಸಿದಾಗ ಚುನಾವಣಾ ಸಮೀಕ್ಷೆಗಳು ಶೇ. 20 ಮತಗಳ ಅಂತರದಲ್ಲಿ ಗೆಲ್ಲುತ್ತಾರೆ ಎಂದು ಹೇಳಿದ್ದವು. ಅವರ ವಿರೋಧಿ ಅಭ್ಯರ್ಥಿಗಳು ಜೊಕೊವಿ ವಿರುದ್ಧ ಭಾರೀ ಬಿರುಸಿನ ಅಪಪ್ರಚಾರ ಕೈಗೊಂಡು ಅಂತಹ ಭಾರೀ ಅಂತರ ತಪ್ಪಿಸಿದವು. ಅವರನ್ನು ಚೀನೀ ಮೂಲದ ತಂದೆ ಇದ್ದವರು (ಚೀನಿ ಮೂಲದ ಅಲ್ಪಸಂಖ್ಯಾತರು ವ್ಯಾಪಾರಿಗಳಾಗಿದ್ದು ಜನ ಅವರನ್ನು ಸಂಶಯದಿಂದ ನೋಡುತ್ತಾರೆ), ಕಮ್ಯುನಿಸ್ಟ್ ಒಲವು ಇರುವವರು ಎಂದೆಲ್ಲಾ 'ಅಪಪ್ರಚಾರ' ಮಾಡಲಾಯಿತು. ಇವರೆರಡೂ ಆ ದೇಶದಲ್ಲಿ 'ಅತ್ಯಂತ ಹೀನ ಬೈಗಳಿಗೆ' ಸಮಾನ ಎಂದು ಪರಿಗಣಿಸಲಾಗುತ್ತದೆ ಎಂದು ಗಮನಿಸಬೇಕು. 1965ರ ಸುಹಾರ್ತೊ ಮಿಲಿಟರಿ ಕ್ಷಿಪ್ರಕ್ರಾಂತಿಯ ನಂತರದ ಸಮಯದಿಂದ ಈಗಿನವರೆಗೂ ಕಮ್ಯುನಿಸ್ಟ್ ಪಕ್ಷ ನಿಷೇಧಿತವಾಗಿದೆ. 1966ರ ಹೊತ್ತಿಗೆ ಸುಮಾರು 5 ಲಕ್ಷ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಮತ್ತು ಕಾರ್ಯಕರ್ತರನ್ನು ಕಗ್ಗೊಲೆ ಮಾಡಲಾಯಿತು. 1965ರ ನಂತರ ಬಂದ ಕಾನೂನು ಪ್ರಕಾರ ಕಮ್ಯುನಿಸ್ಟರ ಜತೆ ಕುಟುಂಬ ಸಾಮಾಜಿಕ ಸಂಬಂಧ ಇರುವವರು ಯಾವುದೆ ಸರಕಾರದ ಹುದ್ದೆ, ಅನುದಾನ, ಸವಲತ್ತುಗಳಿಗೆ ಅರ್ಹರಲ್ಲ. ಇಂತಹ ಎಲ್ಲಾ ಅವಕಾಶ/ಸಂದರ್ಭಗಳಲ್ಲಿ ಪ್ರತಿ ಅಭ್ಯರ್ಥಿ ಇಂತಹ ಯಾವುದೇ ಸಂಬಂಧ ಇಲ್ಲ ಎಂದು ಮುಚ್ಚಳಿಕೆ ಬರೆದು ಕೊಡಬೇಕು.

ಜೊಕೊವಿ ಅವರಿಗೆ ಮುಖ್ಯ ಪ್ರತಿಸ್ಪರ್ಧಿಯಾಗಿದ್ದದ್ದು ಕುಖ್ಯಾತ ಸರ್ವಾಧಿಕಾರಿ ಜನರಲ್ ಸುಹಾರ್ತೊ ಅಳಿಯ ಮತ್ತು ದೊಡ್ಡಉದ್ಯಮಿ ಪ್ರಬೊವೊ ಸುಬಿಯಾಂತೊ. ಪ್ರಬೊವೊ ಸುಹಾರ್ತೊ ಆಡಳಿತಾವಧಿಯಲ್ಲಿ ಮಿಲಿಟರಿ ನಾಯಕನಾಗಿ, ಪೂರ್ವತೈಮೂರಿನಲ್ಲಿ ಮತ್ತು ಪ್ರಜಾಪ್ರಭುತ್ವ ಚಳುವಳಿಯ ಸಾವಿರಾರು ರಾಜಕೀಯ ಕಾರ್ಯಕರ್ತರ ಮೇಲೆ ಹಿಂಸಾಚಾರದ ಮತ್ತು ಗಂಭೀರ ಸ್ವರೂಪದ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪ ಹೊತ್ತವನು. ಹಲವಾರು ಭ್ರಷ್ಟಾಚಾರ ಹಗರಣಗಳ ಆರೋಪ ಸಹ ಆತನ ಮೇಲೆ ಇದೆ. ಶೇ. 47 ಮತ ಪಡೆದು 80 ಲಕ್ಷದ ಮತಗಳ ಅಂತರವಿದ್ದರೂ ಚುನಾವಣಾ ಫಲಿತಾಂಶ ಒಪ್ಪಿಕೊಳ್ಳದೇ ಚುನಾವಣಾ ಕಮಿಶನಿನ ಮುಂದೆ ದೂರುಗಳ ಸುರಿಮಳೆಗೈದಿದ್ದ. ಬೀದಿ ರಂಪಾಟ ನಡೆಸಿದ್ದ. ಇಬ್ಬರೂ ಅಭ್ಯರ್ಥಿಗಳ ಬೀದಿ ಕಾಳಗ ಆಗುವ ಲಕ್ಷಣಗಳಿದ್ದವು.

'ಬದಲಾವಣೆಯ ಪರ್ವ'

ದೇಶದ ಹಲವು ಉದ್ಯಮಿಗಳು ಮತ್ತು ಕಾರ್ಪೊರೇಟ್‌ಗಳು ಮತ್ತು ಅವುಗಳ ಬೆಂಬಲದ ಮಾಧ್ಯಮಗಳು ಚುನಾವಣೆಯ ಸಮಯದಲ್ಲೂ ಮತ್ತು ನಂತರವೂ ಪ್ರಬೊವೊ ಪರ ಅಭಿಪ್ರಾಯ ರೂಪುಗೊಳ್ಳುವಂತೆ ಪ್ರಯತ್ನಿಸಿದರು. ಆದರೆ ಪ್ರಸ್ತುತ ಅಧ್ಯಕ್ಷ ಯುಧೊಯೊನೊ ಅವರೇ ಫಲಿತಾಂಶವನ್ನು ಶಾಂತಿಯುತವಾಗಿ ಒಪ್ಪಿಕೊಳ್ಳುವಂತೆ ಮನವಿ ಮಾಡಿದ್ದರು. ಪ್ರಬೊವೊ ಬೆನ್ನಿಗೆ ಸುಹಾರ್ತೊ ಆಡಳಿತಾವಧಿಯಲ್ಲಿ ಶಾಶ್ವತ ಆಳುವ ಪಕ್ಷವಾಗಿದ್ದ ಗೋಲ್ಕರ್ ಪಕ್ಷ ಇತ್ತು. ಜೊಕೊವಿ ಅವರನ್ನು ಸುಕಾರ್ನೊ ಪುತ್ರಿಯವರ ನಾಯಕತ್ವದ ಮತ್ತು ಇನ್ನೊಂದು ಲಕ್ಷ ಬೆಂಬಲಿಸಿತ್ತು. ಚುನಾವಣಾ ಕಮಿಶನ್ ಪ್ರಬೊವೊ ದೂರುಗಳನ್ನು ಪರಿಶೀಲಿಸಿ ತಿರಸ್ಕರಿಸಿದೆ ಮತ್ತು ಚುನಾವಣಾ ಫಲಿತಾಂಶವನ್ನು ಘೋಷಿಸಿದೆ. ಆದರೂ ಪ್ರಬೊವೊ ಅದನ್ನು ಒಪ್ಪಿಕೊಂಡಿಲ್ಲ. ಚುನಾವಣಾ ಕಮಿಶನಿನ ನಿರ್ಧಾರವನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸುವುದಾಗಿ ಹೇಳಿದ್ದಾರೆ.ಆದರೆ ಈವರೆಗೆ ಚುನಾವಣಾ ಕಮಿಶನಿನ ನಿರ್ಧಾರವನ್ನು ಪ್ರಶ್ನಿಸಿದ ಅರ್ಜಿಗಳನ್ನು ಸುಪ್ರೀಂಕೋರ್ಟು ಯಾವತ್ತೂ ಮನ್ನಿಸಿಲ್ಲ. ಈ ಅರ್ಜಿಯನ್ನು ತಳ್ಳಿ ಹಾಕುವ ಸಾಧ್ಯತೆಯೇ ಹೆಚ್ಚು.

ಅಧ್ಯಕ್ಷರಾಗಿ ಜೊಕೊವಿ ಆಯ್ಕೆ ಅಧಿಕೃತವಾಗಿ ಘೋಷಣೆಯಾದ ಮೇಲೆ ಮಾತನಾಡುತ್ತಾ ಇಂಡೊನೇಶ್ಯಾದ ಚರಿತ್ರೆಯಲ್ಲಿ ಇದೊಂದು ಬದಲಾವಣೆಯ ಪರ್ವ ಎಂದು ಸಾರಿದ್ದಾರೆ. ಕುಲೀನ ಗಣ್ಯರ ಅಧಿಪತ್ಯ ಮುಗಿದಿದ್ದು ಜನರ ನಿಜವಾದ ಪ್ರತಿನಿಧಿಗಳ ಆಳ್ವಿಕೆ ಆರಂಭವಾಗಲಿದೆ. ಮಿಲಿಟರಿ ಸರ್ವಾಧಿಕಾರದ ಕಾಲದಿಂದಲೂ ಮುಂದುವರೆಯುತ್ತಿರುವ ಕೇಂದ್ರೀಕೃತ

ಪುಟ 15 ಕ್ಕೆ

ಸಿಪಿಐ(ಎಂ) 21ನೇ ರಾಜ್ಯ ಸಮ್ಮೇಳನಕ್ಕೆ

ಉತ್ತಮ ಲೋಗೋ, ಆಕರ್ಷಕ ಘೋಷಣೆಗಳಿಗೆ ಆಹ್ವಾನ

ಸಿಪಿಐ(ಎಂ) ರಾಜ್ಯ ಸಮ್ಮೇಳನವು 2015 ಜನವರಿ 8–11 ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ಅದಕ್ಕಾಗಿ ಒಂದು ಉತ್ತಮ ಲೋಗೋ ದೊಂದಿಗೆ ಪ್ರಚಾರ ಕಾರ್ಯ ಆರಂಭಿಸಬೇಕಾಗಿದೆ. ಆದ್ದರಿಂದ ಆಸಕ್ತಿ ಇರುವ ಸಂಗಾತಿಗಳು ಒಂದು ಉತ್ತಮ ಲೋಗೋ ರಚಿಸಿ ಕಳುಹಿಸಬೇಕಾಗಿ ವಿನಂತಿ. ಆಯ್ಕೆಯಾದ ಉತ್ತಮ ಲೋಗೋ ರಚಿಸಿದ ಸಂಗಾತಿಗೆ ಸಮ್ಮೇಳನದ ಸಂದರ್ಭದಲ್ಲಿ ಪುರಸ್ಕಾರ ಉಂಟು. ಲೋಗೋದೊಂದಿಗೆ ಉತ್ತಮ ಪೋಸ್ಟರ್ ಹಾಗೂ ಸ್ಟಿಕ್ಕರ್ ಡಿಸೈನ್‌ಗಳನ್ನು ಕೂಡಾ ಮಾಡಿಕೊಡಬಹುದು.

ಹಾಗೆಯೇ ಸಿಪಿಐ(ಎಂ) ಚಳುವಳಿಯನ್ನು ಆಧಾರವಾಗಿಟ್ಟುಕೊಂಡು ಕೆಲವು ಆಕರ್ಷಕ ಘೋಷಣೆಗಳನ್ನು ಕೂಡಾ ಅಹ್ವಾನಿಸಲಾಗಿದೆ. ಸಂಗಾತಿಗಳು ಈ ಬಗ್ಗೆ ಆಸಕ್ತಿ ವಹಿಸಿ ಘೋಷಣೆಗಳನ್ನು ಸೂಚಿಸಬೇಕಾಗಿ ವಿನಂತಿ.

ಇದು ನಮಗೆ ಸೆಪ್ಟೆಂಬರ್ 30, 2014 ರ ಒಳಗೆ ತಲುಪಿಸಬೇಕಾಗಿ ವಿನಂತಿ.

ನಮ್ಮ ಇ–ಮೇಲ್ ವಿಳಾಸ:
kriyaprakashana@gmail.com
kriyaramu@gmail.com

CPI(M)

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**